ಬೆಂಗಳೂರು

ರಾಷ್ಟ್ರ ಜಾಗೃತಿಯ ದೈನಿಕ

ಶುಕ್ರವಾರ, 27 ಮಾರ್ಚ್ 2026

ಸಂಪುಟ 33, ಸಂಚಿಕೆ 145, ಪುಟಗಳು 14+4

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

RNI: 58231/94
REG No.KA/BG GPO/2532/2021-23

hosadigantha.com
epaper.hosadigantha.com
Hosadigantha Digital

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಅಲ್-ಖೈದಾ ನಂಟು: 12 ಮಂದಿ ಸೆರೆ | ೧೦

ಶ್ರೀರಾಮನೆಂದರೆ ಅಮಿತಾನಂದಸ್ವರೂಪೀ | ವಿಶೇಷ ಪುಟ ೫

ಶ್ರೀರಾಮನವಮಿ ಹಬ್ಬದ ಶುಭಾಶಯ

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ಪುನರ್ವಸು

ದಿನದ ಮಾತು

ಅಹಂಕಾರವೇ ಎಲ್ಲಾ ಸದ್ಗುಣಗಳ ಅತಿ ಪ್ರಬಲ ವೈರಿ. ಆತ್ಮ ವಿಶ್ವಾಸದ ಹೆಸರಿನಲ್ಲಿ ಸ್ವಪ್ರತಿಷ್ಠೆ ಬೆಳೆಸಬಾರದು.

▲ ಶ್ರೀ ಗುರೂಜಿ

ಧುರಂಧರ: ಸಂಭಾಷಣೆ ಮತ್ತು ಬಲೂಚ್ ಪ್ರಶ್ನೆ!

ಉಘೇ ವೀರ ಭೂಮಿಗೆ

• ಸಂತೋಷ್ ತಮ್ಮಯ್ಯ

• ಪುಟ ೬

ಕಿರುಸುದ್ದಿ

ಜಿಬಿಎ ಚೊಚ್ಚಲ ಬಜೆಟ್ ಇಂದು, ನಾಳೆ ಮಂಡನೆ

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರದ 2026-27ನೇ ಸಾಲಿನ ಚೊಚ್ಚಲ ಆಯ-ವ್ಯಯವನ್ನು ಮಾ.27 ಹಾಗೂ 28ರಂದು ಮಂಡನೆಯಾಗಲಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ ನಗರ ಪಾಲಿಕೆಯಾಗಿ ರಚನೆಯಾದ ನಂತರ ಮೊದಲ ಬಾರಿಗೆ ಪಂಚ ಪಾಲಿಕೆಗಳ ಬಜೆಟ್ ಮಂಡನೆಯನ್ನು ಮಾಡಲಾಗುತ್ತದೆ. ಇದಕ್ಕಾಗಿ ಅಧಿಕಾರಿಗಳು ಸಕಲ ಸಿದ್ಧತೆಯನ್ನು ಮಾಡಿಕೊಂಡಿದ್ದಾರೆ. ಮಾ.27ರಂದು ಬೆಳಗ್ಗೆ 9:30ಕ್ಕೆ ವೈಟ್‌ಫೀಲ್ಡ್‌ನ ಎಂ.ಎಲ್.ಆರ್ ಕನ್ವೆನ್ಷನ್ ಸೆಂಟರ್‌ನಲ್ಲಿ ಪೂರ್ವ ನಗರ ಪಾಲಿಕೆ, ಮ.12:30ಕ್ಕೆ ಟೌನ್ ಹಾಲ್‌ನಲ್ಲಿ ಕೇಂದ್ರ ನಗರ ಪಾಲಿಕೆ ಬಜೆಟ್ ಮಂಡನೆಯಾಗಲಿದೆ. ಮಾ.28ರಂದು ಬೆಳಗ್ಗೆ 9:30ಕ್ಕೆ ಯಲಹಂಕ ನ್ಯೂ ಟೌನ್ ಅಂಬೇಡ್ಕರ್ ಭವನದಲ್ಲಿ ಉತ್ತರ ನಗರ ಪಾಲಿಕೆ, ಮ.12:30ಕ್ಕೆ ಮಲ್ಲೇಶ್ವರದ ಐಪಿಪಿ ಸೆಂಟರ್‌ನಲ್ಲಿ ಪಶ್ಚಿಮ ನಗರ ಪಾಲಿಕೆ ಬಜೆಟ್, ಮ.2:30ಕ್ಕೆ ಜಿಲ್ಲಾ ಪಂಚಾಯಿತಿ ಸಭಾಂಗಣ, ಬನಶಂಕರಿ ದೇವಾಸ್ಥಾನ ಹತ್ತಿರ, ದಕ್ಷಿಣ ನಗರ ಪಾಲಿಕೆ ಬಜೆಟ್ ಮಂಡನೆಯಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.





ರಾಮನವಮಿ ಹಿನ್ನೆಲೆ ಕಲಬುರಗಿ ನಗರದಲ್ಲಿ 15 ಅಡಿ ಎತ್ತರದ ಮರ್ಯಾದಾ ಪುರುಷೋತ್ತಮ ಪ್ರಭು ಶ್ರೀರಾಮನ ಅದ್ದೂರಿ ಶೋಭಾಯಾತ್ರೆ ಜರುಗಿತು. 2 ಲಕ್ಷಕ್ಕೂ ಅಧಿಕ ರಾಮ ಭಕ್ತರು ಶೋಭಾಯಾತ್ರೆಗೆ ಸಾಕ್ಷಿಯಾದರು.

ಲಕ್ಷಾಂತರ ರಾಮಭಕ್ತರ ಜೈ ಘೋಷ

ಕಲಬುರಗಿಯಲ್ಲಿ ಶ್ರೀರಾಮನ ಅದ್ದೂರಿ ಶೋಭಾಯಾತ್ರೆ

• **ಕಲಬುರಗಿ:** ರಾಮನವಮಿ ಅಂಗವಾಗಿ ಬಿಸಿಲು ನಾಡಾದ ಕಲಬುರಗಿಯಲ್ಲಿ ಮರ್ಯಾದಾ ಪುರುಷೋತ್ತಮ ಪ್ರಭು ಶ್ರೀರಾಮನ 15 ಅಡಿ ಎತ್ತರದ ಮೂರ್ತಿಯ ಅದ್ದೂರಿ ಮೆರವಣಿಗೆಯೂ ಗುರುವಾರ ಲಕ್ಷಾಂತರ ರಾಮಭಕ್ತರ ಜೈ ಘೋಷಗಳ ಮಧ್ಯೆ ವೈಭವಮಯವಾಗಿ ನಡೆಯಿತು.

ನಗರದ ಹೊರವಲಯದ ಚೆಕ್‌ಪೋಸ್ಟ್ ಬಳಿಯ ರಾಮತೀರ್ಥ ಮಂದಿರದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಶರಣಬಸವೇಶ್ವರರ ಸಂಸ್ಥಾನದ 9ನೇ ಪೀಠಾಧಿಪತಿ ದೊಡ್ಡಪ್ಪ ಅಪ್ಪ, ಪಾಳಾದ ಗುರುಮೂರ್ತಿ ಶಿವಾಚಾರ್ಯರು ಸೇರಿದಂತೆ ಜಿಲ್ಲೆಯ ವಿವಿಧ ಮಠಾಧೀಶರ ನೇತೃತ್ವದಲ್ಲಿ ಅದ್ದೂರಿ ಶೋಭಾಯಾತ್ರೆಗೆ ಚಾಲನೆ ನೀಡಿದ್ದು, ಚೆಕ್ ಪೋಸ್ಟ್‌ನಿಂದ ಹೊರಟ ಶೋಭಾಯಾತ್ರೆ, ದೇವಿ ನಗರ, ಖಾದ್ರಿ ಚೌಕ್, ಶೆಟ್ಟಿ ಟಾಕೀಸ್, ಸೂಪರ್ ಮಾರ್ಕೆಟ್, ಜನತಾ ಬಜಾರ್, ಸಿಟಿ ಸೆಂಟರ್ ಮಾಲ್ ಮುಖಾಂತರ ನಗರದ ಜಗತ್ ವೃತ್ತದಲ್ಲಿ ಸಂಪನ್ನಗೊಂಡಿತು. ಶೋಭಾಯಾತ್ರೆಯ ಮಾರ್ಗದುದ್ದಕ್ಕೂ ರಾಮ ಭಕ್ತರಿಗಾಗಿ ವಿವಿಧ ಸಂಘ ಸಂಸ್ಥೆಗಳು, ಉದ್ಯಮಿಗಳಿಂದ ಪ್ರಸಾದ, ತಂಪು ಪಾನೀಯ ವ್ಯವಸ್ಥೆ ಮಾಡಲಾಗಿತ್ತು. ನಗರದ ಚೆಕ್ ಪೋಸ್ಟ್ ನಿಂದ ರಾಮನವಮಿ ಉತ್ಸವ ಸಮಿತಿ ಹಾಗೂ ಮಹೇಶ್ ಗೊಬ್ಬೂರ ನೇತೃತ್ವದ ಆದಿ ಪುರುಷ ರಾಮನವಮಿ ಉತ್ಸವ ಸಮಿತಿಯ ಎರಡು ಶೋಭಾಯಾತ್ರೆ ಹೊರಟರೇ, ರಾಮಮಂದಿರದಿಂದ ಇನ್ನೊಂದು ಶೋಭಾಯಾತ್ರೆ ಜರುಗಿತು. ಶೋಭಾಯಾತ್ರೆಯಲ್ಲಿ 2 ಲಕ್ಷಕ್ಕೂ ಅಧಿಕ ರಾಮ ಭಕ್ತರು ಪಾಲ್ಗೊಂಡು, ಭಕ್ತಿಯ ಜ್ವಾಲೆಯಲ್ಲಿ ಮಿಂದೆದ್ದರು. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ. ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಮುಖ್ಯಮಂತ್ರಿಗಳ ಜತೆ ಇಂದು ಮೋದಿ ಸಭೆ

ಸನ್ನದ್ಧತೆ ಪರಾಮರ್ಶೆ



• **ಹೊಸದಿಲ್ಲಿ:** ಮಧ್ಯಪ್ರಾಚ್ಯ ಸಂಘರ್ಷ ಹಿನ್ನೆಲೆಯಲ್ಲಿ ರಾಜ್ಯಗಳ ಸನ್ನದ್ಧತೆ ಮತ್ತು ಯೋಜನೆಗಳನ್ನು ಪರಿಶೀಲಿಸಲು ಪ್ರಧಾನಿ ನರೇಂದ್ರ ಮೋದಿಯವರು ಶುಕ್ರವಾರ ಚುನಾವಣೆ ಎದುರಿಸಲಿರುವ ರಾಜ್ಯಗಳ ಹೊರತುಪಡಿಸಿ, ಉಳಿದೆಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ಸಂವಾದ ನಡೆಸಲಿದ್ದಾರೆ. ಟೀಮ್ ಇಂಡಿಯಾ ಸ್ಫೂರ್ತಿಯಲ್ಲಿ ಸಂಘಟಿತ ಪ್ರಯತ್ನಗಳನ್ನು ಉತ್ತೇಜಿಸುವುದು ಪ್ರಸ್ತುತ ಸಂವಾದದ ಮೂಲಾಶಯವೆಂದು ಮೂಲಗಳು ತಿಳಿಸಿವೆ.

ಪ. ಏಷ್ಯಾ ಸಂಘರ್ಷ ಹಿನ್ನೆಲೆಯಲ್ಲಿ ಇಂಧನ, ಆಹಾರ ಮತ್ತು ಭದ್ರತೆ ಕುರಿತು ರಾಜ್ಯಗಳ ಸನ್ನದ್ಧತೆಗಳಿಗೆ ಸಂಬಂಧಿಸಿ ಪ್ರಧಾನಿ ಮೋದಿಯವರು ಶುಕ್ರವಾರ ಸಂಜೆ ವಿಡಿಯೊ ಕಾನ್ಫರೆನ್ಸಿಂಗ್ ಮುಖೇನ ವಿವಿಧ ರಾಜ್ಯಗಳ ಸಿಎಂಗಳ ಜತೆ ಸಂವಾದ ನಡೆಸುವರು. ಚುನಾವಣಾ ನೀತಿ ಸಂಹಿತೆ ಕಾರಣ, ಚುನಾವಣಾ ಹೊಸ್ತಿಲಲ್ಲಿರುವ ರಾಜ್ಯಗಳು ಈ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದಿಲ್ಲ.



ಮಧ್ಯಪ್ರಾಚ್ಯ ಸಮರಾಂಗಣ

ಇದು ಮೊದಲ ಸಭೆ: ಫೆ.28 ರಂದು ಶುರುವಾಗಿರುವ ಪ. ಏಷ್ಯಾ ಸಂಘರ್ಷಕ್ಕೆ ಸಂಬಂಧಿಸಿ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ಪ್ರಧಾನಿ ಮೋದಿ ಸಂವಾದ ನಡೆಸುತ್ತಿರುವುದು ಇದು ಮೊದಲು. ಸಂಪುಟ ಸಚಿವಾಲಯವು ಚುನಾವಣೆಗೆ ಸಜ್ಜಾಗಿರುವ ತಮಿಳುನಾಡು, ಪಶ್ಚಿಮ ಬಂಗಾಳ, ಕೇರಳ, ಅಸ್ಸಾಂ, ಕೇಂದ್ರಾಡಳಿತ ಪ್ರದೇಶ ಪುದುಚೇರಿಯ ಮುಖ್ಯ ಕಾರ್ಯದರ್ಶಿಗಳ ಜತೆ ಪ್ರತ್ಯೇಕ ಸಭೆ ನಡೆಸಲಿದೆ. ➡ಪುಟ 9

ದೇಶದಲ್ಲಿ ಭದ್ರತಾ ಸಂಸ್ಥೆಗಳು ಸನ್ನದ್ಧ ಸ್ಥಿತಿಯಲ್ಲಿ: ಪ್ರಧಾನಿ

ಕೆಲವು ಶಕ್ತಿಗಳು ಇಂತಹ ಸನ್ನಿವೇಶಗಳ ದುರ್ಲಾಭ ಪಡೆಯಲೆತ್ನಿಸುವ ಆತಂಕವಿದೆ ಎಂದು ಪ.ಏಷ್ಯಾ ಬಿಕ್ಕಟ್ಟು ಸೃಜಿಸಲಿರುವ ಆಂತರಿಕ ಭದ್ರತಾ ಆಯಾಮ ಗಳತ್ತ ಪ್ರಧಾನಿ ಗಮನ ಸೆಳೆದಿದ್ದರು. ಈ ಹಿನ್ನೆಲೆಯಲ್ಲಿ ದೇಶದ ಎಲ್ಲಾ ಭದ್ರತಾ ಸಂಸ್ಥೆಗಳನ್ನು ಸನ್ನದ್ಧ ಸ್ಥಿತಿಯಲ್ಲಿರಿಸಲಾಗಿದೆ ಮತ್ತು ಕರಾವಳಿ, ಗಡಿ, ಸೈಬರ್, ಪ್ರಮುಖ ಹಾಹತ್ವ ನೆಲೆಗಳ ಸಹಿತ ಎಲ್ಲಾ ರಂಗಗಳಲ್ಲೂ ಭದ್ರತೆಯನ್ನು ಮತ್ತಷ್ಟು ಬಲಪಡಿಸಲಾಗಿದೆ. ➡ಪುಟ 9

- ಭಾರತ ಸೇರಿ 5 ದೇಶಕ್ಕೆ ಹಾರ್ಮುಜ್ ಮುಕ್ತ ಎಂದ ಇರಾನ್
- ಯುದ್ಧ ತೀವ್ರಗೊಳಿಸಿದರೆ ಬಾಬ್ ಜಲಸಂಧಿ ಬಂದ್: ಇರಾನ್ ಎಚ್ಚರಿಕೆ
- ಭಾರತದಲ್ಲಿ 2 ತಿಂಗಳಿಗಾಗುವಷ್ಟು ಇಂಧನ ದಾಸ್ತಾನು: ಕೇಂದ್ರ
- ಅಬುಧಾಬಿಯಲ್ಲಿ ಭಾರತೀಯ ಸಾವು
- ಹಾರ್ಮುಜ್ ಮುಚ್ಚಿಸಿದ್ದ ಇರಾನ್ ನೌಕಾಪಡೆ ಮುಖ್ಯಸ್ಥನ ಹತ್ಯೆಗೈದ ಇಸ್ರೇಲ್

ಅನಗತ್ಯವಾಗಿ ಎಲ್‌ಪಿಜಿ ಖರೀದಿಸಬೇಡಿ: ಸಚಿವ

• **ಬೆಂಗಳೂರು:** ರಾಜ್ಯದಲ್ಲಿ ಅಭಾವ ಸಂದರ್ಭದಲ್ಲಿ ಅನಗತ್ಯವಾಗಿ ಎಲ್‌ಪಿಜಿ ಸಿಲಿಂಡರ್ ಖರೀದಿ ಮಾಡಬೇಡಿ. ಅನಿಲವನ್ನು ಮಿತವಾಗಿ ಬಳಕೆ ಮಾಡಿ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.



ಗುರುವಾರ ಮಾಧ್ಯಮಗಳ ಜತೆ ಮಾತನಾಡಿದ ಅವರು, ಗ್ರಾಹಕರು ಗ್ಯಾಸ್ ಏಜೆನ್ಸಿ ಹತ್ತಿರ ಹೋಗಿ ಸರತಿ ನಿಲ್ಲುವುದು ಬೇಡ. ➡ಪುಟ 9

ರಾಜ್ಯದ ಹಿತ ಕಾಪಾಡಿದ್ದರಿಂದ 17ನೇ ಬಜೆಟ್ ಮಂಡಿಸಿದೆ: ಸಿಎಂ

ಜನ, ಶಾಸಕರ ಆಶೀರ್ವಾದ ನನಗಿದೆ

• **ವಿಧಾನ ಪರಿಷತ್:** 1994-95ರಲ್ಲಿ ಐದು ವರ್ಷ ಹಣಕಾಸು ಮಂತ್ರಿ ಆಗಿದ್ದೆ, ಧರಂಸಿಂಗ್ ಮುಖ್ಯಮಂತ್ರಿ ಆಗಿದ್ದಾಗ ಹಣಕಾಸು ಸಚಿವನಾಗಿದ್ದೆ, ಮುಖ್ಯಮಂತ್ರಿ ಆದ ಬಳಿಕವೂ ಹಣಕಾಸು ಮಂತ್ರಿಯಾಗಿದ್ದೇನೆ. ನಾನು ರಾಜ್ಯದ ಜನರ ಹಿತ ಕಾಪಾಡುವ ಕೆಲಸ ಮಾಡದೇ ಇದ್ದರೆ ಹಣಕಾಸು ಮಂತ್ರಿ ಆಗಲು ಸಾಧ್ಯವೇ ಇರಲಿಲ್ಲ, ಕರ್ನಾಟಕದಲ್ಲಿ 17 ಬಜೆಟ್ ಮಂಡಿಸಿದ್ದು ಇತಿಹಾಸ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಮರ್ಥಿಸಿಕೊಂಡರು.

ಬಜೆಟ್ ಮೇಲಿನ ಚರ್ಚೆಗೆ ಮೇಲ್ಮನೆಯಲ್ಲಿ ಸುದೀರ್ಘವಾಗಿ ಉತ್ತರಿಸಿದ ಅವರು, ಇಷ್ಟು ಅವಕಾಶ ಸಿಗಬೇಕಾದರೆ ಜನತೆಯ ಆಶೀರ್ವಾದ, ಶಾಸಕರ ಆಶೀರ್ವಾದ, ಹೈಕಮಾಂಡ್‌ನ ವಿಶ್ವಾಸ ಇದೆ. ಇಲ್ಲದಿದ್ದರೆ ಇಷ್ಟೊಂದು ಬಾರಿ ನನ್ನನ್ನು ಏಕೆ ಹಣಕಾಸು ಮಂತ್ರಿ ಮಾಡುತ್ತಿದ್ದರು. ಯಾರೇ,. ಯಾವುದೇ, ಟೀಕೆ ಮಾಡಿದರೂ ಟೀಕೆಗಳು ಸಕಾರವಾಗಿರಬೇಕು. ನಿಮ್ಮ ಟೀಕೆಗಳನ್ನು ಸ್ವಾಗತಿಸುತ್ತೇನೆ ಎಂದರು. ➡ಪುಟ 9



ವಿದೇಶ ಪ್ರಯಾಣ ದುಂದು ವೆಚ್ಚವಲ್ಲವೇ?

ವಿಮಾನಯಾನ ಪ್ರಯಾಣ, ಹೆಲಿಕಾಪ್ಟರ್ ಪ್ರಯಾಣಕ್ಕೆ ದುಂದುವೆಚ್ಚ ಮಾಡಿರುವುದಾಗಿ ಪ್ರತಿಪಕ್ಷ ನಾಯಕರು ಆರೋಪಿಸಿದ್ದಾರೆ. ನಾನು 2023 ರಿಂದ ಈವರೆಗೂ ಮಾಡಿರುವ ಖರ್ಚು 12 ಕೋಟಿ ರೂ. ಉಳಿದ 2 ವರ್ಷಗಳಲ್ಲಿ ತಲಾ ₹21 ಕೋಟಿ ಮಾಡಿದ್ದೇನೆ. ➡ಪುಟ 9

ಉಪ ಸಮರ ಹಿನ್ನೆಲೆ ವಿಶೇಷ ಸಂಪುಟ ಸಭೆ ಮುಂದೂಡಿಕೆ

ಪರಿಶಿಷ್ಟರ ಒಳ ಮೀಸಲು ಸದ್ಯಕ್ಕಿಲ್ಲ

• **ಬೆಂಗಳೂರು:** ರಾಜ್ಯದಲ್ಲಿ ಅತ್ಯಂತ ಸೂಕ್ಷ್ಮ ವಿಚಾರವಾಗಿರುವ ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಕಲ್ಪಿಸುವ ಕುರಿತು ಚರ್ಚಿಸಲು ಕರೆಯಲಾಗಿದ್ದ ವಿಶೇಷ ಸಚಿವ ಸಂಪುಟ ಸಭೆಯನ್ನು ರಾಜ್ಯ ಸರ್ಕಾರವು ದಿಢೀರ್ ಮುಂದೂಡಿದೆ. ಶುಕ್ರವಾರ (ಮಾ.27) ಮಧ್ಯಾಹ್ನ 12 ಗಂಟೆಗೆ ನಿಗದಿಯಾಗಿದ್ದ ಮಹತ್ವದ ಸಚಿವ ಸಂಪುಟದ ವಿಶೇಷ ಸಭೆಯು, ರಾಜ್ಯದ 2 ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯ ನೀತಿ ಸಂಹಿತೆಯ ಕಾರಣಕ್ಕೆ ಮುಂದೂಡಿದೆ.



ಸಿಎಂ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡ ತೀರ್ಮಾನಗಳ ಬಗ್ಗೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್ ತಿಳಿಸಿದರು. ಎರಡು ವಿಧಾನಸಭಾ ಕ್ಷೇತ್ರಗಳಲ್ಲಿ ಉಪ ಚುನಾವಣೆ ಮಾದರಿ ನೀತಿ ಸಂಹಿತೆ ಅನ್ವಯದ ಕುರಿತು ಸಂಪುಟಕ್ಕೆ ಮಾಹಿತಿ ಕೊಡಲಾಯಿತು. ➡ಪುಟ 9

ವಿಧೇಯಕಗಳಿಗೆ ಘಟನೋತ್ತರ ಅನುಮೋದನೆ

ವಿಧಾನ ಮಂಡಲದಲ್ಲಿ ಮಂಡನೆಯಾಗಿ ಅಂಗೀಕೃತಗೊಂಡಿರುವ ಮೂರು ವಿಧೇಯಕಗಳಿಗೆ ಸಚಿವ ಸಂಪುಟ ಸಭೆಯು ಘಟನೋತ್ತರ ಅನುಮೋದನೆ ನೀಡಿದೆ. ಕರ್ನಾಟಕ ಸರ್ಕಾರಿ ಕೈಗಾರಿಕೆ ಸಂಸ್ಥೆಯ ಭೂಮಿಗಳ (ರಕ್ಷಣೆ ಮತ್ತು ಸ್ವಾಧೀನ) ವಿಧೇಯಕ, 2026 ಮತ್ತು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2026 ಹಾಗೂ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧಾರಣೆ (ತಿದ್ದುಪಡಿ) ವಿಧೇಯಕ, 2026ಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು ಎಂದು ಸಚಿವ ಎಚ್.ಕೆ. ಪಾಟೀಲ್ ತಿಳಿಸಿದರು.

ಅಧಿವೇಶನದಲ್ಲೇ ಪಕ್ಷಾತೀತವಾಗಿ ಸದಸ್ಯರ ಮನವಿ

ಟಿಕೆಟ್‌ಗಾಗಿ ಶಾಸಕರ ಬೇಡಿಕೆ

ನಾಳೆಯಿಂದ ಐಪಿಎಲ್ ಪಂದ್ಯಗಳು ಆರಂಭ

• **ಬೆಂಗಳೂರು:** 2026ರ ಅವೃತ್ತಿಯ ಐಪಿಎಲ್ ಪಂದ್ಯಗಳು ಶನಿವಾರದಿಂದ ಆರಂಭವಾಗಲಿವೆ. ಮೊದಲ ಪಂದ್ಯ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿದೆ. ಇದರ ನಡುವೆಯೇ ಸದನದಲ್ಲೂ ಐಪಿಎಲ್ ಟಿಕೆಟ್ ಹವಾ ಜೋರಾಗಿದ್ದು, ಟಿಕೆಟ್‌ಗಾಗಿ ಬಿಜೆಪಿ ಶಾಸಕರು, ಕಾಂಗ್ರೆಸ್ ಶಾಸಕರು ಪಕ್ಷಾತೀತವಾಗಿ ಬೇಡಿಕೆ ಇಟ್ಟಿದ್ದಾರೆ. ಕೊನೆಗೆ ಸ್ಪೀಕರ್ ಪ್ರತಿಯೊಬ್ಬ ಶಾಸಕರಿಗೂ 4 ಟಿಕೆಟ್ ವ್ಯವಸ್ಥೆ ಮಾಡಿಸಲು ಸರ್ಕಾರಕ್ಕೆ ಸೂಚಿಸಿದರು.

ಈ ಬಗ್ಗೆ ಪ್ರತಿಪಕ್ಷ ನಾಯಕ ಆರ್. ಅಶೋಕ್ ಮಾತನಾಡಿ, ನಾವು ಒಂದು ಟಿಕೆಟ್‌ಗಾಗಿ ಅಂಗಲಾಚಬೇಕು. ನನ್ನ ಹೆಸರಲ್ಲೇ ಟಿಕೆಟ್ ಕಳುಹಿಸುತ್ತಾರೆ. ಅದರಲ್ಲಿ ನನ್ನ ಹೆಂಡತಿಯನ್ನೂ ಕಳುಹಿಸಲು ಆಗಲ್ಲ, ಮಗನನ್ನು ಕಳುಹಿಸಲೂ ಆಗಲ್ಲ ಎಂದರು. ಅಲ್ಲದೇ, ಕ್ರಿಕೆಟ್‌ನವರಿಗೆ ದುಡ್ಡಿನ ಕೊರತೆನಾ? ➡ಪುಟ 9

ಅಧ್ಯಾಪಕನಿಗೆ ಧರ್ಮದೇಟು

ವೈದ್ಯ ವಿದ್ಯಾರ್ಥಿನಿಗೆ ಪ್ರಪೋಸ್ ಮಾಡಿದ ಆಟ್ಟೋಲ್ ಬಂಧನ



• **ನೆಲಮಂಗಲ:** ಗೃಹ ಸಚಿವ ಡಾ.ಪರಮೇಶ್ವರ್ ಒಡೆತನದ ಸಿದ್ಧಾರ್ಥ ವೈದ್ಯಕೀಯ ಕಾಲೇಜಿನಲ್ಲಿ ಬುಧವಾರ ಮಧ್ಯಾಹ್ನ ಹೈಡ್ರಾಮಾ ನಡೆದಿದೆ. ತರಗತಿಯಲ್ಲೇ ವೈದ್ಯ ವಿದ್ಯಾರ್ಥಿನಿಯೊಬ್ಬಳಿಗೆ ಚಾಕಲೇಟ್ ನೀಡಿ ಪ್ರಪೋಸ್ ಮಾಡಲು ಯತ್ನಿಸಿದ ಉಪನ್ಯಾಸಕನಿಗೆ ವಿದ್ಯಾರ್ಥಿಗಳು ಹಿಗ್ಗಾಮುಗ್ಗ ಥಳಿಸಿದ್ದಾರೆ. ➡ಪುಟ 9

ಉಪಚುನಾವಣೆ: ಕಾಂಗ್ರೆಸ್ಸಿಗೆ ಬಂಡಾಯದ ಭೀತಿ

• **ದಾವಣಗೆರೆ:** ತೀವ್ರ ಕುತೂಹಲ ಮೂಡಿಸಿರುವ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣಾ ಕಣದಲ್ಲಿ ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿರುವ ಸಾದಿಕ್ ಪೈಲ್ವಾನ್ ಮನವೊಲಿಸಲು ಗುರುವಾರ ಪಕ್ಷದ ರಾಜ್ಯ ನಾಯಕರು ನಡೆಸಿದ ಹೈವೋಲ್ಟೇಜ್ ಸಂಧಾನ ಸಭೆ ವಿಫಲವಾಗಿದೆ. ಇದರೊಂದಿಗೆ ಸಾದಿಕ್ ಪೈಲ್ವಾನ್ ಕಣದಲ್ಲುಳಿಯುವುದು ಖಚಿತವಾಗಿದೆ. ಕಾಂಗ್ರೆಸ್ಸಿಗೆ ಬಂಡಾಯದ ಭೀತಿ ಎದುರಾಗಿದೆ.

ನಾಮಪತ್ರ ಹಿಂಪಡೆಯಲು ಗುರುವಾರ ಮಧ್ಯಾಹ್ನ 3 ಗಂಟೆವರೆಗೆ ಅವಕಾಶವಿತ್ತು. ಆದರೆ ಬೆಂಗಳೂರಿನಿಂದ ಕಾಂಗ್ರೆಸ್ ನಾಯಕರು ದಾವಣಗೆರೆ ಬರುವಷ್ಟರಲ್ಲಿ ಮಧ್ಯಾಹ್ನ 2.45 ಆಗಿತ್ತು. ಈ ವೇಳೆ ಸಾದಿಕ್ ಪೈಲ್ವಾನ್ ಮನೆ ಮುಂದೆ ಜಮಾಯಿಸಿದ್ದ ನೂರಾರು ಬೆಂಬಲಿಗರು ಕಾಂಗ್ರೆಸ್ ನಾಯಕರ ವಿರುದ್ಧ ಗೋ ಬ್ಯಾಕ್ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಇದಕ್ಕೂ ಮುನ್ನ ಸ್ಥಳೀಯ ಮುಖಂಡರು ನಾನಾ ರೀತಿಯಲ್ಲಿ ನಡೆಸಿದ್ದ ಸಂಧಾನ ಕೂಡ ವಿಫಲವಾಗಿದ್ದರಿಂದ ಬೆಂಗಳೂರಿನಿಂದ ಬಂದಿದ್ದ ಶಾಸಕ ರಿಜ್ವಾನ್ ಅರ್ಷದ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಮಹಮ್ಮದ್ ಸೇರಿದಂತೆ ಹಲವು ನಾಯಕರು ಸಾದಿಕ್ ಪೈಲ್ವಾನ್ ಜೊತೆ ಮಾತುಕತೆ ನಡೆಸಿದರೂ, ಸಂಧಾನ ಫಲ ನೀಡಲಿಲ್ಲ. ಯಾವುದೇ ಕಾರಣಕ್ಕೂ ನಾಮಪತ್ರ ವಾಪಸ್ ಪಡೆಯುವುದಿಲ್ಲ ಎಂದು ಸಾದಿಕ್ ಪೈಲ್ವಾನ್ ಸ್ಪಷ್ಟಪಡಿಸಿದ್ದಾರೆ.




ಅಂತಿಮ ಕಣದಲ್ಲಿ 25 ಮಂದಿ ಅಭ್ಯರ್ಥಿಗಳು: ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಉಮೇದುವಾರಿಕೆ ಸಲ್ಲಿಸಿದ್ದ 39 ಜನರ ಪೈಕಿ 11 ಅಭ್ಯರ್ಥಿಗಳು ಗುರುವಾರ ತಮ್ಮ ನಾಮಪತ್ರಗಳನ್ನು ವಾಪಸ್ಸು ಪಡೆದಿದ್ದು, ಪರಿಶೀಲನೆ ವೇಳೆ ಮೂವರ ನಾಮಪತ್ರಗಳು ಅಸಿಂಧುಗೊಂಡಿವೆ. ಚುನಾವಣೆಯ ಅಂತಿಮ ಕಣದಲ್ಲಿ 25 ಮಂದಿ ಅಭ್ಯರ್ಥಿಗಳು ಉಳಿದಿದ್ದಾರೆ. ಚುನಾವಣೆಗೆ ಒಟ್ಟು 39 ಅಭ್ಯರ್ಥಿಗಳು 45 ನಾಮಪತ್ರ ಸಲ್ಲಿಸಿದ್ದರು. ಇದರೊಂದಿಗೆ ಅಂತಿಮ ಕಣದಲ್ಲಿ 25 ಮಂದಿ ಉಳಿದಂತಾಗಿದೆ ಎಂದು ಚುನಾವಣಾಧಿಕಾರಿ ಸಂತೋಷ್ ಕುಮಾರ್ ತಿಳಿಸಿದ್ದಾರೆ.

ಬಾಗಲಕೋಟೆ: ಅಂತಿಮ ಕಣದಲ್ಲಿ 9 ಅಭ್ಯರ್ಥಿಗಳು

• **ಬಾಗಲಕೋಟೆ:** ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಗೆ ನಾಮಪತ್ರ ಹಿಂಪಡೆಯಲು ಕೊನೆಯ ದಿನವಾದ ಗುರುವಾರ 14 ಅಭ್ಯರ್ಥಿಗಳ ಪೈಕಿ 5 ಅಭ್ಯರ್ಥಿಗಳು ತಮ್ಮ ಉಮೇದುವಾರಿಕೆಯನ್ನು ಹಿಂಪಡೆದಿದ್ದು, ಅಂತಿಮವಾಗಿ ಚುನಾವಣಾ ಕಣದಲ್ಲಿ 9 ಅಭ್ಯರ್ಥಿಗಳು ಇದ್ದಾರೆಂದು ಚುನಾವಣಾಧಿಕಾರಿ ಸಂತೋಷ ಜಗಲಾಸರ ತಿಳಿಸಿದ್ದಾರೆ. ಅಂತಿಮ ಚುನಾವಣಾ ಕಣದಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ನಿಂದ ಉಮೇಶ ಹುಲ್ಲಪ್ಪ ಮೇಟಿ, ಭಾರತೀಯ ಜನತಾ ಪಾರ್ಟಿಯಿಂದ ಚರಂತಿಮಠ ವೀರಭದ್ರಯ್ಯ, ಉತ್ತಮ ಪ್ರಜಾಕೀಯ ಪಾರ್ಟಿಯಿಂದ ಸಂತೋಷ ಸವ್ವಾಸೆ, ಜನತಾ ಚಳುವಳಿ ಭಾರತ ಪಕ್ಷದಿಂದ ತೇಜೋರಾಮಶೆಟ್ಟಿ ದೇವಾಂಗ, ಕರ್ನಾಟಕ ರಾಷ್ಟ್ರ ಸಮಿತಿಯಿಂದ ನಾಗರಾಜ ಕಲಕುಟಗರ, ಬ್ಲ್ಯೂ ಇಂಡಿಯಾ ಪಾರ್ಟಿಯಿಂದ ತಳವಾರ ಶಿವಕುಮಾರ, ಆಲ್ ಇಂಡಿಯಾ ಜನರಕ್ಷ ಪಾರ್ಟಿಯಿಂದ ಸಿದ್ದಪ್ಪ ಗೋಡಿ, ಪಕ್ಷೇತರದಿಂದ ಆನಂದ ಜಕಾತಿ, ರವಿ ಶಿದಪ್ಪ ಪಡಸಲಗಿ ಉಳಿದುಕೊಂಡಿದ್ದಾರೆ.

ರಾಮ ಬಾಣ



ದಿನ ಭವಿಷ್ಯ

ಮೇಷ
ಹೇಳಬೇಕಾದುದನ್ನು ಸರಿಯಾಗಿ ಹೇಳಿ. ಕೆಲವರಿಗೆ ಅದು ಅರ್ಥ ಆಗದಿರಬಹುದು. ಆರೋಗ್ಯ ಸಂಬಂಧಿ ಚಿಂತೆ. ಧನವ್ಯಯ.

ವೃಷಭ
ಬಿಡುವಿರದ ದಿನ. ಕೆಲಸವನ್ನು ಆನಂದಿಸಿ. ಅದರಿಂದ ಒತ್ತಡ ಕಡಿಮೆ ಆದೀತು. ಆಪ್ತರ ಜತೆಗಿನ ಮಾತುಕತೆಯಿಂದ ಮನಸ್ಸೋಲ್ಲಾಸ.

ಮಿಥುನ
ಮನೆಯಲ್ಲಿ ನಿಮ್ಮ ನಿಲುವಿಗೇ ಅಂಟಿಕೊಂಡು ಸೌಹಾರ್ದ ಕೆಡಿಸದಿರಿ. ಕ್ಲಿಷ್ಟ ಪರಿಸ್ಥಿತಿ ಎದುರಾದೀತು. ಹೊಂದಾಣಿಕೆ ಸ್ವಭಾವ ಬೆಳೆಸಿಕೊಳ್ಳಿ.

ಕಟಕ
ನಿಮ್ಮ ವ್ಯವಹಾರ ಉತ್ತಮಪಡಿಸಲು ಹೊಸ ಚಿಂತನೆ ರೂಪಿಸಿ. ಕಡಿಮೆ ಖರೀದಿಯಿಂದ ಹಣ ಉಳಿಸಬಹುದು. ಮೈ ನೋವು ಬಾಧಿಸಬಹುದು.

ಸಿಂಹ
ಪ್ರತಿಕೂಲ ಸನ್ನಿವೇಶ ಎದುರಿಸುವಿರಿ. ಆದರೆ ಪಾಸಿಟಿವ್ ಚಿಂತನೆ ಬಿಡದಿರಿ. ಮನೆಯಲ್ಲಿ ಸೌಹಾರ್ದ ವಾತಾವರಣ. ಆರೋಗ್ಯ ಚಿಂತೆ ಮಾಯ.

ಕನ್ಯಾ
ಗುರಿ ಸಾಧಿಸಲು ಕಠಿಣ ಶ್ರಮ ಬೇಕು. ಸಂಗಾತಿ ಜತೆ ಭಿನ್ನಮತ. ಹೊಟ್ಟೆ ಸಂಬಂಧಿ ಅನಾರೋಗ್ಯ.

ತುಲಾ
ಆತ್ಮೀಯರ ಉನ್ನತಿಗೆ ಇಂದು ಪರಿಶ್ರಮ ಪಡುವಿರಿ. ವೃತ್ತಿಯಲ್ಲಿ ಉದ್ವಿಗ್ನ ಸ್ಥಿತಿ ಮೂಡಿದರೂ ಬಳಿಕ ಶಮನ. ಸಹೋದ್ಯೋಗಿ ಸಹಕಾರ.

ವೃಶ್ಚಿಕ
ಆಪ್ತರ ಜತೆ ವ್ಯವಹರಿಸುವಾಗ ಹೃದಯದ ಭಾವಕ್ಕೆ ಬೆಲೆ ಕೊಡಿ. ಎಲ್ಲವನ್ನು ತರ್ಕದಿಂದ ಯೋಚಿಸದಿರಿ.

ಧನು
ಮನಸ್ಸಿಗೆ ಸಮಾಧಾನ ತರುವ ನಿರ್ಧಾರ ತಾಳುವಿರಿ. ಸಂಬಂಧದಲ್ಲಿ ಪ್ರಗತಿ. ಎಲ್ಲರ ಜತೆ ಬೆರೆಯಲು ಗಮನ ಕೊಡಿ.

ಮಕರ
ವೃತ್ತಿ ಕ್ಷೇತ್ರದಲ್ಲಿ ಉಂಟಾಗಿದ್ದ ಬಿಗು ಪರಿಸ್ಥಿತಿ ಶಮನವಾಗಲಿದೆ. ಸಂಘರ್ಷಕ್ಕಿಂತ ಸಹಕಾರ ಒಳ್ಳೆಯದು. ಆರ್ಥಿಕ ವ್ಯವಹಾರದಲ್ಲಿ ಲಾಭ.

ಕುಂಭ
ಧಾರ್ಮಿಕ ಕ್ಷೇತ್ರ ದರ್ಶನ. ಸಮಸ್ಯೆ ಪರಿಹಾರಕ್ಕೆ ಯತ್ನ. ಮಕ್ಕಳ ಸಾಧನೆ ಸಮಾಧಾನ ತರಲಿದೆ. ಖರ್ಚು ಕಡಿಮೆ ಮಾಡಲು ಆದ್ಯತೆ ಕೊಡಿ.

ಮೀನ
ವಾಗ್ವಾದ ನಡೆದೀತು. ಕೆಲವರು ನಿಮ್ಮನ್ನು ಅಣಕ ಮಾಡಿಯಾರು. ಸಹನೆ ಇರಲಿ. ಸುಖದುಃಖ ಬದುಕಿನ ಅವಿಭಾಜ್ಯ ಅಂಗ ಎಂದರಿಯಿರಿ.

ರಾಹುಕಾಲ: 10.30-12.00
ಗುಳಿಕಕಾಲ: 7.30-9.00

ಅದೃಷ್ಟ ಸಂಖ್ಯೆ : 4,9,1,7

2 ಕ್ಷೇತ್ರಗಳಲ್ಲೂ ಕಾಂಗ್ರೆಸ್‌ಗೆ ಜಯ: ಸಚಿವೆ ಹೆಬ್ಬಾಳಕರ್

• **ಕುಂದಾಪುರ:** ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಎರಡೂ ಕ್ಷೇತ್ರಗಳಲ್ಲೂ ಮುಂಬರುವ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಜಯಗಳಿಸಲಿದ್ದಾರೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಕುಂದಾಪುರದ ಕೋಟೇಶ್ವರ ಸಮೀಪದ ಯುವ ಮೆರಿಡಿಯನ್ ಹೆಲಿಪ್ಯಾಡ್ ಬಳಿ ಗುರುವಾರ ಮಾಧ್ಯಮಗಳ ಜೊತೆ ಮಾತನಾಡಿದ ಸಚಿವರು, ಸಾಮಾನ್ಯವಾಗಿ ಉಪಚುನಾವಣೆಗಳಲ್ಲಿ ಅಧಿಕಾರದಲ್ಲಿರುವ ಪಕ್ಷದ ಕಡೆಗೆ ಮತದಾರರ ಒಲವಿರುತ್ತದೆ. ನಮ್ಮ ಸರ್ಕಾರದ ಗ್ಯಾರಂಟಿ ಯೋಜನೆಗಳು ಮನೆ ಮನೆಗೆ ತಲುಪಿವೆ. ಗ್ಯಾರಂಟಿ ಯೋಜನೆಗಳಿಂದ ಜನ ಸಾಮಾನ್ಯರಿಗೆ ಸಾಕಷ್ಟು ಅನುಕೂಲ ಆಗಿದೆ. ಅಭಿವೃದ್ಧಿಯ ಜೊತೆಗೆ ಜನರ ಆದಾಯ ಕೂಡ ಜಾಸ್ತಿ ಆಗಿದೆ. ಅದರಲ್ಲೂ ಮಹಿಳಾ ಮತದಾರರು ಸಂತೋಷವಾಗಿದ್ದಾರೆ ಎಂದರು. ಎರಡು ಕ್ಷೇತ್ರಗಳಲ್ಲೂ ಗೆದ್ದೇ ಗೆಲ್ಲುತ್ತೇವೆ. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬರಿಗೂ ಟಿಕೆಟ್ ಕೇಳುವ ಹಕ್ಕಿದೆ. ಗೆಲುವೊಂದೇ ನಮಗೆ ಮಾನದಂಡ. ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾಗಿದ್ದ ಕ್ಷೇತ್ರಕ್ಕೆ ಅವರ ಕುಟುಂಬ ಸದಸ್ಯರಿಗೆ ಟಿಕೆಟ್ ನೀಡಲಾಗಿದೆ. ಇದು ಹೈಕಮಾಂಡ್ ನಿರ್ಧಾರಕ್ಕೆ ನಾವು ಬದ್ಧ ಎಂದರು.

ಯಾವ ಜವಾಬ್ದಾರಿ ಕೊಟ್ಟರೂ ನಿಭಾಯಿಸುವೆ

• **ಬೆಂಗಳೂರು:** ನನಗೆ ಇದೇ ಬೇಕು ಅದೇ ಬೇಕು ಎಂದೆಲ್ಲ ಇಲ್ಲ, ಯಾವ ಜವಾಬ್ದಾರಿ ಕೊಟ್ಟರೂ ಅದನ್ನು ಪ್ರಾಮಾಣಿಕವಾಗಿ ಮಾಡಬೇಕು. ಅದನ್ನು ಮಾಡುತ್ತಿದ್ದೇನೆ ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಹೇಳಿದರು. ವಿಧಾನಸಭಾಧ್ಯಕ್ಷರ ಸ್ಥಾನದಲ್ಲಿ ಮಾಡುತ್ತಿರುವ ಕೆಲಸ ತೃಪ್ತಿ ಕೊಟ್ಟಿದೆ. ನನಗೆ ಇಂಥದ್ದೇ ಹುದ್ದೆ ಬೇಕೆಂದೇನು ಇಲ್ಲ, ಏನು ಕೊಟ್ಟರೂ ಜವಾಬ್ದಾರಿಯಿಂದ ನಿರ್ವಹಿಸುತ್ತೇನೆ. ಹುದ್ದೆ ಇಲ್ಲದಿದ್ದರೂ ಶಾಸಕನಾಗಿ ಕೆಲಸ ಮಾಡುತ್ತೇನೆ ಎಂದು ತಿಳಿಸಿದರು. ವಿಧಾನಸಭೆಯ ಅವಧಿ ಪೂರ್ಣಗೊಳ್ಳುವ ಮೊದಲೇ ಗ್ರೂಪ್ ಫೋಟೋ ತೆಗೆಸಿದ ವಿಚಾರಕ್ಕೆ ಸಂಬಂಧಿಸಿದಂತೆ ಸ್ಪಷ್ಟನೆ ನೀಡಿದ ಅವರು, ವಿಧಾನಸಭೆ ಸದಸ್ಯರು ಗ್ರೂಪ್ ಫೋಟೋ ತೆಗೆಸುತ್ತಿದ್ದಾರೆ ಎನ್ನುವ ವಿಚಾರ ಗೊತ್ತಾಯಿತು. ನಾವೂ ಫೋಟೋ ತೆಗೆಸೋಣ ಅಲ್ಲವೇ ಎಂದಾಗ ಅಧಿಕಾರಿಗಳೆಲ್ಲರೂ ಒಪ್ಪಿದರು. ಹೀಗಾಗಿ ವಿಧಾನಸಭಾ ಸದಸ್ಯರ ಗ್ರೂಪ್ ಫೋಟೋಗೆ ವ್ಯವಸ್ಥೆ ಮಾಡಿದ್ದೇವೆ ಅಷ್ಟೇ ಎಂದರು.

ಮಹಾಲೆಕ್ಕಪರಿಶೋಧಕರ ವರದಿಯಲ್ಲಿ ಪ್ರಸ್ತಾಪ

ಸರ್ಕಾರಕ್ಕೆ ಆದಾಯ ಕೊರತೆ

• **ವಿಧಾನಸಭೆ:** ರಾಜ್ಯ ಸರ್ಕಾರದ ಪಂಚ ಗ್ಯಾರಂಟಿಗಳಿಂದ 20,380 ಕೋಟಿ ರೂ. ಆದಾಯ ಕೊರತೆಗೆ ಕಾರಣವಾಗಿದ್ದು, ಇದರ ಪರಿಣಾಮ ವಿತ್ತೀಯ ಕೊರತೆಯು 2023-24ರಲ್ಲಿ 65,522 ಕೋಟಿ ರೂ. ಗಳಿಂದ 2024-25ರಲ್ಲಿ 58,030 ಕೋಟಿ ಇದೆ ಎಂದು ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಸಿಎಜಿ) ವರದಿ ತಿಳಿಸಿದೆ.

ಗುರುವಾರ ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ಸಚಿವ ದಿನೇಶ್ ಗುಂಡೂರಾವ್ ಅವರು, 2024ಕ್ಕೆ ಕೊನೆಗೊಂಡ ರಾಜಸ್ವದ ವರದಿಯನ್ನು ಮಂಡಿಸಿದರು. 2025-26ರಲ್ಲಿ ಒಟ್ಟು 50,077 ಕೋಟಿ ರೂ. ಹಣವನ್ನು ವಿವಿಧ ಇಲಾಖೆಗಳಿಗೆ ಸಹಾಯಧನ ನೀಡಲಾಗಿದೆ. ಇದರಲ್ಲಿ ಇಂಧನ ಇಲಾಖೆಗೆ ಅತೀ ಹೆಚ್ಚು ಸಹಾಯಧನ ಸಿಕ್ಕಿದ್ದು, ಗೃಹಜ್ಯೋತಿ ಮತ್ತು ರೈತರ ಕೃಷಿ ಪಂಪ್ ಸೆಟ್ ಬಳಕೆಗೆ ಉಚಿತ ವಿದ್ಯುತ್‌ಗೆ 9,157.66 ಕೋಟಿ ನೀಡಲಾಗಿದೆ. ಶೇ.45ರಷ್ಟು ಸಹಾಯಧನವನ್ನು ಐದು ಗ್ಯಾರಂಟಿಗಳಿಗೆ ನೀಡಲಾಗಿದೆ.

ಜಿಡಿಪಿಯಲ್ಲಿ ರಾಜ್ಯದ ಬೆಳವಣಿಗೆ ಉತ್ತಮವಾಗಿದ್ದು, ತಲಾ ಆದಾಯದಲ್ಲಿ ದೇಶಕ್ಕಿಂತ ಮುಂದೆ ಇದೆ. ಬಜೆಟ್ ಹೊರತುಪಡಿಸಿ, ವಿವಿಧ ಯೋಜನೆಗಳ ಅನುಷ್ಠಾನಕ್ಕೆ ಮಾಡಿರುವ ರಾಜ್ಯ ಸರ್ಕಾರದ ಸಾಲವು 14,154.91 ಕೋಟಿ ರೂ. ಇದೆ. ರಾಜ್ಯಕ್ಕೆ ಜಿಎಸ್‌ಟಿಯಿಂದ 52,971.23 ಕೋಟಿ ರೂ. ಬಾಕಿ ಇದ್ದು, ಜಿಎಸ್‌ಟಿ ದರಗಳನ್ನು ಇಳಿಸಿದ್ದರಿಂದ ಮುಂದಿನ ದಿನಗಳಲ್ಲಿ ರಾಜ್ಯಕ್ಕೆ ಜಿಎಸ್‌ಟಿ ಆದಾಯ ಕಡಿಮೆಯಾಗಲಿದೆ.

ಹಿಂದಿನ ವರ್ಷಕ್ಕೆ ಹೋಲಿಸಿದ್ದಲ್ಲಿ ರಾಜ್ಯದ ಲಾಭಾಂಶವು 2024-25ರಲ್ಲಿ ಶೇ.236 ರಷ್ಟು ಹೆಚ್ಚಾಗಿದೆ. 2025-25 ರಾಜ್ಯದ ಒಟ್ಟು ವೆಚ್ಚ 3,43,524 ಕೋಟಿ ರೂ. ಆಗಿದ್ದು ರಾಜಸ್ವ ವೆಚ್ಚ 2,78,987, ಬಂಡವಾಳ ವೆಚ್ಚ 57,906 ಮತ್ತು ಸಾಲ ಮತ್ತು ಮುಂಗಡಗಳಿಗಾಗಿ 6,631 ಕೋಟಿ ರೂ. ಹಂಚಿಕೆಯಾಗಿದೆ. 2024-25ರಲ್ಲಿ ನೀರಾವರಿ ಯೋಜನೆಗೆ ಅತೀ ಹೆಚ್ಚು 19,000 ಕೋಟಿ ರೂ. ದೊರೆತಿದ್ದರೂ ಅನೇಕ ಕಾಮಗಾರಿಗಳು ಅಪೂರ್ಣವಾಗಿವೆ ಎಂದು ವರದಿಯಲ್ಲಿ ಹೇಳಿದೆ.

ರಾಜಸ್ವ ಸಂಗ್ರಹ ಹೆಚ್ಚಳ

ರಾಜ್ಯ ಸರ್ಕಾರಕ್ಕೆ 2024-25ರ ಅವಧಿಯಲ್ಲಿ ಶೇ.10.63 ರಷ್ಟು ರಾಜಸ್ವ ಸಂಗ್ರಹ ಹೆಚ್ಚಳವಾಗಿದ್ದು, ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ.14ರಷ್ಟು ಏರಿಕೆಯಾಗಿದೆ. ತೆರಿಗೆಯೇತರ ರಾಜಸ್ವವು ಶೇ.23.11 ರಷ್ಟು ಹೆಚ್ಚಾಗಿದೆ. ಪ್ರಮುಖವಾಗಿ ಅಬಕಾರಿ ಹಾಗೂ ಮುದ್ರಾಂಕ ಮತ್ತು ನೋಂದಣಿ ಇಲಾಖೆಗಳಿಂದ ರಾಜಸ್ವ ಇಳಿಕೆಯಾಗಿದೆ.



ನರೇಗಾ ಯೋಜನೆಗೆ ಅನುದಾನ ಇಳಿಕೆ

2024-25ರ ಅವಧಿಯಲ್ಲಿ ಮನರೇಗಾ ಯೋಜನೆಗೆ 1,513.38 ಕೋಟಿ ರೂ. ನೀಡಲಾಗಿದ್ದು, ಇದು 2023-24 ವರ್ಷಕ್ಕೆ ಹೋಲಿಸಿದರೆ ಶೇ.7.54 ರಷ್ಟು ಇಳಿಕೆಯಾಗಿದೆ. ಈ ಯೋಜನೆ ಬೇಡಿಕೆ ಆಧಾರಿತ ಯೋಜನೆಯಾಗಿದ್ದು, ಜನಸಂಖ್ಯೆ ಮತ್ತೊಮ್ಮೆ ನಗರಕ್ಕೆ ವಲಸೆ ಇದ್ದರಿಂದ ಇಳಿಕೆ ಆಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

5000 ಕೋಟಿ ರೂ. ಅನುದಾನ ಮೀಸಲಿಡಿ

• **ವಿಧಾನಸಭೆ:** ಕಿತ್ತೂರು ಕರ್ನಾಟಕದ ಸಮಗ್ರ ಅಭಿವೃದ್ಧಿಯ ಹಿತದೃಷ್ಟಿಯಿಂದ ಕಿತ್ತೂರು ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ರಚಿಸಿ ಕನಿಷ್ಠ 5000 ಕೋಟಿ ರೂ.ಗಳ ಅನುದಾನವನ್ನು ಮೀಸಲಿಡುವುದಕ್ಕೆ ಒತ್ತಾಯಿಸಿ ಖಾಸಗಿ ನಿರ್ಣಯ ಮಂಡಿಸಲಾಯಿತು.

ಖಾಸಗಿ ಸದಸ್ಯರ ಕಾರ್ಯಕಲಾಪದಲ್ಲಿ ಕಾಂಗ್ರೆಸ್ ಶಾಸಕ ಎನ್.ಎಚ್. ಕೋನರಡ್ಡಿ ಈ ನಿರ್ಣಯ ಮಂಡಿಸಿದರು. ಐತಿಹಾಸಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯುಳ್ಳ ಬೆಳಗಾವಿ ವಿಭಾಗದ (ಕಿತ್ತೂರು ಕರ್ನಾಟಕ) ಜಿಲ್ಲೆಗಳಾದ ಧಾರವಾಡ, ಬೆಳಗಾವಿ, ಗದಗ, ಹಾವೇರಿ, ಬಾಗಲಕೋಟೆ, ವಿಜಯಪುರ ಹಾಗೂ ಉತ್ತರ ಕನ್ನಡ ಜಿಲ್ಲೆಗಳು ಅಭಿವೃದ್ಧಿಯ ದೃಷ್ಟಿಯಿಂದ ಇನ್ನೂ ನಿರೀಕ್ಷಿತ ಮಟ್ಟ ತಲುಪಿಲ್ಲ.

ಈ ಭಾಗದ ಪ್ರಗತಿಗೆ ವಿಶೇಷ ಒತ್ತು ನೀಡುವ ಅವಶ್ಯಕತೆ ಇದ್ದು, ಬೇರೆ ಬೇರೆ ಪ್ರದೇಶಗಳಿಗೆ ಹೋಲಿಸಿದರೆ ಕಿತ್ತೂರು ಕರ್ನಾಟಕ ಭಾಗವು ಆರ್ಥಿಕವಾಗಿ ಹಾಗೂ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ (ಶಿಕ್ಷಣ, ಆರೋಗ್ಯ, ಸಾಕ್ಷರತೆ) ತೀರಾ ಹಿಂದುಳಿದಿದೆ.

> ಬಯಲುಸೀಮೆಯಲ್ಲಿ ನಮಗೆ ಏನೂ ಸಿಗುತ್ತಿಲ್ಲ. ಪ್ರತ್ಯೇಕ ಮಂಡಳಿ ಮಾಡಿ ಕಲ್ಯಾಣ ಕರ್ನಾಟಕದಂತೆ ಪ್ರತಿ ವರ್ಷ 5,000 ಕೋಟಿ ರೂ. ನೀಡಿದ್ದರೂ ಕನಿಷ್ಠ 2,500 ಕೋಟಿ ರೂ.ಗಳಾದರೂ ಕೊಡಿ. ಪ್ರತೀ ಶಾಸಕನಿಗೆ ತಲಾ 50 ಕೋಟಿ ರೂ.ಗಳನ್ನು ಅಭಿವೃದ್ಧಿ ಕಾರ್ಯಗಳಿಗಾಗಿ ನೀಡಿ.
> ■ **ಬಸನಗೌಡ ಪಾಟೀಲ್ ಯತ್ನಾಳ್**, ಶಾಸಕ

ಈ ಭಾಗದ ಜಿಲ್ಲೆಗಳ ತಲಾ ಆದಾಯ ರಾಜ್ಯದ ಸರಾಸರಿಗಿಂತ ಕಡಿಮೆ ಇದ್ದು, ರಾಜ್ಯದಲ್ಲಿ ಅತೀ ಕಡಿಮೆ ತಲಾ ಆದಾಯ ಹೊಂದಿದೆ. ಈ ಪ್ರದೇಶದಲ್ಲಿ ಬೃಹತ್ ಕೈಗಾರಿಕೆ ಮತ್ತು ಮೂಲಸೌಕರ್ಯಗಳ ಕೊರತೆಯಿದೆ ಎಂದು ಹೇಳಿದರು.

ಟಿಕೆಟ್‌ಗಾಗಿ ಶಾಸಕರ ಬೇಡಿಕೆ

ಪುಟ 1➡ ನಮಗೆ ಅಲ್ಲಿ ಒಂದು ಪಾಸೂ ಕೊಡಲ್ಲ, ಕ್ರಿಕೆಟ್ ಸ್ಟೇಡಿಯಂ ಕಟ್ಟೋಕೆ ಸರ್ಕಾರದ ಹಣ ಬೇಕಾ? ಸಾಕಾಗಿದೆ ಮೊನ್ನೆ ಹನ್ನೊಂದು ಜನ ಸತ್ತಿದ್ದಾರೆ. ಜಾಗ ಕೊಟ್ಟಿರೋದು ಕ್ರಿಕೆಟ್ ಆಡಲು, ತರಬೇತಿ ನೀಡಲು, ಅವರ ಬಳಿ ಸಾವಿರಾರು ಕೋಟಿ ದುಡ್ಡಿದೆ. ಆದರೆ ನಾವು ಒಂದು ಟಿಕೆಟ್‌ಗೆ ಅಂಗಲಾಚಬೇಕು ಎಂದು ಅಶೋಕ್ ಬೇಸರ ವ್ಯಕ್ತಪಡಿಸಿದರು.

ಕಾಂಗ್ರೆಸ್ ಶಾಸಕ ವಿಜಯಾನಂದ ಕಾಶಪ್ಪನವರ್ ಮಾತನಾಡಿ, ಶಾಸಕರಿಗೆ ಒಂದು ಟಿಕೆಟ್ ಕೊಡುತ್ತಾರೆ. ಅದು ಸಾಮಾನ್ಯ ಗ್ಯಾಲರಿಯಲ್ಲಿ ಹೋಗಿ ಕುಳಿತುಕೊಳ್ಳಬೇಕು. ಮೊದಲು ಎರಡು ಟಿಕೆಟ್ ಕೊಡುತ್ತಿದ್ದರು. ಎಂಎಲ್‌ಎಗಳು ಕೂರಲು ಒಂದು ಅವಕಾಶ ಮಾಡಿಕೊಡಿ. ನಮ್ಮ ಮಕ್ಕಳು, ನಮ್ಮ ಮನೆಯವರು ಹೋಗುತ್ತಾರೆ ಎಂದರು. ನಾವು ವಿಐಪಿಗಳು ನಮಗೆ ಪ್ರತ್ಯೇಕ ಆಸನ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದರು.

ನಾವು ಕ್ರೀಡಾಂಗಣಕ್ಕೆ ಹೋದರೆ ಮರ್ಯಾದೆ ಇಲ್ಲ, ಶಾಸಕರು, ಸಚಿವರಿಗೆ ಪ್ರತ್ಯೇಕ ಗ್ಯಾಲರಿ ಮಾಡಿಸಿ ಎಂದು ಪಕ್ಷಾತೀತವಾಗಿ ಶಾಸಕರು ಒತ್ತಾಯ ಮಾಡಿದರು.

ಈ ವೇಳೆ ಮಧ್ಯಪ್ರವೇಶ ಮಾಡಿದ ಸ್ಪೀಕರ್ ಖಾದರ್, ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಪರಿಗಣಿಸಬೇಕು. ಕೆಎಸ್‌ಸಿಎಯವರನ್ನು ಕರೆದು ಮಾತನಾಡಬೇಕು. ಅಲ್ಲಿ ಹೋಗಿ ಶಾಸಕರಿಗೆ ಅಗೌರವ ಆಗೋದು ಸರಿಯಲ್ಲ. ಶಾಸಕರ ಕುಟುಂಬಕ್ಕೆ ಕನಿಷ್ಠ 4 ಟಿಕೆಟ್ ಕೊಡಬೇಕು. ಅಲ್ಲಿ ಶಾಸಕರಿಗೆ ಗೌರವ ಕೊಡುವ ಕೆಲಸ ಆಗಬೇಕು ಎಂದು ಸರ್ಕಾರಕ್ಕೆ ಸೂಚಿಸಿದರು.

ಐಪಿಎಲ್ ಟಿಕೆಟ್‌ಗೆ ನನ್ನ ಹತ್ತಿರ ಬರಬೇಡಿ, ಡಿಸಿಎಂ ಹತ್ತಿರ ಹೋಗಿ ಅವರು ಕೊಡಿಸುತ್ತಾರೆ ಎಂದು ಸ್ಪೀಕರ್ ಯು.ಟಿ. ಖಾದರ್ ಹೇಳಿದರು. ಇದಕ್ಕೆ ಉತ್ತರಿಸಿದ ಡಿಸಿಎಂ ಡಿ.ಕೆ.ಶಿವಕುಮಾರ್, ಶಾಸಕರು ಕೇಳುವುದರಲ್ಲಿ ತಪ್ಪೇನಿಲ್ಲ, ನಾನು ಕೂಡ ಅಲ್ಲಿ ಸದಸ್ಯ, ಕೆಎಸ್‌ಸಿಎ ಅಧ್ಯಕ್ಷರನ್ನು ಕರೆಯಿಸಿ ನಾನು ಮಾತನಾಡುತ್ತೇನೆ.

ಸನ್ನದ್ಧತೆ ಪರಾಮರ್ಶೆ

ಪುಟ 1➡ ಪ.ಏಷ್ಯಾ ಸಂಘರ್ಷದಿಂದ ಸೃಜಿಸಲ್ಪಟ್ಟಿರುವ ಸಂಕೀರ್ಣ ಜಾಗತಿಕ ಸನ್ನಿವೇಶಗಳು ದೀರ್ಘಕಾಲ ಮುಂದುವರಿಯುವ ಆತಂಕವಿದೆ. ಹಾಗಾಗಿ ಕೋವಿಡ್ ಸಂದರ್ಭ ಒಗ್ಗಟ್ಟು ಮೆರೆದಂತೆ, ಪ್ರಸಕ್ತ ಏನೇ ಸವಾಲುಗಳು ಎದುರಾದರೂ ಒಗ್ಗಟ್ಟಾಗಿ ಎದುರಿಸಲು ಸನ್ನದ್ಧರಾಗಿರುವಂತೆ ದೇಶವಾಸಿಗಳನ್ನು ಉದ್ದೇಶಿಸಿ ಪ್ರಧಾನಿ ಮೋದಿ ಸೋಮವಾರ ಲೋಕಸಭೆಯಲ್ಲಿ ಹೇಳಿಕೆ ನೀಡಿದ್ದರು.

ಅನಗತ್ಯವಾಗಿ ಎಲ್‌ಪಿಜಿ ಖರೀದಿಸಬೇಡಿ: ಸಚಿವ



ಪುಟ 1➡ ನಗರಗಳಲ್ಲಿ 25 ದಿನ, ಹಳ್ಳಿಗಳಲ್ಲಿ 45 ದಿನದ ನಂತರ ಎಲ್‌ಪಿಜಿ ರೀಫಿಲ್ಲಿಂಗ್‌ಗೆ ಅವಕಾಶವಿದೆ ಎಂದರು. ಅನಗತ್ಯವಾಗಿ ಗ್ಯಾಸ್ ಖರೀದಿ ಮಾಡಿ ಕಾಳಸಂತೆಯಲ್ಲಿ ಮಾರಾಟ ಮಾಡಬೇಡಿ. ಪ್ರತಿನಿತ್ಯ 16 ಸಾವಿರ ವಾಣಿಜ್ಯ ಸಿಲಿಂಡರ್ ಕೊಡುತ್ತಿದ್ದೇವೆ. ಹೋಟೆಲ್‌ಗಳಿಗೆ ಅಗತ್ಯಕ್ಕಾಗಿ ಶೇ.20ರಷ್ಟು ಸಿಲಿಂಡರ್ ಪೂರೈಸುತ್ತಿದ್ದೇವೆ. ಆಸ್ಪತ್ರೆಗಳಿಗೆ ಶೇ.100 ರಷ್ಟು ಸಿಲಿಂಡರ್ ಪೂರೈಸುತ್ತಿದ್ದೇವೆ ಎಂದರು. ಹೋಟೆಲ್‌ಗಳಿಗೆ ಇನ್ನೂ ಹೆಚ್ಚಿನ ಸಿಲಿಂಡರ್ ಪೂರೈಕೆ ಮಾಡಲಾಗುತ್ತದೆ. ಈ ಬಗ್ಗೆ ಸೋಮವಾರ ಸಭೆ ಮಾಡಿ ನಿರ್ಧಾರ ಮಾಡುತ್ತೇನೆ. ಗ್ರಾಹಕರು ವಿನಾಕಾರಣ ಗ್ಯಾಸ್ ಏಜೆನ್ಸಿ ಬಳಿ ಸರದಿ ನಿಲ್ಲಬೇಡಿ. ಬುಕ್ ಮಾಡಿದರೆ ನಿಮ್ಮ ಮನೆಗೆ ಸಿಲಿಂಡರ್ ಬರುತ್ತದೆ ಎಂದು ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.

ಭದ್ರತಾ ಸಂಸ್ಥೆಗಳು ಸನ್ನದ್ಧ ಸ್ಥಿತಿಯಲ್ಲಿ

ಪುಟ 1➡ ಆದಷ್ಟು ಸಂಯಮ, ಸಹನೆ ಮತ್ತು ಜಾಗೃತ ಸ್ಥಿತಿಯಲ್ಲಿರುವಂತೆ ಕರೆ ನೀಡಿದ್ದ ಪ್ರಧಾನಿ ಮೋದಿ, ಅಪಪ್ರಚಾರ ಮುಖೇನ ಸನ್ನಿವೇಶದ ದುರ್ಲಾಭಕ್ಕೆ ಯತ್ನಿಸುವವರಿದ್ದಾರೆ. ಕಾಳಸಂತೆ ಅಥವಾ ಅಕ್ರಮ ದಾಸ್ತಾನುಗಾರರ ವಿರುದ್ಧ ನಿಗಾ ಇರಿಸಿ. ಅಂತಹ ಶಕ್ತಿಗಳ ವಿರುದ್ಧ ತುರ್ತು ಕ್ರಮ ಕೈಗೊಳ್ಳುವಂತೆ ಎಲ್ಲಾ ರಾಜ್ಯ ಸರಕಾರಗಳನ್ನು ವಿನಂತಿಸಿದ್ದರು.

ಅಧ್ಯಾಪಕನಿಗೆ ಧರ್ಮದೇಟು

ಪುಟ 1➡ ಈ ಘಟನೆಯ ವಿಡಿಯೋ ಈಗ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ತಾಲೂಕಿನ ಟಿ.ಬೇಗೂರಿನಲ್ಲಿರುವ ಸಿದ್ಧಾರ್ಥ ವೈದ್ಯಕೀಯ ಕಾಲೇಜಿನ ಉಪನ್ಯಾಸಕ ಅಬ್ದುಲ್ ಎಂಬಾತನ ವರ್ತನೆಯಿಂದಾಗಿ ಕ್ಯಾಂಪಸ್ ಬೆಚ್ಚಿಬಿದ್ದಿದೆ. ತರಗತಿಯಲ್ಲಿದ್ದ ವಿದ್ಯಾರ್ಥಿನಿಯ ಬಳಿ ಬಂದ ಅಬ್ದುಲ್, ಚಾಕಲೇಟ್ ನೀಡಿ ಅಸಭ್ಯವಾಗಿ ವರ್ತಿಸಿದ್ದಾನೆ ಎನ್ನಲಾಗಿದೆ. ಉಪನ್ಯಾಸಕನ ಈ ಅತಿರೇಕದ ನಡವಳಿಕೆಯಿಂದ ಆಕ್ರೋಶಗೊಂಡ ವಿದ್ಯಾರ್ಥಿನಿ ಕೂಡಲೇ ಆತನನ್ನು ತರಾಟೆಗೆ ತೆಗೆದುಕೊಂಡಿದ್ದಾಳೆ. ವಿದ್ಯಾರ್ಥಿನಿಯ ಪ್ರತಿರೋಧದ ಬೆನ್ನಲ್ಲೇ ರೊಚ್ಚಿಗೆದ್ದ ಇತರೆ ವಿದ್ಯಾರ್ಥಿಗಳು ಉಪನ್ಯಾಸಕನ ಮೇಲೆ ಮುಗಿಬಿದ್ದಿದ್ದಾರೆ. ವಿದ್ಯಾರ್ಥಿಗಳ ಕೈಯಿಂದ ತಪ್ಪಿಸಿಕೊಳ್ಳಲು ಅಬ್ದುಲ್ ತನ್ನ ಕಾರಿನತ್ತ ಓಡುತ್ತಿದ್ದಾಗ ಆತನನ್ನು ಅಡ್ಡಗಟ್ಟಿ ವಿದ್ಯಾರ್ಥಿಗಳ ಗುಂಪು ಹಲ್ಲೆ ನಡೆಸಿದೆ. ಸಂತ್ರಸ್ತ ವಿದ್ಯಾರ್ಥಿನಿ ಚಪ್ಪಲಿಯಿಂದ ಹಲ್ಲೆ ಮಾಡಿದರೆ, ಉಳಿದ ವಿದ್ಯಾರ್ಥಿಗಳು ಕಾಲಿನಿಂದ ಒದ್ದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ರಾಜ್ಯದ ಗೃಹ ಸಚಿವ ಒಡೆತನದ ಶಿಕ್ಷಣ ಸಂಸ್ಥೆಯಲ್ಲೇ ಹೆಣ್ಣು ಮಕ್ಕಳಿಗೆ ಇಂತಹ ಪರಿಸ್ಥಿತಿ ಬಂದೊದಗಿರುವುದು ಸಾರ್ವಜನಿಕ ವಲಯದಲ್ಲಿ ದೊಡ್ಡ ಮಟ್ಟದ ಚರ್ಚೆಗೆ ಕಾರಣವಾಗಿದೆ. ನೆಲಮಂಗಲ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಅಧ್ಯಾಪಕ ವಿರುದ್ಧ ಪ್ರಕರಣ ದಾಖಲಾಗಿದೆ.

ಡಿಕೆಶಿ-ಮುನಿರತ್ನ ಜಟಾಪಟಿ

• **ವಿಧಾನಸಭೆ:** ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹಾಗೂ ಬಿಜೆಪಿ ಶಾಸಕ ಮುನಿರತ್ನ ನಡುವೆ ನಡೆದ ವೈಯಕ್ತಿಕ ಜಟಾಪಟಿಯಿಂದ ಸದನದಲ್ಲಿ ಗದ್ದಲದ ವಾತಾವರಣ ಉಂಟಾಯಿತು. ಇವರಿಬ್ಬರ ಮಾತಿನ ಚಕಮಕಿಯು ಆಡಳಿತ ಪಕ್ಷದ ಶಾಸಕರು ಧರಣಿ ನಡೆಸುವ ಪ್ರಸಂಗ ಜರುಗಿತು.

ಬೆಂಗಳೂರು ನಗರದ ಅಭಿವೃದ್ಧಿ ಕುರಿತಂತೆ ನಡೆದ ಚರ್ಚೆಯಲ್ಲಿ ಡಿ.ಕೆ.ಶಿವಕುಮಾರ್ ಉತ್ತರಿಸುವಾಗ ಆಡಿದ ಮಾತು ಮುನಿರತ್ನ ಅವರನ್ನು ಕೆರಳಿಸಿತು. ಪ್ರತಿಯಾಗಿ ಮುನಿರತ್ನ ಅವರೂ ಕೂಡ ಏರಿದ ಧ್ವನಿಯಲ್ಲಿ ಮಾತನಾಡಿದರು. ಇದಕ್ಕೆ ಆಡಳಿತ ಪಕ್ಷದ ಶಾಸಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿ ಮಾತನಾಡಿದಾಗ ವಿಪಕ್ಷ ನಾಯಕ ಆರ್.ಅಶೋಕ್ ಮಧ್ಯಪ್ರವೇಶಿಸಿ, ವೈಯಕ್ತಿಕ ವಿಚಾರ ಚರ್ಚೆಯಾಗುವುದು ಬೇಡ, ಉಪಮುಖ್ಯಮಂತ್ರಿ ಹಾಗೂ ಶಾಸಕರು ಬಳಸಿರುವ ಶಬ್ದಗಳನ್ನು ಮತ್ತು ವಿಚಾರವನ್ನು ಕಡತದಿಂದ ತೆಗೆಸಿ ಎಂಬ ಸಲಹೆ ಮಾಡಿದರು. ಮುನಿರತ್ನ ಅವರನ್ನು ಸಮಾಧಾನಪಡಿಸಲು ಸಭಾಧ್ಯಕ್ಷರು ಪದೇಪದೇ ಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಬೆಂಗಳೂರು ಅಭಿವೃದ್ಧಿ ಕುರಿತಂತೆ ಪ್ರಸ್ತಾಪವಾದ ವಿಚಾರಗಳನ್ನು ಹೊರತುಪಡಿಸಿ ಉಳಿದೆಲ್ಲಾ ವಿಚಾರಗಳನ್ನು ಕಡತದಿಂದ ತೆಗೆಯಲು ಸೂಚಿಸಿದರು.

ಕ್ರಸ್ಟ್ ಗೇಟ್‌ಗಳಿಗೆ ಸ್ಕಿನ್ ಪ್ಲೇಟ್ ಅಳವಡಿಕೆ

• **ವಿಧಾನಪರಿಷತ್:** ಆಲಮಟ್ಟಿ ಜಲಾಶಯವನ್ನು 509 ಅಡಿಗಳಿಂದ 524.56 ಅಡಿಗೆ ಎತ್ತರಿಸಲು ಪೂರಕವಾಗಿ 26 ರೇಡಿಯಲ್ ಕ್ರಸ್ಟ್ ಗೇಟ್‌ಗಳಿಗೆ ಸ್ಕಿನ್ ಪ್ಲೇಟ್ ಅಳವಡಿಕೆಗೆ ಮೇಲ್ಮನೆಯಲ್ಲಿ ಸರ್ವಾನುಮತದಿಂದ ನಿರ್ಣಯವನ್ನು ಅಂಗೀಕರಿಸಲಾಯಿತು.

ಈ ಕುರಿತು ನಿರ್ಣಯವನ್ನು ಮಂಡಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್, ಆಲಮಟ್ಟಿ ಜಲಾಶಯದಲ್ಲಿ ಹೂಳು ತುಂಬಿರುವುದು ಹಾಗೂ ಕರ್ನಾಟಕದ ಪಾಲಿನ ನೀರಿನ ಸದ್ಬಳಕೆಗೆ ಅಣೆಕಟ್ಟೆಯನ್ನು ಎತ್ತರಿಸಬೇಕಿದೆ. ಜಲಾಶಯದ ಕ್ರಸ್ಟ್ ಗೇಟ್‌ಗಳಿಗೆ ಸ್ಕಿನ್ ಪ್ಲೇಟ್‌ಗಳ ಅಳವಡಿಸಬೇಕಿದೆ. ಅಣೆಕಟ್ಟೆಗೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯದಲ್ಲಿ ನೆರೆಯ ತೆಲಂಗಾಣ ಹಾಗೂ ಆಂಧ್ರಪ್ರದೇಶ ರಾಜ್ಯಗಳ ಅರ್ಜಿಗಳಿಲ್ಲ, ಈ ಕುರಿತಂತೆ ನ್ಯಾಯಾಲಯ, ನ್ಯಾಯಾಧಿಕರಣದಿಂದ ಯಾವುದೇ ತಡೆಯಾಜ್ಞೆಯೂ ಇಲ್ಲ. ಹೀಗಾಗಿ ಜಲಾಶಯದಲ್ಲಿ 303 ಟಿಎಂಸಿ ನೀರು ಸಂಗ್ರಹಿಸಲು ಈ ನಿರ್ಣಯ ತರಲಾಗಿದೆ. ಇದನ್ನು ಕೆಳಮನೆ ಈಗಾಗಲೇ ಅಂಗೀಕರಿಸಿದೆ ಎಂದು ಸದನಕ್ಕೆ ವಿವರಿಸಿದರು. ಅದನ್ನು ಸಭೆ ಸರ್ವಾನುಮತದಿಂದ ಅಂಗೀಕರಿಸಿತು.

ಇದಕ್ಕೂ ಮೊದಲು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ವಿಧಾನಸಭೆಯಲ್ಲಿ ಅಂಗೀಕೃತರೂಪದಲ್ಲಿರುವ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕ 2026 ಅನ್ನು ಮಂಡಿಸಿದರು. ಸಾಮಾನ್ಯ ಹಾಗೂ ಸ್ಲೀಪರ್ ಬಸ್ ಮೇಲಿನ ತೆರಿಗೆಯನ್ನು ಕಡಿತಗೊಳಿಸುವುದು ಹಾಗೂ ಮತ್ತಿತರ ವಾಹನಗಳ ತೆರಿಗೆಯನ್ನು ಹೆಚ್ಚಿಸುವುದು ಮಸೂದೆಯ ಉದ್ದೇಶವನ್ನು ವಿವರಿಸಿದರು.

ಅದನ್ನು ಸ್ವಾಗತಿಸಿ ಮಾತನಾಡಿದ ಬಿಜೆಪಿಯ ನವೀನ್ ಕೆ.ಎಸ್, ಶರವಣ ಅವರು, ಕರ್ನಾಟಕದಲ್ಲಿ ಅನ್ಯ ರಾಜ್ಯಗಳ ಬಸ್‌ಗಳೇ ಹೆಚ್ಚಿನ ಸಂಖ್ಯೆಯಲ್ಲಿ ಓಡಾಡುತ್ತಿವೆ ಎಂದರು.

ಜನ, ಶಾಸಕರ ಆಶೀರ್ವಾದ ನನಗಿದೆ

ಪುಟ 1➡ ಈ ಬಾರಿ 1.37 ಲಕ್ಷ ಕೋಟಿ ಸಾಲ ಪಡೆದಿದ್ದೇವೆ. ಆದರೆ, ಬಜೆಟ್ ಗಾತ್ರ 4.48 ಲಕ್ಷ ಕೋಟಿ ರೂ. ಇದೆ. 2025-26ಕ್ಕೆ ಕೇಂದ್ರ ಸರ್ಕಾರದ ಬೆಳವಣಿಗೆ ಶೇ.5.6 ರಷ್ಟಿದ್ದರೆ, ರಾಜ್ಯದ್ದು ಶೇ.9.6 ರಷ್ಟು ಇದೆ. ಕೇಂದ್ರ ಸರ್ಕಾರ 16.96 ಲಕ್ಷ ಕೋಟಿ ರೂ. ಸಾಲ ಮಾಡಿದೆ. ಡಾ.ಮನಮೋಹನ್ ಸಿಂಗ್ ಇದ್ದಾಗ 53.11 ಲಕ್ಷ ಕೋಟಿ ರೂ. ಸಾಲ ಮಾಡಿದ್ದರು. ಈಗ 217 ಕೋಟಿ ರೂ. ಸಾಲ ಮಾಡಿದ್ದಾರೆ ಎಂದು ವಿವರಿಸಿದರು. ತೆರಿಗೆ ಸಂಗ್ರಹಣೆಯಲ್ಲಿ ರಾಜ್ಯ ಬಹಳ ಹಿಂದುಳಿದಿದೆ ಎಂದು ಸದಸ್ಯ ಸಿ.ಟಿ. ರವಿ ಸದನಕ್ಕೆ ಪ್ರಶ್ನಿಸಿದ್ದರು. ಹಾಗಾಗಿ ಬೇರೆ ರಾಜ್ಯದೊಂದಿಗೆ ತೆರಿಗೆ ಹೋಲಿಕೆ ಮಾಡಿದರೆ, 2024-25ರಲ್ಲಿ 2,3,393 ಕೋಟಿ ರೂ. ಆದಾಯ ಅಂದಾಜು ಮಾಡಲಾಗಿದ್ದು, 1.59(ಶೇ.92.2) ಲಕ್ಷ ಕೋಟಿ ರೂ. ಚೇತರಿಕೆ ಕಂಡುಬಂದಿದೆ. 2025ರಿಂದ 26ರಲ್ಲಿ 2,24,600 ಕೋಟಿ ರೂ. ಆದಾಯ ಅಂದಾಜು ಮಾಡಲಾಗಿದ್ದು, 2,10,600(ಶೇ.93.8) ಕೋಟಿ ರೂ. ಚೇತರಿಕೆಯಾಗಿದೆ. ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಚೇತರಿಕೆಯಾಗಿರುವ ಶೇಕಡವಾರು ನಮ್ಮ ರಾಜ್ಯವೇ ಜಾಸ್ತಿ ಇದೆ ಎಂದರು.

ಪ್ರತಿ ಬಾರಿಯೂ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಹೋಲಿಕೆ ಮಾಡಿಕೊಳ್ಳಬೇಡಿ ಎಂದು ಪ್ರತಿಪಕ್ಷದ ನಾಯಕರು ಹೇಳುತ್ತಾರೆ. ನಾವು ಒಕ್ಕೂಟ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದೇವೆ. ರಾಜ್ಯ ಸರ್ಕಾರಗಳು ಆರ್ಥಿಕವಾಗಿ ಸದೃಢವಾದರೆ ಕೇಂದ್ರ ಸರ್ಕಾರವು ಸದೃಢವಾಗುತ್ತದೆ. ಅದೇ ರೀತಿ ಕೇಂದ್ರ ಸರ್ಕಾರ ಸದೃಢವಾದರೆ ಸಾಮಾನ್ಯವಾಗಿ ರಾಜ್ಯಗಳು ಪ್ರಬಲವಾಗುತ್ತವೆ. ಇದಕ್ಕೇ ಒಕ್ಕೂಟ ವ್ಯವಸ್ಥೆ ಎಂದು ಹೇಳುವುದು. ರಾಜ್ಯ ಸರ್ಕಾರದ ಬಜೆಟ್ ಅನ್ನು ನಾವು ಮುಖ್ಯವಾಗಿ ಟಿಗೆ ಹೋಲಿಕೆ ಮಾಡಲು ಆಗುವುದಿಲ್ಲ, ಕೇಂದ್ರ ಸರ್ಕಾರಕ್ಕೆ ಹೋಲಿಕೆ ಮಾಡಬೇಕಾಗುತ್ತದೆ. ಕರ್ನಾಟಕದಿಂದ ಪ್ರತಿ ವರ್ಷ ಕೇಂದ್ರಕ್ಕೆ ಲಕ್ಷಾಂತರ ಕೋಟಿ ತೆರಿಗೆ ಪಾವತಿಸುತ್ತೇವೆ. 2025-26ರಲ್ಲಿ ಕರ್ನಾಟಕ ಕೇಂದ್ರಕ್ಕೆ 5 ಲಕ್ಷ ಕೋಟಿ ರೂ.ಗಿಂತಲೂ ಅಧಿಕ ತೆರಿಗೆ ಪಾವತಿಸಿದೆ. ಆದರೆ, ನಮಗೆ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬರುವುದು ಅಲ್ಪ ಪ್ರಮಾಣದ ಅನುದಾನ. ನಮ್ಮ ರಾಜ್ಯಕ್ಕೆ ಅನ್ಯಾಯವಾದಾಗ ನಾವು ಪ್ರಶ್ನೆ ಮಾಡಬೇಕಾಗುತ್ತದೆ. ಟೀಕೆ ಮಾಡದಿದ್ದರೆ ಅದನ್ನು ಸರ್ವಾಧಿಕಾರಿ ಧೋರಣೆ ಆಗುತ್ತದೆ ಎಂದು ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು.

ಬಜೆಟ್ ಮೇಲಿನ ಚರ್ಚೆಗೆ ಮುಖ್ಯಮಂತ್ರಿಗಳ ಉತ್ತರ ವೇಳೆ, ಬಜೆಟ್‌ನಲ್ಲಿ ದಲಿತರಿಗೆ ದೊಡ್ಡ ಮಟ್ಟದ ಅನ್ಯಾಯ ಮಾಡಲಾಗಿದೆ. ಮುಖ್ಯಮಂತ್ರಿಗಳ ಬಜೆಟ್ ಮೇಲಿನ ಉತ್ತರವೂ ನಮಗೆ ಬೇಸರ ತರಿಸಿದೆ ಎಂದು ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರ ನೇತೃತ್ವದಲ್ಲಿ ಪ್ರತಿಪಕ್ಷ ಸದಸ್ಯರು ಸಭಾತ್ಯಾಗ ಮಾಡಿದರು. ಬಿಜೆಪಿ ಸದಸ್ಯರ ಸಭಾತ್ಯಾಗದ ನಡುವೆಯೇ ಕರ್ನಾಟಕ ಧನ ವಿನಿಯೋಗ ವಿಧೇಯಕ ಅಂಗೀಕಾರವಾಯಿತು. ಬಿಜೆಪಿ ಸದಸ್ಯರು ದಲಿತ ವಿರೋಧಿ ಸರ್ಕಾರ ಎಂದು ಘೋಷಣೆ ಕೂಗಿದರೆ, ಅದಕ್ಕೆ ಪ್ರತಿಯಾಗಿ ಸಿಎಂ ಸಿದ್ದರಾಮಯ್ಯ, ಸಭಾನಾಯಕ ಎನ್.ಎಸ್.ಭೋಸರಾಜ್, ಎಚ್.ಸಿ.ಮಹಾದೇವಪ್ಪ ಹಾಗೂ ಇನ್ನಿತರೆ ಕಾಂಗ್ರೆಸ್ ಸದಸ್ಯರು ಬಿಜೆಪಿಗರು ಮನುವಾದಿಗಳು, ಪಲಾಯನವಾದಿಗಳು ಎಂದು ಜೋರಾಗಿ ಕೂಗಿದರು.

ವಿದೇಶ ಪ್ರಯಾಣ ದುಂದು ವೆಚ್ಚವಲ್ಲವೇ?

ಪುಟ 1➡ 2022-23ರಲ್ಲಿ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ 37 ಕೋಟಿ ರೂ. ಖರ್ಚು ಮಾಡಿದ್ದಾರೆ. ಅಲ್ಲದೇ, ಪ್ರಧಾನಿ ನರೇಂದ್ರ ಮೋದಿ ಅವರು ವಿದೇಶ ಪ್ರಯಾಣಕ್ಕೆ 814 ಕೋಟಿ ಹಣವನ್ನು ವೆಚ್ಚ ಮಾಡಿದ್ದಾರೆ. ಇದೆಲ್ಲ ವಿಪಕ್ಷದವರಿಗೆ ದುಂದುವೆಚ್ಚ ಅಲ್ಲವೇ? ಎಂದು ತಮ್ಮ ನಡೆಯನ್ನು ಮುಖ್ಯಮಂತ್ರಿಗಳು ಸಮರ್ಥಿಸಿಕೊಂಡರು.

ಪರಿಶಿಷ್ಟರ ಒಳ ಮೀಸಲು ಸದ್ಯಕ್ಕಿಲ್ಲ

ಪುಟ 1➡ ಒಳ ಮೀಸಲಾತಿ ಸಂಬಂಧಿಸಿ ವಿಶೇಷ ಸಚಿವ ಸಂಪುಟ ಸಭೆ ಶುಕ್ರವಾರ ನಿಗದಿಯಾಗಿತ್ತು. ಇದು ಸಾರ್ವತ್ರಿಕವಾಗಿರುವ ತಾತ್ವಿಕ ವಿಷಯ ಆಗಿರುವುದರಿಂದ ಅಡ್ವೊಕೇಟ್ ಜನರಲ್ ಅವರು ಮಾದರಿ ನೀತಿ ಸಂಹಿತೆಯ ಉಲ್ಲಂಘನೆಯಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದರು. ಆದ್ದರಿಂದ ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಅದನ್ನು ಮುಂದೂಡಲಾಗಿದೆ ಎಂದು ವಿವರಿಸಿದರು.

ಜಲಸಂಪನ್ಮೂಲ ಇಲಾಖೆಯಲ್ಲಿ 2003ರ ಮೊದಲು ನೇಮಕಾತಿ ಹೊಂದಿ ಇಲಾಖಾ ಬೇರ್ಪಡಿಕೆ ಸಂದರ್ಭದಲ್ಲಿ ಯಾವ ಇಲಾಖೆಗೆ ಸೇರುತ್ತೇವೆ ಎಂದು ಅಭಿಮತ ಸಲ್ಲಿಸದೇ ಜಲಸಂಪನ್ಮೂಲ ಇಲಾಖೆಯಲ್ಲೇ ಮುಂದುವರಿದಿರುವ 379 ಅಧಿಕಾರಿ ಹಾಗೂ ನೌಕರರನ್ನು ಜಲಸಂಪನ್ಮೂಲ ಇಲಾಖೆಯ ಆಯಾ ವೃಂದದ ಜ್ಯೇಷ್ಠತಾ ಪಟ್ಟಿಯಲ್ಲಿ ಪರಿಗಣಿಸಲು ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ ಎಂದು ಸಚಿವರು ತಿಳಿಸಿದರು.

ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ (ಆರ್‌ಬಿಎಸ್‌ಕೆ) ಯೋಜನೆಯಲ್ಲಿ ಅನುಮತಿಸಲಾದ 148 ಚಿಕಿತ್ಸಾ ಕಾರ್ಯವಿಧಾನಗಳು, ಅಲ್ಲದೇ ಆರ್‌ಬಿಎಸ್‌ಕೆ ಒಪ್ಪಂದ(ಎಂಒಯು)ದಲ್ಲಿ ಸೇರಿಲ್ಲದ ಹೆಚ್ಚಿನ ಚಿಕಿತ್ಸೆಗಳನ್ನು ಕೈಗೊಂಡಿದ್ದಕ್ಕಾಗಿ 2015-16ರಿಂದ 2018-19ನೇ ಆರ್ಥಿಕ ವರ್ಷದ ಬಾಕಿಯಿರುವ 23.30 ಕೋಟಿ ರೂ.ಗಳ ಮೊತ್ತದ ಬಿಲ್ಲುಗಳನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (ಎಸ್‌ಎಎಸ್‌ಟಿ) ಅನುದಾನದಿಂದ ಪಾವತಿಸಲು ಸಮ್ಮತಿಸಲಾಗಿದೆ ಎಂದರು.

ಅವರ ನಿಬಂಧನೆ ಮುದ್ದೆಗೆ ನಿವೃತ್ತ ಜಿಲ್ಲಾ ನ್ಯಾಯಾಧೀಶ ಎ.ಜಿ. ಗಂಗಾಧರ ಅವರನ್ನು ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಲು ಅನುಮೋದನೆ ನೀಡಲಾಗಿದೆ. ಅಲ್ಲದೆ, ಲೋಕೋಪಯೋಗಿ ಇಲಾಖೆಯ ಸಿಂದಗಿ ಉಪ ವಿಭಾಗದ ಅಂದಿನ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಪ್ರಶಾಂತ ಗಿಡ ದಾಸಪ್ಪಗೋಳ ವಿರುದ್ಧ ಕರ್ನಾಟಕ ಲೋಕಾ ಕಾಯ್ದೆಯಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಉಪ ಲೋಕಾಯುಕ್ತರು ಮಾಡಿರುವ ಶಿಫಾರಸ್ಸನ್ನು ಕೈಬಿಡಲು ತೀರ್ಮಾನಿಸಲಾಗಿದೆ ಎಂದು ಸಚಿವರು ತಿಳಿಸಿದರು.

ಶ್ರೀರಾಮೋತ್ಸವದ ಮಾತೃ ಸಮಾವೇಶದಲ್ಲಿ ರಾಘವೇಶ್ವರ ಶ್ರೀಗಳಿಂದ ಪ್ರದಾನ

3 ಮಕ್ಕಳ ತಾಯಂದಿರಿಗೆ ಧನ್ಯಜನನೀ ಪ್ರಶಸ್ತಿ

• **ಹೊಸನಗರ:** ಮೂರು ಅಥವಾ ಮೂರಕ್ಕಿಂತ ಹೆಚ್ಚು ಮಕ್ಕಳನ್ನು ಪಡೆದ 87 ಮಾತೆಯರಿಗೆ ಧನ್ಯಜನನೀ ಪ್ರಶಸ್ತಿಯನ್ನು ಶ್ರೀರಾಮಚಂದ್ರಾಪುರ ಮಠದ ಜಗದ್ಗುರು ಶಂಕರಾಚಾರ್ಯ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ನೀಡಿ ಗೌರವಿಸಿದರು.



ಹೊಸನಗರದ ಶ್ರೀ ರಾಮಚಂದ್ರಾಪುರ ಮಠದಲ್ಲಿ ನಡೆಯುತ್ತಿರುವ ಶ್ರೀರಾಮೋತ್ಸವದ ಮಾತೃ ಸಮಾವೇಶದಲ್ಲಿ ಮಾತನಾಡಿದ ಶ್ರೀಗಳು, ಸಂತಾನವೇ ಸಂಪತ್ತಾಗಿದ್ದು, ಮಕ್ಕಳು ಬೇಡ ಎಂಬ ಆಧುನಿಕ ಚಿಂತನೆ ದೇಶದ ವಿನಾಶಕ್ಕೆ ಕಾರಣವಾಗುವುದಾಗಿದೆ. ಮಿತ ಸಂತಾನದಿಂದ ಸಮಾಜ ದುರ್ಬಲವಾಗುವ ಆಪತ್ತು ಎದುರಾಗಿದ್ದು, ಸಮಾಜ ತಕ್ಷಣ ಎಚ್ಚೆತ್ತುಕೊಳ್ಳಬೇಕಿದೆ ಎಂದು ಹೇಳಿದರು.

ಮದುವೆಯ ಮೂಲ ಉದ್ದೇಶವೇ ಉತ್ತಮ ಸಂತಾನವನ್ನು ಪಡೆಯುವುದಾಗಿದ್ದು, ಒಂದೇ ಮಕ್ಕಳನ್ನು ಹೊಂದಿದರೆ ನಮ್ಮ ಜನಸಂಖ್ಯೆ ಅರ್ಧಕ್ಕೆ ಇಳಿದಂತೆ. ಇಬ್ಬರು ಮಕ್ಕಳನ್ನು ಪಡೆದರೆ ಅಲ್ಲಿಂದಲ್ಲಿಗೆ ಸರಿದೂಗುತ್ತದೆ. ಮೂರು ಮಕ್ಕಳನ್ನು ಪಡೆದಾಗ ಸಮಾಜ ಸಶಕ್ತವಾಗಲು ಸಾಧ್ಯ. ಮೂರು ಮಕ್ಕಳು ಎನ್ನುವಾಗ ತಲೆತಗ್ಗಿಸುವ ಅವಶ್ಯಕತೆ ಇಲ್ಲ, ಸಮಾಜ ಅಂತಹ ಮಾತೆಯರನ್ನು ಗೌರವಿಸಬೇಕಿದೆ ಎಂದರು.

ಡಿಸೆಂಬರ್ 2024 ರಲ್ಲಿ ನಡೆದ ತೃತೀಯ ವಿಶ್ವ ಹವ್ಯಕ ಸಮ್ಮೇಳನದಲ್ಲಿ ನಾವು ಈ ವಿಷಯವನ್ನು ಪ್ರಸ್ತಾಪಿಸಿದ್ದೆವು. ಅದು ಸಮಾಜದಲ್ಲಿ ಜಾಗೃತಿ ಮೂಡಿಸುತ್ತಿದ್ದು, ಹಿರಿಯ ವಯಸ್ಸಿನ ಅನೇಕರು ಯುವ ದಂಪತಿಗಳಿಗೆ ಮಕ್ಕಳೆಂಬ ಸಂಪತ್ತನ್ನು ಪಡೆಯುವಂತೆ ಪ್ರೇರಣೆ ನೀಡುತ್ತಿರುವುದು ಕಂಡುಬರುತ್ತಿದೆ. ತಾಯಿ ಎಂಬ ಪದವಿಯು ಜಗತ್ತಿನ ಎಲ್ಲಾ ಪದವಿಗಿಂತ ಬಹುದೊಡ್ಡ ಪದವಿಯಾಗಿದ್ದು, ಪ್ರಜಾ ಸಂಪತ್ತನ್ನು ಸಂವರ್ಧಿಸುವ ತಾಯಿಯನ್ನು ಸಮಾಜ ಗೌರವಿಸಬೇಕು. ಇಂದಿನ ಯುವ ಪೀಳಿಗೆ ಮದುವೆಯಲ್ಲಿ ಮೈಮರೆತು ಪ್ರಜಾ ಸಂವರ್ಧನೆಯ ಕರ್ತವ್ಯದಿಂದ ದೂರವಾಗುತ್ತಿರುವುದು ಆತಂಕಕಾರಿ ಎಂದು ಕಳವಳ ವ್ಯಕ್ತಪಡಿಸಿದರು.

ಕಂಚಿಯ ಪರಮಾಚಾರ್ಯರು ಕೆಲವು ದಶಕಗಳ ಮೊದಲು 10 ಮಕ್ಕಳನ್ನು ಹೆತ್ತ ತಾಯಿಗೆ ವೀರಮಾತಾ ಪ್ರಶಸ್ತಿ ನೀಡಿ ಆಶೀರ್ವಾದ ಮಾಡುತ್ತಿದ್ದರು. ಅಭಿನವ ಶಂಕರರಾದ ಅವರು ಪ್ರಜಾ ಸಂಪತ್ತಿನ ಮಹತ್ವವನ್ನು ಅಂದೇ ಗುರುತಿಸಿದ್ದರು ಎಂದು ಅಭಿಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ ರಾಮೋತ್ಸವದ ಪ್ರಯುಕ್ತ ಪುಷ್ಪ ರಥೋತ್ಸವ, ಪೂಗ ಪೂಜೆ, ಮಾತೆಯರಿಂದ ಕುಂಕುಮಾರ್ಚನೆ, ಅಖಂಡ ಭಜನೆಗೆ ಚಾಲನೆ ದೊರೆಯಿತು. ನಾಳೆ ಹಾಗೂ ನಾಡಿದ್ದು ರಾಮೋತ್ಸವದ ಅಂಗವಾಗಿ ರಾಮಜನ್ಮೋತ್ಸವ, ರಥೋತ್ಸವ, ಸೀತಾರಾಮ ಪಟ್ಟಾಭಿಷೇಕ ಸೇರಿದಂತೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ.

ಎಸ್ಸೆಸ್ಸೆಲ್ಸಿ 30ರ ಪರೀಕ್ಷೆ 31ಕ್ಕೆ ಮುಂದೂಡಿಕೆ

• **ಬೆಂಗಳೂರು:** 2026ನೇ ಸಾಲಿನ ಎಸ್ಎಸ್ಎಲ್‌ಸಿ ಪರೀಕ್ಷೆ ವೇಳಾಪಟ್ಟಿಯಲ್ಲಿ ಮಹತ್ವದ ಬದಲಾವಣೆ ಮಾಡಿದ್ದು, ಮಹಾವೀರ ಜಯಂತಿ ರಜೆ ಬದಲಾವಣೆ ಹಿನ್ನೆಲೆಯಲ್ಲಿ ಮಾ.30 ರಂದು ನಿಗದಿಯಾಗಿದ್ದ ತೃತೀಯ ಭಾಷೆ ಪರೀಕ್ಷೆಯನ್ನು ಮಾ.31 ಕ್ಕೆ ಮುಂದೂಡಲಾಗಿದೆ. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಈ ಹಿಂದೆ ಪ್ರಕಟಿಸಿದ್ದ ಅಂತಿಮ ವೇಳಾಪಟ್ಟಿ ಪ್ರಕಾರ ಮಾ.30 ರಂದು ತೃತೀಯ ಭಾಷೆ ಪರೀಕ್ಷೆಯನ್ನು ನಡೆಸಲು ನಿರ್ಧರಿಸಲಾಗಿತ್ತು. ಆದರೆ, ರಾಜ್ಯ ಸರ್ಕಾರವು ಮಹಾವೀರ ಜಯಂತಿ ಪ್ರಯುಕ್ತ ನೀಡಲಾಗಿದ್ದ ಸಾರ್ವತ್ರಿಕ ರಜೆಯನ್ನು ಮಾ.31ರ ಬದಲಾಗಿ ಮಾ.30 ರಂದು ಬದಲಾಯಿಸಿ ಆದೇಶಿಸಿದೆ. ಈ ಸರ್ಕಾರದ ಹೊಸ ಆದೇಶದ ಹಿನ್ನೆಲೆ ಪರೀಕ್ಷಾ ವೇಳಾಪಟ್ಟಿಯಲ್ಲಿ ಬದಲಾವಣೆ ಮಾಡಲಾಗಿದೆ. ಉಳಿದ ವಿಷಯಗಳ ಪರೀಕ್ಷೆಗಳಲ್ಲಿ ಯಾವುದೇ ಬದಲಾವಣೆಯಾಗಿಲ್ಲ.

ಕಿರುಸುದ್ದಿ

ಯಶಸ್ವಿ ಅಧಿವೇಶನ

• **ಬೆಂಗಳೂರು:** ಹದಿನಾರನೇಯ ವಿಧಾನಸಭೆಯ 9ನೇ ಅಧಿವೇಶನದ ಮುಂದುವರಿದ ಉಪವೇಶನವು ಯಶಸ್ವಿಯಾಗಿ ನಡೆದಿದ್ದು, ಎರಡು ದಾಖಲೆಗಳಾಗಿವೆ ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ತಿಳಿಸಿದರು. ವಿಧಾನಸಭೆಯ ಕಾರ್ಯಕಲಾಪವನ್ನು ಗುರುವಾರ ಅನಿರ್ದಿಷ್ಟ ಅವಧಿಗೆ ಮುಂದೂಡಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು ಕಾರ್ಯಕಲಾಪಗಳ ಸಂಕ್ಷಿಪ್ತ ಮಾಹಿತಿ ನೀಡಿದರು. ಮಾ. 6ರಿಂದ 26ರವರೆಗೆ ಒಟ್ಟು 13 ದಿನಗಳ ಕಾಲ 80 ತಾಸು 12 ನಿಮಿಷಗಳ ಕಾಲ ಕಾರ್ಯಕಲಾಪ ನಡೆಸಲಾಗಿದೆ. 2026-27ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಮಾ.6ರಂದು ಮುಖ್ಯಮಂತ್ರಿಯವರು ಮಂಡಿಸಿದ್ದು, ಅದರ ಕುರಿತ ಸಾಮಾನ್ಯ ಚರ್ಚೆ ಮತ್ತು ಅನುದಾನಗಳ ಬೇಡಿಕೆಗಳ ಕುರಿತಾದ ಚರ್ಚೆಯಲ್ಲಿ 50 ಸದಸ್ಯರು ಭಾಗವಹಿಸಿ 24 ತಾಸು 45 ನಿಮಿಷಗಳ ಕಾಲ ಮಾತನಾಡಿದ್ದು ದಾಖಲೆಯಾಗಿದೆ. ಮಾ.24ರಂದು ಬೆಳಗ್ಗೆ 11.35ಕ್ಕೆ ಪ್ರಾರಂಭವಾದ ಸದನವು ಮರುದಿನ ಮುಂಜಾನೆ 1.42ರವರೆಗೆ (12 ತಾಸು 41 ನಿಮಿಷಗಳು) ನಡೆಸಿರುವುದು ಕೂಡ ದಾಖಲೆಯಾಗಿದೆ ಎಂದರು. ಅಧಿವೇಶನದಲ್ಲಿ ಧನವಿನಿಯೋಗ ವಿಧೇಯಕಗಳೂ ಸೇರಿದಂತೆ ಒಟ್ಟು 12 ವಿಧೇಯಕಗಳನ್ನು ಮಂಡಿಸಿ, 11 ವಿಧೇಯಕಗಳನ್ನು ಅಂಗೀಕರಿಸಲಾಗಿದೆ. ನಿಯಮ 60ರಡಿಯಲ್ಲಿ ನೀಡಿದ್ದ ಎರಡು ನಿಲುವಳಿ ಸೂಚನೆಗಳನ್ನು ನಿಯಮ 69ಕ್ಕೆ ಪರಿವರ್ತಿಸಿರುವುದು ಸೇರಿ ಒಟ್ಟು ಐದು ಸೂಚನೆಗಳನ್ನು ನಿಯಮ 69ರಡಿಯಲ್ಲಿ ಚರ್ಚಿಸಲಾಗಿದೆ. ಒಟ್ಟು 15 ಅರ್ಜಿಗಳನ್ನು ಸದನಕ್ಕೆ ಒಪ್ಪಿಸಲಾಗಿದೆ. ಒಟ್ಟು 2,791 ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು, ಸದನದಲ್ಲಿ ಉತ್ತರಿಸಬೇಕಾಗಿದ್ದ 195 ಪ್ರಶ್ನೆಗಳ ಪೈಕಿ 180 ಪ್ರಶ್ನೆಗಳಿಗೆ; ಲಿಖಿತ ಮೂಲಕ ಉತ್ತರಿಸುವ 2,503 ಪ್ರಶ್ನೆಗಳ ಪೈಕಿ 2,254 ಪ್ರಶ್ನೆಗಳಿಗೆ ಉತ್ತರಗಳನ್ನು ಸ್ವೀಕರಿಸಲಾಗಿದೆ. ನಿಯಮ 351ರಡಿಯಲ್ಲಿ ಸ್ವೀಕೃತವಾದ 217 ಸೂಚನೆಗಳ ಪೈಕಿ 101 ಸೂಚನೆಗಳಿಗೆ, ಗಮನಸೆಳೆಯುವ 323 ಸೂಚನೆಗಳ ಪೈಕಿ 158 ಸೂಚನೆಗಳಿಗೆ ಚರ್ಚಿಸಿ ಉತ್ತರಗಳನ್ನು ಸ್ವೀಕರಿಸಲಾಗಿದೆ ಎಂದು ವಿವರಿಸಿದರು.

1ನೇ ತರಗತಿ ಪ್ರವೇಶಕ್ಕೆ ಎರಡು ತಿಂಗಳ ವಿನಾಯಿತಿ

• **ವಿಧಾನಸಭೆ:** ಒಂದನೇ ತರಗತಿ ಪ್ರವೇಶಕ್ಕೆ 6 ವರ್ಷ ತುಂಬಬೇಕೆಂಬ ಕಡ್ಡಾಯ ನಿಯಮದಲ್ಲಿ 2026-27ನೇ ಶೈಕ್ಷಣಿಕ ವರ್ಷಕ್ಕೆ ಅನ್ವಯವಾಗುವಂತೆ ಸರ್ಕಾರ ವಿನಾಯ್ತಿ ನೀಡಿದೆ. ಈ ಕುರಿತು ವಿಧಾನಸಭೆಯಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಘೋಷಣೆ ಮಾಡಿದ್ದಾರೆ. ಒಂದನೇ ತರಗತಿ ದಾಖಲಾತಿಗೆ 6 ವರ್ಷ ತುಂಬಿರಲೇಬೇಕೆಂಬ ನಿಯಮದಲ್ಲಿ ಈ ವರ್ಷವೂ ವಿನಾಯಿತಿ ನೀಡಲಾಗಿದೆ. 60 ದಿನಗಳ ಸಡಿಲಿಕೆ ನೀಡಲು ತೀರ್ಮಾನಿಸಲಾಗಿದೆ. 2 ತಿಂಗಳ ರಿಯಾಯಿತಿ ತರುತ್ತೇವೆ. ಅದರಂತೆ 2026-27ನೇ ಶೈಕ್ಷಣಿಕ ವರ್ಷದಲ್ಲಿ ಒಂದನೇ ತರಗತಿ ದಾಖಲಾತಿ ಸಂಬಂಧ 60 ದಿನಗಳ ವಿನಾಯಿತಿ ನೀಡಲಾಗಿದೆ ಎಂದು ತಿಳಿಸಿದರು. ಈ ಸಂಬಂಧ ದಾಖಲಾತಿ ತಂತ್ರಾಂಶದಲ್ಲಿ ಬದಲಾವಣೆ ಮಾಡಲಾಗುತ್ತದೆ. ಒಂದನೇ ತರಗತಿ ದಾಖಲಾತಿಗೆ 6 ವರ್ಷದ ಕಡ್ಡಾಯ ನಿಯಮಕ್ಕೆ ಹೊಂದಿಕೊಳ್ಳುವಂತೆ ಇತ್ತ ಎಲ್‌ಕೆಜಿ, ಯುಕೆಜಿ ಮಟ್ಟದಲ್ಲೇ ದಾಖಲಾತಿ ವಯೋಮಿತಿ ನಿಗದಿ ಮಾಡುವ ಸಂಬಂಧ ಕಾಯ್ದೆ ತರಲಾಗುವುದು. ಎಲ್‌ಕೆಜಿ, ಯುಕೆಜಿಗೆ ಮಕ್ಕಳ ದಾಖಲಾತಿಗೆ ಈಗ ವಯೋಮಿತಿ ನಿಗದಿ ಮಾಡುವ ಕಾನೂನು ಇಲ್ಲ, ಹೀಗಾಗಿ ದಾಖಲಾತಿಗೆ ಸಮಸ್ಯೆಯಾಗುತ್ತಿದೆ. ಒಂದನೇ ತರಗತಿಗೆ 6 ವರ್ಷ ತುಂಬಿರಬೇಕು ಎಂಬ ಕಡ್ಡಾಯ ನಿಯಮಕ್ಕೆ ಎಲ್‌ಕೆಜಿ, ಯುಕೆಜಿಗೆ ಮಕ್ಕಳ ದಾಖಲಾತಿ ವಯೋಮಿತಿ ನಿಗದಿ ಸಂಬಂಧ ಕಾಯ್ದೆಯನ್ನು ರೂಪಿಸಿ ಮುಂದಿನ ಅಧಿವೇಶನದಲ್ಲಿ ಮಂಡಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಇಂಗಿತ

ವಿಚಾರಧಾರೆ ನಿರಂತರ

• **ಮೈಸೂರು:** ಭಾರತೀಯ ವಿಚಾರಧಾರೆಯು ನಿರಂತರವಾದ ಜ್ಞಾನಪ್ರವಾಹ. ಭಾರತೀಯ ವಿಶ್ವ ದರ್ಶನವನ್ನು ಲೋಕಭಾಷೆಯಲ್ಲಿ ನೀಡಬೇಕು. ಸಾಮಾನ್ಯ ಜನರೂ ಅದನ್ನು ಅಳವಡಿಸಿಕೊಳ್ಳುವಂತಾಗಬೇಕು ಎಂದು ಕೇಂದ್ರ ಉನ್ನತ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದರು.



ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಆಯೋಜಿಸಲಾದ ಏಕಾತ್ಮ ಮಾನವ ದರ್ಶನ ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದರು. ದೀನ ದಯಾಳ್ ಉಪಾಧ್ಯಾಯರು ಏಕಾತ್ಮ ಮಾನವ ದರ್ಶನದಲ್ಲಿ ಮಾನವನ ಸಮಗ್ರತೆಯನ್ನು ಗುರುತಿಸಿದ್ದರು. ಅದರ ಆಧಾರಿತವಾಗಿಯೇ ಹಲವು ಯೋಜನೆಗಳನ್ನು ಕೇಂದ್ರ ಸರ್ಕಾರದ ವತಿಯಿಂದ ರೂಪಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಭಾರತವನ್ನು 2047ರ ಹೊತ್ತಿಗೆ ವಿಕಸಿತ ಭಾರತವನ್ನಾಗಿಸಬೇಕು ಎಂದು ಕರೆಕೊಟ್ಟಿದ್ದಾರೆ ಎಂದರು.

ಸಂಶೋಧಕರಾದ ಡಾ. ಎಂ ಎಸ್ ಚೈತ್ರಾ ಮಾತನಾಡಿ, ಶಿಕ್ಷಣ ಕ್ಷೇತ್ರದಲ್ಲಿ ಭಾರತೀಯ ವಿಷಯಗಳ ಕುರಿತು ತಿಳಿಸುವ ಮತ್ತು ಶಿಕ್ಷಣ ಕ್ಷೇತ್ರದ ನಿರ್ವಸಾಹತೀಕರಣ ಸುಲಭದ ಕೆಲಸವಲ್ಲ, ಏಕೆಂದರೆ ಅವುಗಳನ್ನು ಮಕ್ಕಳಿಗೆ ತಲುಪಿಸುವ ಶಿಕ್ಷಕರು ಮತ್ತು ತರಗತಿ ಶಿಕ್ಷಣದ ಕುರಿತು ಇಲ್ಲಿಯವರೆಗೂ ನಾವು ಗಂಭೀರವಾಗಿ ಯೋಚಿಸಿಲ್ಲ, ಶಿಕ್ಷಕರನ್ನು ಮತ್ತು ತರಗತಿ ಶಿಕ್ಷಣದಲ್ಲಾಗಬೇಕಾದ ಬದಲಾವಣೆಯ ಕುರಿತು ಯೋಚಿಸಬೇಕಾಗಿದೆ ಎಂದು ಹೇಳಿದರು.

ವಿದ್ಯಾರ್ಥಿಗಳನ್ನಂತೆ ತಾನಿದ್ದು ಕಲಿಯುವ ವಾತಾವರಣವನ್ನು ಕಲ್ಪಿಸುವುದಕ್ಕೆ ಸಾಧ್ಯಗುತ್ತದೆಯೇ ಎನ್ನುವುದನ್ನು ಚಿಂತಿಸಬೇಕು. ನಮ್ಮ ಶೈಕ್ಷಣಿಕ ಸಾಂಸ್ಕೃತಿಕ ಸೋಲಿನ ಕುರಿತು ಮರುಚಿಂತನೆ ಅಗತ್ಯ. ನಮ್ಮ ರಾಷ್ಟ್ರದ ಶಿಕ್ಷಣಪದ್ಧತಿಯ ತಳಹದಿ ಗುರುಶಿಷ್ಯ ಪರಂಪರೆ. ಅದರ ಆಧಾರದ ಮೇಲೆಯೇ ನಮ್ಮ ಸಂಸ್ಥೆಗಳನ್ನು ಭಾರತೀಯಕರಣಗೊಳಿಸಬೇಕು ಎಂದು ಅಭಿಪ್ರಾಯಪಟ್ಟರು. ಕರ್ನಾಟಕರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಶರಣಪ್ಪ ಹಲಸೆ, ಡಾ. ಶ್ಯಾಮಪ್ರಸಾದ್ ಮುಖರ್ಜಿ ಸಂಶೋಧನಾ ಫೌಂಡೇಶನ್‌ನ ಟ್ರಸ್ಟಿ ಎಂ ಮದನ್ ಗೋಪಾಲ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಭಾರತದ ಶ್ರೇಷ್ಠ ಕೊಡುಗೆ ಪುರುಷಾರ್ಥಗಳು

ಪುರುಷಾರ್ಥಗಳು ವೈಜ್ಞಾನಿಕವಾಗಿದ್ದರೂ ತಪ್ಪಾಗಿ ನಿರೂಪಿಸಲಾಗಿದೆ ಮತ್ತು ಸರಿಯಾಗಿ ಪ್ರತಿನಿಧಿಸಲಾಗಿಲ್ಲ. ಮೈಸೂರಿನ ಖ್ಯಾತ ವಿದ್ವಾಂಸರಾದ ಹಿರಿಯಣ್ಣ ಅವರು ಎಲ್ಲಾ ಮೌಲ್ಯಗಳ ನಿಜವಾದ ಸಾರ ಪುರುಷಾರ್ಥಗಳು. ಭಾರತೀಯ ತತ್ತ್ವಶಾಸ್ತ್ರವೆನ್ನುವುದು ಮೌಲ್ಯಗಳ ಅಧ್ಯಯನ ಎಂದು ಹೇಳಿದ್ದಾರೆ. ಪುರುಷಾರ್ಥಗಳು ಜಗತ್ತಿನ ಪರಂಪರೆಗೆ ಭಾರತದ ಶ್ರೇಷ್ಠ ಕೊಡುಗೆ ಎಂದು ವಿದ್ವಾಂಸ ಶತಾವಧಾನಿ ಡಾ. ಆರ್. ಗಣೇಶ್ ಹೇಳಿದರು. ಧರ್ಮದ ವಿರುದ್ಧವಲ್ಲದ ಆಸೆ ಪಾಲಿಸುವುದಾದ ಮೌಲ್ಯವಾಗುತ್ತದೆ, ಧರ್ಮದ ವಿರುದ್ಧವಾದ ಆಸೆ ಕೋಟೆಯೇ ಶತ್ರುವಾಗುತ್ತದೆ. ಗಳಿಸಿದ ತೃಪ್ತಿಯ ವ್ಯವಸ್ಥೆಯನ್ನು ಅರ್ಥವೆನ್ನುತ್ತೇವೆ. ಅರ್ಥ ಮತ್ತು ಕಾಮದ ಎಲ್ಲಾ ಆಯಾಮವನ್ನು ಬೆಳಗುವ ಶೈಲಿಯಾಗಿ ಧರ್ಮ ಕಾರ್ಯನಿರ್ವಹಿಸುತ್ತದೆ. ಸಾಕ್ಷಾತ್ಕಾರದ ಸ್ಥಿತಿಯೇ ಮೋಕ್ಷ. ಪ್ರಜ್ಞಾಪ್ರವಾಹದ ಯುವ ಆಯಾಮದ ಕರ್ನಾಟಕ ಉತ್ತರ ಪ್ರಾಂತ ಸಂಯೋಜಕ ಪುನೀತ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬಳಸುವ ಪ್ರತಿಪದದ ಸ್ಪಷ್ಟತೆ ಇರಲಿ: ನಂದಕುಮಾರ್

ಭಾರತೀಯ ಇತಿಹಾಸವನ್ನು ಗಮನಿಸಿದಾಗ ನಾವು ಬಳಸುವ ಪದಗಳ ಕುರಿತಾದ ಸ್ಪಷ್ಟತೆ ನಮ್ಮಲ್ಲಿಲ್ಲ. ವೈಚಾರಿಕ ವಲಯದಲ್ಲಿ ನಾವು ಬಳಸುವ ಪ್ರತಿಪದದ ಕುರಿತೂ ಸ್ಪಷ್ಟತೆ ನಮಗಿರಬೇಕು. ಇಲ್ಲದಿದ್ದರೆ ಮನಸೋಹಕಾಸಿಗಳು ಮಾಡಿದಂತೆಯೇ ಆ ಪದಗಳ ಕುರಿತು ತಪ್ಪು ವ್ಯಾಖ್ಯಾನವನ್ನು ಇತರರು ಮಾಡುತ್ತಾರೆ. ಎಂದು ಪ್ರಜ್ಞಾಪ್ರವಾಹದ ಅಖಿಲ ಭಾರತೀಯ ಸಂಯೋಜಕ ಜೆ. ನಂದಕುಮಾರ್ ಹೇಳಿದರು. ರಾಷ್ಟ್ರವನ್ನು ಅರ್ಥೈಸಿಕೊಳ್ಳಲು ಯಾವ ದೃಷ್ಟಿಕೋನದಲ್ಲಿ ನಾವು ನೋಡುತ್ತೇವೆ ಎನ್ನುವುದನ್ನು ಮೊದಲು ನೋಡಬೇಕು ಎನ್ನುವುದನ್ನು ದೀನ ದಯಾಳ ಉಪಾಧ್ಯಾಯರು ತಿಳಿಸಿದ್ದಾರೆ. ರಾಷ್ಟ್ರವನ್ನು ಏಕಾತ್ಮತೆಯ ದೃಷ್ಟಿಕೋನದಲ್ಲಿ ನೋಡಬೇಕು ಎಂದು ತಿಳಿಸಿದ್ದಾರೆ.

ಸುದೀರ್ಘವಾದ ಉತ್ತರ ನೀಡಿದ ಮುಖ್ಯಮಂತ್ರಿ

ಸಾಮಾಜಿಕ ನ್ಯಾಯದ ಬಜೆಟ್: ಸಿದ್ದರಾಮಯ್ಯ

• **ವಿಧಾನಪರಿಷತ್:** ಮಹಾತ್ಮಗಾಂಧಿ ಅವರ ಸರ್ವೋದಯ, ಅಂತ್ಯೋದಯ ಸದಾಶಯ, ಡಾ. ಬಿ.ಆರ್. ಅಂಬೇಡ್ಕರ್ ಅವರ ಸಾಮಾಜಿಕ ನಿಷ್ಠೆ ಹಾಗೂ ಬಸವಣ್ಣನವರ ಸಮಾನತೆಯ ತತ್ವದ ಅಡಿ ಕಾಂಗ್ರೆಸ್ ಸರ್ಕಾರ ಮುನ್ನಡೆಯುತ್ತಿದೆ. ಕೇಂದ್ರ ಸರ್ಕಾರದ್ದು ಟ್ರಿಕಲ್ ಡೌನ್ ಆರ್ಥಿಕ ನೀತಿಯಾಗಿದ್ದರೆ, ಯುನಿವರ್ಸಲ್ ಬೇಸಿಕ್ ಇಕನಾಮಿಕ್ ನಮ್ಮ ಧ್ಯೇಯ. 2026-27ನೇ ಸಾಲಿಗೆ ಮಂಡಿಸಿರುವ ಮುಂಗಡ ಪತ್ರ ಸಾಮಾಜಿಕ ನ್ಯಾಯದ ಬಜೆಟ್ ಎಂದು ಸಿಎಂ ಸಿದ್ದರಾಮಯ್ಯ ಬಣ್ಣಿಸಿದರು.



ಬಜೆಟ್ ಮೇಲೆ ನಡೆದ ಚರ್ಚೆಗೆ ಸುದೀರ್ಘವಾದ ಉತ್ತರ ನೀಡಿದ ಮುಖ್ಯಮಂತ್ರಿ, ಟ್ರಿಕಲ್ ಡೌನ್ ಆರ್ಥಿಕತೆ ಎಂದರೆ ಕಾರ್ಪೊರೇಟ್ ಪರ, ಉಳ್ಳವರ ಹಿತ ಕಾಯುವ ನೀತಿ. ನಮ್ಮದು ಟ್ರಿಕಲ್ ಡೌನ್ ಅಲ್ಲ, ಬಡವರ ಉದ್ಧಾರವೇ ಯುನಿವರ್ಸಲ್ ಬೇಸಿಕ್ ಇಕಾನಮಿಕ್ ಥೇರಿ. ಸಮಾಜದಲ್ಲಿ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಅಸಮಾನತೆ ನಿವಾರಣೆಯಲ್ಲಿ ಸರ್ಕಾರದ ಗ್ಯಾರಂಟಿ ಯೋಜನೆಗಳು ಮಹತ್ವದ ಪಾತ್ರ ವಹಿಸುತ್ತಿವೆ.

ಧರ್ಮ, ಭಾಷೆಗಳನ್ನು ಮೀರಿ ಎಲ್ಲ ವರ್ಗದ 1.26 ಕೋಟಿ ಮಹಿಳೆಯರಿಗೆ ಗೃಹ ಲಕ್ಷ್ಮಿ ಹಣ ತಲುಪಿದೆ. ಬಡವರಲ್ಲಿ ಖರೀದಿಸುವ ಶಕ್ತಿ ತುಂಬಿದೆ. ಜನರನ್ನು ಆರ್ಥಿಕವಾಗಿ ಸಶಕ್ತರನ್ನಾಗಿಸಬೇಕು ಎಂಬುದೇ ಸಂವಿಧಾನ ಶಿಲ್ಪಿ ಡಾ.ಬಾಬಾ ಸಾಹೇಬರ ವಾದವಾಗಿತ್ತು ಎಂದರು.

ಎಂಎಲ್‌ಸಿ ಅನುದಾನ ಹೆಚ್ಚಳಕ್ಕೆ ಆಗ್ರಹ

ವಿಧಾನಸಭೆ ಶಾಸಕರಿಗೆ 25 ರಿಂದ 30 ಕೋಟಿ ರೂ. ಕ್ಷೇತ್ರಾಭಿವೃದ್ಧಿ ನಿಧಿ ನೀಡುವಂತೆ ಮೇಲ್ಮನೆ ಶಾಸಕರಿಗೂ ಕನಿಷ್ಠ 5 ಕೋಟಿ ರೂ. ಅನುದಾನ ಒದಗಿಸಬೇಕು. ಮೂರ್ನಾಲ್ಕು ಜಿಲ್ಲೆಗಳ ವ್ಯಾಪ್ತಿಯನ್ನು ಹೊಂದಿರುವ ಎಂಎಲ್‌ಸಿಗಳು ತಮ್ಮ ಕ್ಷೇತ್ರದಲ್ಲಿ ಕೆಲಸ ಮಾಡಲು ಅನುಕೂಲವಾಗುತ್ತದೆ. ಬಹುತೇಕ ಶಾಸಕರು ಶಿಕ್ಷಣ ಸಂಸ್ಥೆಗಳಿಗೆ ಅನುದಾನ ಒದಗಿಸುವುದರಿಂದ ಶೈಕ್ಷಣಿಕ ಪ್ರಗತಿಗೆ ಅನುಕೂಲವಾಗುತ್ತದೆ ಎಂದು ಮೇಲ್ಮನೆ ಸದಸ್ಯರಾದ ಭೋಜೇಗೌಡ, ಶರವಣ ಒತ್ತಾಯಕ್ಕೆ ಸಭಾಪತಿ ಬಸವರಾಜ್ ಹೊರಟ್ಟಿಯೂ ಧ್ವನಿಗೂಡಿಸಿದರು. ಅದಕ್ಕೆ ಉತ್ತರಿಸಿದ ಸಿಎಂ ಸಿದ್ದರಾಮಯ್ಯ, ಈಗಾಗಲೇ ಬಜೆಟ್ ಮಂಡನೆಯಾಗಿರುವುದರಿಂದ ಪೂರಕ ಬಜೆಟ್‌ನಲ್ಲಿ ಈ ಪ್ರಸ್ತಾವನೆಯನ್ನು ಪರಿಗಣಿಸುವುದಾಗಿ ಭರವಸೆ ನೀಡಿದರು.

₹16 ಸಾವಿರ ಕೋಟಿ ಸಾಲ: ಛಲವಾದಿ

• **ವಿಧಾನಪರಿಷತ್:** ಬಜೆಟ್ ಗಾತ್ರ ಹಿಗ್ಗಿಸಿ ಸಾಲ ಹೆಚ್ಚು ಮಾಡಿಕೊಳ್ಳುವ ಬದಲು ಹಣ ಉಳಿಸುವ ನಿಟ್ಟಿನಲ್ಲಿ ಬಜೆಟ್ ಮಂಡಿಸದ ಪರಿಣಾಮ, ರಾಜ್ಯದ ಸಾಲ 16 ಸಾವಿರ ಕೋಟಿ ರೂ. ದಾಟಿದೆ. 17 ಬಾರಿ ಬಜೆಟ್ ಮಾಡಿ ಸಾಧನೆ ಮಾಡಿದರೂ, ಸಾಲದ ಗಾತ್ರ ಹಿಗ್ಗಿಸಿದ್ದೇ ಸರ್ಕಾರದ ಸಾಧನೆಯಾಗಿದೆ ಎಂದು ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ತಿಳಿಸಿದರು.

ಗುರುವಾರ ಮೇಲ್ಮನೆಯಲ್ಲಿ ಸಿಎಂ ಸಿದ್ದರಾಮಯ್ಯ ಅವರು ದಾಖಲೆಯ ಮುಂಗಡಪತ್ರದ ಬಗ್ಗೆ ಕಿಡಿಕಾರಿದರು. 17ನೇ ಬಾರಿ ಬಜೆಟ್ ಮಂಡಿಸುವ ಅವಕಾಶ ಎಲ್ಲರಿಗೂ ಸಿಗುವುದಿಲ್ಲ, ಮುಖ್ಯಮಂತ್ರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಜತೆಗೆ ಅವರ ಅನುಭವದ ಪ್ರಕಾರ, ಕೊರತೆ ಬಜೆಟ್ ಮಂಡಿಸದೇ ಮಾಡಬೇಕಾಗಿತ್ತು. ಅವರ ದೃಷ್ಟಿಕೋನ ಬದಲಾಗಿಲ್ಲ, ಸಿದ್ದರಾಮಯ್ಯ ಅವರ ಬಹುತೇಕ ಬಜೆಟ್‌ಗಳು ಡೆಫಿಸಿಟ್ ಬಜೆಟ್ ಆಗಿಯೇ ಇವೆ ಎಂದರು.

ದಾಖಲೆ ಬಜೆಟ್ ಮಂಡಿಸಿದ್ದರೂ, ಸಾಲದ ದಾಖಲೆ ಮಾಡಿದ್ದಾರೆ. ಈ ಬಜೆಟ್‌ನಲ್ಲಿ ಎಷ್ಟು ಉಳಿತಾಯ ಮಾಡಿದ್ದೀರಿ, ಜನರಿಗೆ ಏನೆಲ್ಲ ಅನುಕೂಲವಾಗಿದೆ ಎಂಬ ಬಗ್ಗೆ ಹೇಳಬೇಕಿತ್ತು. ವಿತ್ತೀಯ ಶಿಸ್ತು ಅಂತೀರಿ, ಸುಸ್ತು ಎಂಬಂತಾಗಿದೆ. ತೆರಿಗೆ ಸಂಗ್ರಹದಲ್ಲಿ ಕಡಿತವಾಗಿದ್ದರಿಂದ ಆದಾಯ ಕುಸಿದಿದೆ. ಯಾವಾಗಲೂ ಕೇಂದ್ರದ ಮೇಲೆ ಬೊಟ್ಟು ಮಾಡಿ ಮಾತನಾಡುತ್ತಾರೆ. ನಿರ್ಮಲಾ ಸೀತಾರಾಮನ್, ಮೋದಿ ಬಗ್ಗೆ ಮಾತನಾಡುವ ಮುನ್ನ ಉತ್ತಮ ಬಜೆಟ್ ಮಂಡಿಸಿ ಬಳಿಕ ಕೇಂದ್ರದ ಬಗ್ಗೆ ಮಾತನಾಡಿ ಎಂದು ಟೀಕಿಸಿದರು.

ಡಿಫಿಸಿಟ್ ಬಜೆಟ್ ಮಂಡಿಸಿದ್ದ ಅಭಿವೃದ್ಧಿ ಯೋಜನೆ ನನೆಗುದಿಗೆ, ಮೂಲಸೌಕರ್ಯ ಮೂಲೆಗೆ, ಸಮಾಜ ಕಲ್ಯಾಣ ಮತ್ತು ಹಿಂದುಳಿದ ಇಲಾಖೆಗೆ ಚಿಪ್ಪು ಎನ್ನುವ ರೀತಿ ಜನ ಹೊರಗೆ ಟೀಕೆ ಮಾಡುತ್ತಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಿಟ್ಟ ಅನುದಾನ ದುರ್ಬಳಕೆಯಾಗಿದೆ ಎಂದರು.

ಮೋದಿ ಧುರಂಧರ್

ಅಧಿಕಾರ ನಡೆಸುವವರಿಗೆ ಸಂಯಮ ಬಹಳ ಮುಖ್ಯ ಯಾವ ಸಂದರ್ಭದಲ್ಲಿ ನಮಗೆ ಕಷ್ಟ ಬರುತ್ತದೆಯೋ ಆಗ ಸಂಯಮವಾಗಿರಬೇಕು. ಗೆಲುವಿನ ಸಂದರ್ಭದಲ್ಲಿ ಹೇಗಿರಬೇಕು ಎಂಬುದನ್ನು ಕೂಡ ನಾಯಕರು ಅರ್ಥ ಮಾಡಿಕೊಳ್ಳಬೇಕು. ಆಪರೇಷನ್ ಸಿಂದೂರದ ಮೂಲಕ ಮೋದಿ ಅವರು ಗೆಲುವು ಪಡೆದರು. ಇದಕ್ಕೆ ಹೇಳುವುದು ನರೇಂದ್ರ ಮೋದಿ ಸರೆಂಡರ್ ಅಲ್ಲ, ಅವರು ಧುರಂಧರ್ ಎಂದು ಛಲವಾದಿ ಹೇಳಿದರು.



ಕರಾವಳಿ ಮಂಡಳಿ ತಿದ್ದುಪಡಿಗೆ ಖಾಸಗಿ ನಿರ್ಣಯ

• **ವಿಧಾನಸಭೆ:** ಕರಾವಳಿಯ ಅಭಿವೃದ್ಧಿ ಹಿತದೃಷ್ಟಿಯಿಂದ ವಿಶಿಷ್ಟ ಅಧಿಕಾರವುಳ್ಳ ನೂತನ ಮಂಡಳಿಯನ್ನು ರಚಿಸುವ ಬಗ್ಗೆ ಅಥವಾ ಈಗಿರುವ ಕರಾವಳಿ ಅಭಿವೃದ್ಧಿ ಮಂಡಳಿ ಅಧಿನಿಯಮ, 2023ರ ಕಾಯ್ದೆಗೆ ಸೂಕ್ತ ತಿದ್ದುಪಡಿ ತರುವ ಬಗ್ಗೆ ಖಾಸಗಿ ನಿರ್ಣಯ ಮಂಡಿಸಲಾಯಿತು.

ಖಾಸಗಿ ಸದಸ್ಯರ ಕಾರ್ಯಕಲಾಪದಲ್ಲಿ ಬಿಜೆಪಿ ಶಾಸಕ ಗುರುರಾಜ್ ಗಂಟಿಹೊಳೆ ಅವರು ಈ ನಿರ್ಣಯ ಮಂಡಿಸಿದರು. ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನೊಳಗೊಂಡ ಕರ್ನಾಟಕ ಕರಾವಳಿ ಪ್ರದೇಶದಲ್ಲಿ ರಾಜ್ಯದಲ್ಲಿ ಬೇರೆಲ್ಲೂ ಇಲ್ಲದ ಸಮಸ್ಯೆಗಳಿವೆ. ಕರಾವಳಿ ನಿಯಂತ್ರಣ ವಲಯ (ಸಿಆರ್‌ಝಡ್), ಕಡಲುಕೊರೆತ, ಸಮುದ್ರತೀರ, ಅತಿವೃಷ್ಟಿ, ಮೀನುಗಾರಿಕೆ ಸಮಸ್ಯೆ ಮುಂತಾದವು ಆ ಪ್ರದೇಶಕ್ಕೆ ಮಾತ್ರ ಸೀಮಿತವಾಗಿವೆ. ಅಲ್ಲಿನ ಭೌಗೋಳಿಕ ರಚನೆ, ಜೀವನ ಶೈಲಿಯಲ್ಲಿಯೂ ವ್ಯತ್ಯಾಸವಿದ್ದು, ಅಲ್ಲಿನ ಸಮಸ್ಯೆಗಳ ನಿವಾರಣೆಗಾಗಿ ಪ್ರತ್ಯೇಕ ನೀತಿ, ನಿಯಮಗಳನ್ನು ರೂಪಿಸಬೇಕು ಎಂದು ಆಗ್ರಹಿಸಿದರು.

ಕರಾವಳಿ ಅಭಿವೃದ್ಧಿಗಾಗಿ ಸ್ಥಾಪಿತವಾದ ಕರಾವಳಿ ಅಭಿವೃದ್ಧಿ ಮಂಡಳಿಯು ಸೀಮಿತ ಅಧಿಕಾರವನ್ನು ಹೊಂದಿದೆ. ಕರಾವಳಿ ಭಾಗಕ್ಕೆ ಬಾಧಿತವಾಗುವಂತಹ ಕಾನೂನುಗಳು ಜಾರಿಯಾದಲ್ಲಿ ಅಂತಹ ಕಾಯ್ದೆಗಳನ್ನು ಪರಿಷ್ಕರಿಸುವ ನಿಟ್ಟಿನಲ್ಲಿ ಸರ್ಕಾರಕ್ಕೆ ಸೂಕ್ತ ಶಿಫಾರಸ್ಸುಗಳನ್ನು ಮಾಡುವ ಅಧಿಕಾರ ಅದಕ್ಕಿಲ್ಲ. ಆದ್ದರಿಂದ ಕರಾವಳಿಯ ಅಭಿವೃದ್ಧಿಯ ಹಿತದೃಷ್ಟಿಯಿಂದ, ಸರ್ವಾಂಗೀಣ ಪ್ರಗತಿಗಾಗಿ ಹಾಗೂ ರಾಜ್ಯದಲ್ಲಿ ಕಾಲಕಾಲಕ್ಕೆ ರೂಪಿತವಾದ ಕಾಯ್ದೆ ಅಥವಾ ನಿಯಮಗಳಿಂದ ಕರಾವಳಿ ಭಾಗವು ಬಾಧಿತವಾಗುವುದನ್ನು ನಿರ್ಬಂಧಿಸಲು ಸರ್ಕಾರಕ್ಕೆ ಸೂಕ್ತ ಸಲಹೆ-ಶಿಫಾರಸ್ಸುಗಳನ್ನು ಮಾಡುವಂತಹ ವಿಶಿಷ್ಟ ಅಧಿಕಾರವುಳ್ಳ ನೂತನ ಮಂಡಳಿ ರಚಿಸಬೇಕು. ಇಲ್ಲವೇ ಈಗಿರುವ ಕರಾವಳಿ ಅಭಿವೃದ್ಧಿ ಮಂಡಳಿ ಅಧಿನಿಯಮ, 2023ರ ಕಾಯ್ದೆಗೆ ಸೂಕ್ತ ತಿದ್ದುಪಡಿ ತರುವುದಕ್ಕೆ ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಪ್ರಿಯಾಂಕ್ ಖರ್ಗೆ, ಕರಾವಳಿಯವರು ನಮಗಿಂತ ಅಭಿವೃದ್ಧಿಯಲ್ಲಿ ಯಾಕೆ ಮುಂದೆ ಇದ್ದಾರೆ ಎಂದರೆ ಅವರು ಯಾವತ್ತೂ ನಮಗೆ ದುಡ್ಡು ಕೊಡಿ ಎಂದು ಕೇಳುವುದಿಲ್ಲ, ಬದಲಾಗಿ ನೀತಿ, ನಿಯಮಗಳನ್ನು ಕೇಳುತ್ತಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



> ಕರ್ನಾಟಕ ಕರಾವಳಿಯಲ್ಲಿ ಉದ್ಯಮಿಗಳು ಹೂಡಿಕೆಗೆ ಉತ್ಸಾಹಿತರಾಗಿದ್ದರೂ ಇಲ್ಲಿನ ಸಿಆರ್‌ಝಡ್ ನೀತಿಯಿಂದ ಸಮಸ್ಯೆಯಾಗುತ್ತಿದೆ. ನೆರೆಯ ಕೇರಳ, ಗೋವಾ, ಮಹಾರಾಷ್ಟ್ರದಲ್ಲಿ ಸಿಆರ್‌ಝಡ್ ನಿಯಮ ಸರಳೀಕರಿಸಲಾಗಿದೆ. ರಾಜ್ಯದಲ್ಲಿ ಸಮುದ್ರ ಕಿನಾರೆ, ನದಿ ಕಿನಾರೆ, ದ್ವೀಪಗಳು ಪ್ರವಾಸೋದ್ಯಮಕ್ಕೆ ಅನುಕೂಲಕರವಾಗಿವೆ. ಜಿಲ್ಲಾಡಳಿತವು ಪ್ರಸ್ತಾವಿತ ಮಂಗಳಾ ಕಾರ್ನಿಶ್ ರಸ್ತೆ ಅಭಿವೃದ್ಧಿಪಡಿಸಬೇಕು.
>
> ■ **ಅಶೋಕ ರೈ,** ಕಾಂಗ್ರೆಸ್ ಶಾಸಕ

ಅರಣ್ಯ ಪ್ರದೇಶದ ಮಂಜೂರಾದ ಭೂಮಿ ರದ್ದು: ಸಚಿವ

• **ವಿಧಾನಸಭೆ:** ಬೆಂಗಳೂರು ಉತ್ತರ ತಾಲೂಕು ಜಾರಕಬಂಡೆ ಕಾವಲ್‌ನಲ್ಲಿ ಭಾರತೀಯ ವಾಯುಪಡೆಗೆ 1987ರಲ್ಲಿ ಮಂಜೂರು ಮಾಡಿದ್ದ ಭೂಮಿಯ ಪೈಕಿ 452 ಎಕರೆ 4 ಗುಂಟೆ ಅರಣ್ಯ ಪ್ರದೇಶವಾಗಿದ್ದು, ಈ ಮಂಜೂರಾತಿಯನ್ನು 2017ರಲ್ಲಿ ರದ್ದುಪಡಿಸಲಾಗಿದೆ ಎಂದು ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು.



ಗುರುವಾರ ಸದನದಲ್ಲಿ ಪ್ರತಿಪಕ್ಷ ನಾಯಕ ಆರ್. ಅಶೋಕ ಅವರು ನಿಯಮ 69ರಡಿ ಸಾರ್ವಜನಿಕ ಮಹತ್ವದ ವಿಷಯ ಪ್ರಸ್ತಾಪಿಸಿ, ಜಾರಕಬಂಡೆ ಶ್ರೀಗಂಧ ಕಾವಲ್ ಮತ್ತು ಪೀಣ್ಯ ನೆಡುತೋಪು ಪ್ರದೇಶವು ಅರಣ್ಯ ಇಲಾಖೆ ಭೂಮಿಯಾಗಿದ್ದರೂ ಅದನ್ನು ಭಾರತೀಯ ವಾಯು ಪಡೆಯು ಅತಿಕ್ರಮಣ ಮಾಡಿಕೊಂಡಿದೆ. ಅದನ್ನು ಯಾವುದೇ ಕಾರಣಕ್ಕೂ ಬಿಟ್ಟುಕೊಡಬಾರದು. ಅರಣ್ಯ ಭೂಮಿಯನ್ನು ಅರಣ್ಯ ಭೂಮಿಯಾಗಿಯೇ ಉಳಿಸಿಕೊಳ್ಳಬೇಕು. ನಮ್ಮ ಮೆಟ್ರೋಗೆ ನೀಡಿದ ಅರಣ್ಯ ಭೂಮಿಯ ಪರಿಹಾರವನ್ನು ವಾಯುಪಡೆ ಪಡೆದುಕೊಂಡಿದ್ದು, ಅದನ್ನು ವಾಪಸ್ ಪಡೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ಅಲ್ಲದೇ ಕರ್ನಾಟಕವನ್ನು ಶ್ರೀಗಂಧದ ನಾಡು ಎಂದು ಹೇಳುತ್ತೇವೆ. ಆದರೆ, ತಮಿಳುನಾಡಿನಲ್ಲಿ ಶ್ರೀಗಂಧ ಹರಾಜು ದರ 22,000 ರೂ. ಇದ್ದರೆ ಕರ್ನಾಟಕದಲ್ಲಿ ಅದು 7,000 ರೂ. ಇದೆ. ಕರ್ನಾಟಕದಲ್ಲಿ ಶ್ರೀಗಂಧ ಬೆಳೆಯುವುದಕ್ಕೆ ರೈತರಿಗೆ ಪ್ರೋತ್ಸಾಹಿಸಬೇಕು ಎನ್ನುವ ಮಧ್ಯೆ ಈ ರೀತಿಯ ತಾರತಮ್ಯ ಸರಿಯಲ್ಲ ಎಂದು ಹೇಳಿದರು.

ಇದಕ್ಕೆ ಉತ್ತರಿಸಿದ ಸಚಿವರು, ಪ್ರಸ್ತುತ ಈ 452 ಎಕರೆ ಜೊತೆಗೆ ಜಾರಕಬಂಡೆ ಮತ್ತು ಪೀಣ್ಯ ನೆಡುತೋಪಿನಲ್ಲಿ 83 ಎಕರೆ ಅರಣ್ಯ ಭೂಮಿ ವಾಯುಪಡೆ ವಶದಲ್ಲಿದೆ. ಇದನ್ನು ತೆರವು ಮಾಡಿಸಲು ಕ್ರಮ ವಹಿಸಲಾಗುವುದು. ಈ ಹೆಚ್ಚುವರಿ ಜಮೀನಿನ ಪೈಕಿ 58.08 ಎಕರೆಯನ್ನು ಬೆಂಗಳೂರು ಮೆಟ್ರೋ ರೈಲು ಯೋಜನೆಗೆ ನೀಡಿ ಹಣ ಪಡೆದು ಕಾನೂನು ಉಲ್ಲಂಘಿಸಲಾಗಿದೆ. ಈ ಹಣವೂ ಅರಣ್ಯ ಇಲಾಖೆಗೆ ಬರಬೇಕು, ಇದನ್ನು ಪಡೆದುಕೊಳ್ಳಲು ಕ್ರಮ ವಹಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದು ತಿಳಿಸಿದರು.

ಈ ಸಂಬಂಧ ರಾಜ್ಯದ ಮುಖ್ಯ ಕಾರ್ಯದರ್ಶಿಯವರು, 2018ರ ಸೆಪ್ಟೆಂಬರ್ 15 ರಂದು ರಕ್ಷಣಾ ಇಲಾಖೆಯ ಕಾರ್ಯದರ್ಶಿಗೆ ಪತ್ರ ಬರೆದು ಭಾರತೀಯ ವಾಯುಪಡೆಯು ಜಾಲಹಳ್ಳಿ ವಾಯುನೆಲೆಯು ಈ ಭೂಮಿಯನ್ನು ತನಗಾಗಿ ಬಳಸುವುದನ್ನು ಮುಂದುವರಿಸಲು ಬಯಸಿದರೆ, ಅರಣ್ಯ (ಸಂರಕ್ಷಣಾ) ಕಾಯ್ದೆ-1980 ರಡಿಯಲ್ಲಿ ಈ ಅರಣ್ಯ ಭೂಮಿಗಳ ಬಳಕೆಯನ್ನು ಕ್ರಮಬದ್ಧಗೊಳಿಸುವುದು ಕಡ್ಡಾಯವಾಗಿದೆ. ಅದಕ್ಕೆ ಅರ್ಜಿಯನ್ನು ಸಲ್ಲಿಸಬೇಕಾಗುತ್ತದೆ ಎಂದು ತಿಳಿಸಿದ್ದಾರೆ. ರಾಷ್ಟ್ರೀಯ ಹಿತಾಸಕ್ತಿಯ ಸಂಸ್ಥೆಯಾಗಿರುವುದರಿಂದ ಅರಣ್ಯ ತೀರುವಳಿ ಮಾಡುವಂತೆ ತಿಳಿಸಿದ್ದರೂ ಅವರು ಈವರೆಗೆ ಯಾವುದೇ ಅರ್ಜಿ ಹಾಕಿಲ್ಲ, ತಾವು ಸಚಿವರಾದ ತರುವಾಯ ಈ ಭೂಮಿಯ ಜಂಟಿ ಸರ್ವೆ ಮಾಡಲು ತಿಳಿಸಿದ್ದು, ಆ ಕಾರ್ಯವೂ ಪೂರ್ಣವಾಗಿದೆ. ತಮ್ಮನ್ನು 2-3 ಬಾರಿ ಈ ಸಂಬಂಧ ಭೇಟಿ ಮಾಡಿದ್ದ ವಾಯುಪಡೆ ಅಧಿಕಾರಿಗಳಿಗೆ ನಿಯಮಾನುಸಾರ ಪರ್ಯಾಯ ಭೂಮಿ ನೀಡಿ, ಎನ್.ಪಿ.ವಿ. ಮೌಲ್ಯ ಪಾವತಿಸಿ ಆ ಜಮೀನನ್ನು ಬಳಸುವಂತೆ ತಿಳಿಸಲಾಗಿದೆ. ಆದಾಗ್ಯೂ, ಅವರು ನಿಯಮಾನುಸಾರ ನಡೆದುಕೊಂಡಿಲ್ಲ ಎಂದು ಸದನಕ್ಕೆ ವಿವರಿಸಿದರು.

ಪ್ರತಿವರ್ಷ ವೈಮಾನಿಕ ಪ್ರದರ್ಶನ ನಡೆಯುವ ಬೆಂಗಳೂರು ಉತ್ತರ ತಾಲೂಕು ಯಲಹಂಕ ಹೋಬಳಿ, ಗಂಟಿಗಾನಹಳ್ಳಿ ಗ್ರಾಮದ ಸರ್ವೆ ನಂ.47ರಲ್ಲಿ 132 ಎಕರೆ 3 ಗುಂಟೆ ಮತ್ತು 48ರಲ್ಲಿ 27 ಎಕರೆ 26 ಗುಂಟೆ ಒಟ್ಟು 159 ಎಕರೆ 29 ಗುಂಟೆ ಪ್ರದೇಶ ಸಹ ಕಾಯ್ದಿಟ್ಟ ಅರಣ್ಯ ಪ್ರದೇಶವಾಗಿದೆ. ಇದನ್ನೂ ಅರಣ್ಯ ಇಲಾಖೆಯ ವಶಕ್ಕೆ ಪಡೆಯಲು ಅಥವಾ ನಿಯಮಾನುಸಾರ ಪರ್ಯಾಯ ಭೂಮಿ ಒದಗಿಸಿ ಬಳಸುವಂತೆ ಮಾಡಲು ಪ್ರಕ್ರಿಯೆ ಪ್ರಾರಂಭಿಸಲಾಗುತ್ತದೆ ಎಂದು ಸಚಿವ ಈಶ್ವರ ಖಂಡ್ರೆ ಹೇಳಿದರು.

ಶ್ರೀಗಂಧ ನಿಯಮ ಸರಳೀಕರಣ

ಶ್ರೀಗಂಧದ ನೀತಿಯಲ್ಲಿ ಸರಳೀಕರಿಸಲಾಗುತ್ತಿದ್ದು, ವೃಕ್ಷರಾಜ ಎಂದೇ ಖ್ಯಾತವಾದ ಶ್ರೀಗಂಧವನ್ನು ತೋಟದ ಬೆಳೆ ಎಂದು ಪರಿಗಣಿಸಲು ಬರುವುದಿಲ್ಲ, ಆದರೆ, ಶ್ರೀಗಂಧ ಬೆಳೆಗಾರರಿಗೆ ಅನಾನುಕೂಲ ಆಗದಂತೆ ಶ್ರೀಗಂಧ ಬೆಳೆಯಲು, ಕಟಾವು ಮಾಡಲು, ದಾಸ್ತಾನು ಮತ್ತು ಸಾಗಾಟ ಮಾಡಲು ನಿಯಮಗಳನ್ನು ಸರಳೀಕರಿಸಲಾಗುವುದು ಎಂದು ತಿಳಿಸಿದರು.

ವನ್ಯಜೀವಿಗಳ ದಾಳಿಗೆ ಮೃತಪಟ್ಟರೆ ಸರ್ಕಾರಿ ನೌಕರಿ ಇಲ್ಲ: ಸಚಿವ

• **ವಿಧಾನಸಭೆ:** ವನ್ಯಜೀವಿಗಳ ದಾಳಿಯಿಂದ ಮೃತಪಟ್ಟವರ ಕುಟುಂಬದವರಿಗೆ ಸರ್ಕಾರಿ ನೌಕರಿ ನೀಡಲು ಸರ್ಕಾರಿ ಆದೇಶದನ್ವಯ ಅವಕಾಶ ಇರುವುದಿಲ್ಲ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಸ್ಪಷ್ಟಪಡಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ರಾಜೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಮಾನವ-ವನ್ಯಜೀವಿ ಸಂಘರ್ಷದಲ್ಲಿ ಮೃತಪಟ್ಟವರ ಕುಟುಂಬಕ್ಕೆ ಪರಿಹಾರ ಮತ್ತು ಮಾಸಾಶನ ನೀಡಲಾಗುತ್ತಿದೆ. ಈ ಹಿಂದೆ ಇದ್ದ 15 ಲಕ್ಷ ರೂ. ಪರಿಹಾರದ ಮೊತ್ತವನ್ನು 2025ರ ಏಪ್ರಿಲ್‌ನಿಂದ 20 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿದೆ. ಪರಿಹಾರದ ಜೊತೆಗೆ 5 ವರ್ಷಗಳ ಕಾಲ ಮಾಸಿಕ 4 ಸಾವಿರ ರೂ. ಮಾಸಾಶನವನ್ನು ಮೃತರ ಕುಟುಂಬದ ಸದಸ್ಯರಿಗೆ ನೀಡಲಾಗುತ್ತಿದೆ. ಅಲ್ಲದೇ ದಾಳಿಗೊಳಗಾದ ಸಂತ್ರಸ್ತರ ಚಿಕಿತ್ಸೆಯ ಸಂಪೂರ್ಣ ವೆಚ್ಚವನ್ನು ಅರಣ್ಯ ಇಲಾಖೆ ಭರಿಸುತ್ತಿದೆ ಎಂದು ವಿವರಿಸಿದರು. ಅರಣ್ಯ ಇಲಾಖೆಯಲ್ಲಿ ಕಾಯಂ ನೌಕರರಾಗಿ ಸೇವೆ ಸಲ್ಲಿಸುತ್ತಿರುವವರು ಮತ್ತು ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮುಂಚೂಣಿ ಸಿಬ್ಬಂದಿ ಹಾಗಲಿಯೇ ಇಲ್ಲದೆ ಕ್ಲಿಷ್ಟಕರ ಸನ್ನಿವೇಶದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಕರ್ತವ್ಯನಿರತ ಸಿಬ್ಬಂದಿ ಮೃತಪಟ್ಟಾಗ ಈ ಹಿಂದೆ 30 ಲಕ್ಷ ರೂ. ಅನುಗ್ರಹ ಧನ ನೀಡಲಾಗುತ್ತಿತ್ತು. ಈಗ ಆ ಮೊತ್ತವನ್ನು 50 ಲಕ್ಷ ರೂ.ಗಳಿಗೆ ಹೆಚ್ಚಳ ಮಾಡಲಾಗಿದೆ ಎಂದು ತಿಳಿಸಿದರು. ಆನೆ ಸೇರಿದಂತೆ ವನ್ಯಜೀವಿ- ಮಾನವ ಸಂಘರ್ಷ ನಿಯಂತ್ರಿಸಲು ಸರ್ಕಾರ ಶಕ್ತಿಮೀರಿ ಶ್ರಮಿಸುತ್ತಿದೆ ಎಂದೂ ಈಶ್ವರ ಖಂಡ್ರೆ ಹೇಳಿದರು.

PUBLIC NOTICE

Our client intends to buy a site for valuable consideration from **B. S. Sujata**, being BDA Property, Banashankari 6th Stage Further Extension, Site No. 681, measuring East to West 9 meters and North to South 6 meters, in total 54 Sq.meters, bounded by East: Site no. 644, West: Road, North: Site no. 680 and South: Site no. 682.

Any person or persons having any right title or interest by way of inheritance or claim against the said site and shares should send their claims in writing to the undersigned along with the documentary evidence in support of the said claim thereof within 15 days of publication of this said notice, failing which claim if any shall be deemed to have been waived.

MOHAN .S.B. Advocate
No.9, 5th Cross, Maruthi Extension,
Near Malleshwaram Rly Station,
Bengaluru-560021

[illegible] (Kannada court notice, ... ಮೊಕದ್ದಮೆ ನಂ.888/2025)

IN THE COURT OF THE 3rd ADDITIONAL CIVIL JUDGE AND JMFC AT ANEKAL
C.Misc. No. 1965/2025

Petitioners: 1. Sri. Muniswamachari @ Nagaraja, S/o Late Muniyappachari, aged about 59 years R/at Mayasandra Village, Attibele Hobli, Anekal Taluk, Bengaluru - 562106, Now R/at Narayanapura Village, Kasaba Hobli, Anekal Taluk, Bengaluru - 562106. **2. Smt. Susheelamma**, D/o Late Muniyappachari, W/o Subramani, aged about 57 years R/At Avalahalli Village, Hosur Taluk, Krishnagiri District, Tamilnadu.

-V/s-

Respondent: The Tahasildar, Anekal Town

NOTICE

Whereas the petitioners have filed the above petition for seeking the death certificate of Elder Grand Father of petitioners namely **Sri. Kashappa** S/o Late Guruppa who was died on 02/11/1947 at His house Mayasandra Village, Attibele Hobli, Anekal Taluk, Bengaluru District before the 3rd Additional Civil Judge and JMFC at **Anekal**, whereas the above petition is fixed for hearing date on **11/05/2026** at **11.00 AM** if anybody interest in this matter regard to appear in this court in person or by a pleader to file objections the same of you failing which the petition will be disposed on enquiry.

Given under my hand and seal of the Court on this 18/03/2026

By order of the Court, Sheristedar, Civil Judge (Jr.dvn) and JMFC Court, Anekal

Advocate for Petitioner: **Sri. C. Suresha**
Office at C. Munisappa Building, 1st Floor,
Near Dr. Mohan Clinic, Attibele Main Road,
Anekal Town, Bengaluru Urban District

[illegible] (Kannada notice)

IN THE COURT OF THE VI ADDL. CITY CIVIL JUDGE AT BENGALURU (CCH-11)
O.S. No. 4771 OF 2014

BETWEEN : 1. Venkatesh Reddy, S/o Late L. Ramaiah Reddy, Since Dead Represented by his LR's of P1 (a) - (c), Defendant No. 21 & 22

P1 (a) Smt. N.K. Kamalakshamma, W/o late Venkatesh Reddy, Aged about 80 years,

P1 (b) Sri. H.V. Somashekar Reddy, S/o late Venkatesh Reddy, Aged about 45 years,

P1 (c) Sri. H.V. Kumar, S/o late Venkatesh Reddy Aged about 33 years,

P1 (a) - (c) are R/a No.948, Gurukrupa Nilaya, Hoodi, Rajapalya, ITPL Main Road, Mahadevapura Post, Bengaluru-560048

2. Srinivas Reddy, S/o Late L. Ramaiah Reddy, Aged about 57 years. **3. Ananthasama Reddy** S/o Late L. Ramaiah Reddy Aged about 61 years. **4. N. Govardhana Reddy** Aged about 45 Years. S/o Late Neelakanta Reddy, Plaintiff No. 2-4 are Residing at: Gangamma Temple Road, Rajapalya, Hoodi Village, Mahadevapura Post, K.R. Pura Hobli, Bengaluru East Taluk. ...**Plaintiffs**

AND : Sri. Gangadhara Reddy & Others ...**Defendants**

Notice / Summons through Paper Publication for LR's of Plaintiff No.4 (a) & (b)

P4 a) Smt. VEENA REDDY, W/o late Sri. N Govardhana Reddy, Aged about 52 years,

P4 b) Sri. GURU PRASAD S/o late Sri. N Govardhana Reddy, Aged about 30 years,

Both are R/a No.757, Gangamma Temple Road Rajapalya, Hoodi Village, ITPL Main Road, K.R. Puram Hobli, Bengaluru East Taluk.

WHEREAS the above named Plaintiffs have instituted case against Defendants for partition & to grant such other reliefs of the suit Schedule Property mentioned below. Further an Application u/o 22 Rule 3 of CPC has been filed to bring you the above mentioned as the LR'S of Plaintiff No.4 Sri. N. Govardhana Reddy in this suit.

You are hereby Summoned to appear before this Hon'ble Court in person or by an advocate/pleader **on 02.05.2026 at 11.00 A.M** to answer the questions of the same. Failing which the matter will be heard and determined as "EX- PARTE".

SCHEDULES

Item No.1. All that piece and parcel of the land bearing Sy.No. 82/2 measuring 3 Acres 03 guntas of Hoodi Village, K.R. Puram Hobli, Bangalore East Taluk. **Item No 2.** All that piece and parcel of the land bearing Old Sy.No. 13, New Sy.No. 13/1, measuring 02 Acres 26 guntas of Devasandra Village, K.R. Puram Hobli, Bangalore East Taluk. **Item No.3.** All that piece and parcel of the land bearing Sy.No. 195/2, measuring 21 guntas of Hoodi Village, K.R. Puram Hobli, Bangalore East Taluk. **Item No.4.** All that piece and parcel of the land bearing Sy.No. 116/6 measuring 18 guntas and Sy.No. 116/7 measuring 20 guntas totally 38 Guntas of Hoodi Village, K.R. Puram Hobli. **Item No. 5.** All that piece and parcel of the land bearing Sy.No. 116/6, measuring 18 guntas of Hoodi Village, K.R. Puram Hobli, Bangalore East Taluk. **Item No. 6.** All that piece and parcel of the land bearing Sy.No. 116/7, measuring 20 guntas of Hoodi Village, K.R. Puram Hobli, Bangalore East Taluk.

Given under my hand and seal of the Court on this 18th day of March 2026.

By Order of the Court, Senior Sheristedar, City Civil Court, Bengaluru.

Advocate for Plaintiff :
Mr. K.N. Arvinda Navada, Advocate
No. 7/9, 1st Floor, Besides 12th Cross,
Cubbonpet Main Road, Bengaluru-560002.

IN THE COURT OF THE HON'BLE PRL.SENIOR CIVIL JUDGE AND CJM AT KOLAR, MIS.NO.18/2024

BETWEEN

Smt. Muniyamma @ Mariyamma W/o late Lakshmana, Aged 65 years R/at Kondatti village Vokkaleri Hobli, Kolar Taluk and district. ...PETITIONER

AND

Smt.Lakshmidevamma W/o Lakshmana, Aged about 56 years R/at Khajikalahalli village Narasapura Hobli Kolar Taluk and district. RESPONDENT

NOTICE TO RESPONDENT UNDER ORDER 5 RULE 20 OF CPC

Smt.Lakshmidevamma W/o Lakshmana, Aged about 56 years R/at Khajikalahalli village Narasapura Hobli Kolar Taluk and district.

Whereas, the petitioner have filed this petition to against the respondent against the orders passed in G & C No.3/2024 dt.27.4.2024.. This Hon'ble court be pleased to issued notices to you Respondent. But you the Respondent is intentionally evading to receive notice issued by this Hon'ble court.This Hon'ble court has been posted the above case on 24/04/2026 for your appearance either personally or through counsel at about 11 am, before this Hon'ble court.If you failed to appear before this Hon'ble court, you will be placed exparte and case will be proceed in your absence.

Given under my seal and signature on this day. 26-3-2026 at Kolar

By order of the court., Sheristedar,
Prl. Senior Civil judge & CJM Kolar.
M.V.Rathnamma, Advocate, Kolar.

IN THE COURT OF THE IV ADDL PRL SENIOR CIVIL JUDGE AT BENGALURU
O.S. No. 70/2020

BETWEEN: Smt. Lakshmidevi, Age-44, D/o Late.Ramakrishnappa. W/o Sri. K.S Chandrakumar. No-361.Tank Road, Opp-Baba Temple. Bangarpet-563114 & another. ... **PLAINTIFFS**

AND: Sri. Chikka Munivenkatappa & Another. Age-58, S/o Late. Ramakrishnappa, No-27/2. Opp-Cauvery Bakery, Ramaswamy colony, Immadi Halli Main Road, White field post, K.R. Puram Hobli, Bengaluru-560066... **DEFENDANTS**

SUMMONS/ NOTICE TO THE DEFENDANT NO. 2 AND 5

2. Sri. R. Nagaraj. S/o. Late. Ramakrishnappa, aged 52 years. No.27/2. Opp. Cauvery Bakery, Ramaswamy Colony, Immadi Halli Main Road, Whitefield post, K.R. Puram, Hobli, Bengaluru East Taluk, Bengaluru-560066. **5. Sri. R. Srinivas.** S/o. Late. Ramakrishnappa, aged 44 years, No. 212, Ramagondanahalli village, Whitefield post, K.R. Puram, Hobli, Bengaluru East Taluk, Bengaluru-560066.

WHEREAS, **Smt. Lakshmidevi. R**, D/o. Late. Ramakrishnappa, W/o. Sri. K.S. Chandrakumar has filed the above suit against the Defendants for partition, declaration and seperate possession. That both of you are hereby summoned to appear in this court in person or by a pleader duly instructed, and able to answer all material questions relating to this suit or who shall be accompanied by some person able to answer all such questions on **17-04-2026** at **11.00 A.M.** in the forenoon, to answer the claim and as the day fixed for your appearance is appointed for the final disposal of the suit, you must be prepared to produce on that day all the witness upon whose evidence and all the documents upon which intend to rely in support of your defence.

Take notice that in default of your appearance on the day above mentioned, the suit shall be heard and decided ex-parte.

SCHEDULE PROPERTY

ITEM No.1: All that part and parcel of lands in Sy. No.83, New 83/2, Kachamaranahalli, Varthur Hobli, Bengaluru East Taluk, measuring 1 Acre 10.1/2 guntas and bounded on: **East by:** Government Road, **West by:** Lands in Sy. No.84, **North by:** Gunjur boundary and Nala, **South by:** Land in item no 2.sy.no 83/3.

ITEM No.2: All that part and parcel of lands in Sy. No.83, Now 83/3 Kachamaranahalli, Varthur Hobli, Bengaluru East Taluk, measuring 31 guntas and bounded on: **East by:** Government Road, **West by:** Lands in Sy. No.84, **North by:** Lands in Item No.1 Sy. No.83/2, **South by:** Land in Sy. No. 83/4 of Chikkavenkatappa.

Given under my hand the seal of the court on 25-03-2026.

By order of the Court, Chief Ministerial Officer, Senior Civil Judge Court, Bengaluru Rural Dist, Bengaluru.

D. PRABHAKAR, Advocate
Flat # 1-3, 4th Floor, Swiss Complex, Race Course Road, Bengaluru-560001.
Mob: 9845015701.

ಸಾರ್ವಜನಿಕ ಪ್ರಕಟಣೆ

[illegible]

BEFORE THE ASSISTANT COMMISSIONER DODDABALLAPURA SUB-DIVISION AT DODDABALLAPURA
R.A.No (N).125/2025

BETWEEN: Sri. NAGARAJ... Appellant

AND: THE TAHSILDAR And another... **RESPONDENTS**

SUMMONS U/O 5 RULE 20 OF CPC TO THE RESPONDENT NO.2.

Sri. C. HANUMNATHARAYAPPA, S/o late Chikka Mutharayappa, aged about 60 years, R/at Gangenapura Village, Sompura Hobli, Nelamangala Taluk.

Take notice that the appellant has filed the above appeal against you and others to set aside mutation entries in M.R.H1/2023-24 in respect of land bearing (1) Sy.No.24, measuring 4 Acres 12 Guntas (2) Sy.No.23/2, measuring 18 Guntas, situated at Gangenapura Village, Sompura Hobli, Nelamangala Taluk. Hence, you are hereby summoned to appear before this Hon'ble Court in person or by a pleader duly instructed and able to answer all material questions relating to the suit on **30-03-2026** at **11:00 A.M.,** to answer the questions. Failing which, the appeal will be disposed off in your absence as ex-parte.

Given under my hand and seal of the court on 16-03-2026.

By order of the Court, Assistant Commissioner, And Sub-Divisional Magistrate Doddaballapur Sub-Division, Bangalore Rural District, Doddaballapur.

SRI. H.M. RAJASHEKAR, Advocate
No. 3358/1, 13th Main, 12th Cross, HAL 2nd Stage, Indiranagar, Bengaluru 560008,
Mob: 9886476697

IN THE COURT OF THE PRINCIPAL SENIOR CIVIL JUDGE AND JMFC AT ANEKAL
O.S. No. 543/2022

PLAINTIFFS : Smt. Savitha and Others

V/S

DEFENDANTS : Smt. Krishnamma and Others

SUMMONS TO DEFENDANTS NO. 4 to 6 UNDER ORDER 5 RULE 20(A) OF CODE OF CIVIL PROCEDURE

4. Smt. Lakshmamma D/o Late Hanumaiah Aged about 55 years, **5. Smt. Kamalamma** D/o late Hanumaiah Aged about 44 years, **6. Smt. Rathnamma** D/o late Hanumaiah Aged about 51 years. All are R/at Kavalahosahalli Village, Kasaba Hobli, Anekal Taluk, Bangalore Urban Dist.

Whereas the plaintiffs have filed above suit for the relief of partition and other consequential reliefs in respect of the suit schedule properties. Whereas the above mentioned Defendant No.4 to 16 are here by said to be appear before this court either in person or by pleader to answer all the questions involved in the matter **on 20-04-2026 at 11'0' clock,** failing which the court will hear the matter in your absence and proceed with the matter in accordance with Law.

SCHEDULE

1. All the piece and parcel of the land bearing Survey No. 8/1, Measuring an extent of 0.24 guntas situated at Kavalahosahalli Village, Kasaba Hobli, Anekal Taluk, Bengalore Urban Dist. And bounded by:- **East by :** Land of Muniyappa, **West by** : Sy.No. 9 Land, **North by** : Land of Umashankar, **South by** : Land of Umashankar.

2. All the piece and parcel of the land bearing old Survey No. 9 new Survey 73, Measuring an extent of 0.10 guntas situated at Kavalahosahalli Village, Kasaba Hobli, Anekal Taluk, Bangalore Urban Dist. And bounded by:- **East by** : Land of Ramesh Reddy and Survey No. 58/1, **West by** : Land of Umashankar, **North by** : Land of Umashankar, **South by** : Land of Umashankar.

3. All the piece and parcel of the land bearing Survey No. 58/1, Measuring an extent of 0.24.08 guntas situated at Kavalahosahalli Village, Kasaba Hobli, Anekal Taluk, Bangalore Urban Dist. And bounded by:- **East by** : Land of Rajanna, **West by** : Remaining land belongs to Venkataramanappa, **North by** : Lands of Kuntanna and Venkataramanappa, **South by** : Survey No. 61/7 belongs to Venkataramanappa.

By order of the Court, Chief Ministerial Officer, Senior Civil Judge & JMFC Court, Anekal

Advocate for Plaintiffs :
S.G. ANANDA CHAKRAVARTHI, SANTHOSH KUMAR. C
BAR-AT-LAW SOLUTIONS
Beside Dr. B.R. Ambedkar Public Library, D.Munivenkatappa Building, Mirza Road, New Pete, Anekal Town, Bangalore District.

IN THE COURT OF THE I ADDL CITY CIVIL AND SESSIONS JUDGE AT BENGALURU (CCH-02)
O.S.NO.6752/2017

BETWEEN: Sri.Chandrashekar, S/o Late M. Shankar, Aged about 44 years, R/at: 230, 2nd "A" Layout, 3rd Block, H.R.B.R Layout, S.T Town Post, Bangalore-560084 ... **PLAINTIFF**

AND: M/s. Peacock Properties & others ...**DEFENDANTS**

NOTICE UNDER ORDER 5 RULE 20 OF CPC

ADDRESS OF THE DEFENDANT No 7: Rakesh Kumar, S/o Late Perumal, Aged about 50 years, R/at: No. 254, OPH road, Bengaluru-560051 .... **DEFENDANT No.7**

Whereas, the plaintiff herein has filed the above suit against the Defendants for the relief of Declaration and Permanent Injunction. Hence you are hereby summoned to appear in this court in person or by a pleader duly instructed and able to answer all the material questions on **16-04-2026** at 11:00 am, failing which the plaint will be heard and disposed ex-party.

SCHEDULE

All that piece and parcel of property site bearing No. 15, 2nd Block, ITI Notified area Katha No. 185/1/106, Situated at Kowdenahalli @ Ramamurthy Nagar K.R. Puram Hobli, Bangalore south Taluk, Bangalore, at present it comes under the Bruhath Bangalore Mahanagara Palike limits measuring East-West: 35 feet, North-South: 30 feet, (totally 1050 square feet) and bounded on the: East : Road, West : House No. 20, North : House No. 16, South: House No. 14

Given under my hand and seal of the court on 25-03-2025.

By order of the court, Senior Sheristedar, City Civil Court at Bangalore

N.V. MANJUNATHA, Advocate
No. 3/2, 3rd Floor, Thimmaiah Towers, 1st Cross, 1st Main, Near Olympic Sports, Gandhinagar, Bengaluru -560 009.
Mob:9041973035

[illegible] (Kannada court notice, ... ಸಂ: 19/2025)

CHANGE OF NAME

I, **MALLESHA THAMMICHETTU** R/o No.32, 6th A Cross, Nanjappa Layout, Beside Jodidhard Club, Vidyaranyapura, Bengaluru - 560097. Have changed my name to **MALLESH THAMMICHETTU.** Vide Affidavit **dated 23 March 2026** before notary **R.S. Vijay** Bangalore.

IN THE COURT OF THE SENIOR CIVIL JUDGE & JFMC AT Gundlupet.
O.S. No.60/2022.

Plaintiff : KARNATAKA BANK Gundlupet Branch.

V/s

Defendants : D3. Bojappa (Since dead by LRs.),

a. Smt. Basamannamma, major W/o Late Bojappa,

b. Geetha major D/o Late Bojappa,

c. Mahadevaswamy major S/o Late Bojappa, All are R/o. Malavalli Village, Kasaba hobli, Gundlupet Taluk.

Notice under order 5 Rule 20 of CPC.

Whereas the above named plaintiff bank has filed a suit against the defendants for recovery of **Rs.5,26,779/-** with interest and court cost. The above suit is posted for the 3rd Defendants LRs appearance **on. 27.04.2026.** The Above Defendants named above is hereby called upon to appear before the Hon'ble court on the date mentioned above either in person or through their advocate to defend his case, other vise matter will be proceeded in accordance with law.

BY ORDER OF THE COURT
CHIEF MINISTERIAL OFFICER,
SENIOR CIVIL JUDGE & JMFC COURT GUNDLUPET.

Date : 26.03.2026, Place : Gundlupet

CCH-5 HG : 28.04.2026

IN THE COURT OF ADDL. CITY CIVIL AND SESSIONS JUDGE AT BENGALURU
O.S. No. 246/2025

PLAINTIFF : Sri. Lakshmanna, S/o late Krishnappa, Aged about 55 years. Both are Residing at No. 443, 7th Cross, MPM Layout, Mallathahalli Lake Road, Bangalore - 560 056 and Another

-V/S-

DEFENDANT : 1. Mrs. H. Bhagyamma,
2. Ms. Deepika, 3. Ms. Monica,
4. M. Adarsh, 5. Sri. S. Keshav,
6. Sri. Chethan. A 7. Sri. H. Nagaraj,
8. Sri. Karthikeyan Swaminathan,
9. Smt. Manjula .B,

NOTICE / SUMMONS TO THE DEFENDANTS

To:- **5. Sri. S. Keshav,** S/o Narasimha Rao Aged about 50 years, R/at 25, 6th Main Road, Mohankumarnagar, Yeswanthpura, Bengaluru-560022

6. Sri. Chethan A, S/o T.Ashwathnarayana, Aged About 34 years, R/at No. 26/21, 3rd Cross, 2nd Stage, Nandhini layout, Bengaluru - 560 096.

7. Sri. H. Nagaraj, S/o Hanumanthappa Aged about 67 years, R/at 340, 3rd Main, Vijayanandanagar, Nandhini Layout, Bengaluru - 560 096.

8. Sri. Karthikeyan Swaminathan, S/o Sri. Swaminathan, Aged about 45 years, R/at 217/2, 8th Cross, 8th Main, Venkatapura, 1st Block, Koramangala, Bengaluru-560034

WHEREAS the above-named Plaintiff instituted a suit against you for partition you are hereby summoned to appear before this court **on 28/4/2026 at 11.00 a.m** in person or through Advocate/Pleader to answer the questions to the same. Failing which the suit will be heard and determined as ex-parte

SCHEDULE

All that piece and parcel of the property bearing Site No. 40, Assessment No. 84/1, BBMP Ward No. 31, situated at Laggere Village, Yeshwantpur Hobli, Bengaluru North Taluk, and now comes under the limits of BBMP, Bangalore measuring East to West by 30 Feet and North to South by 40 feet totally measuring 1200 Sq.ft. and bounded as follows: **East by** : Site No. 39, **West by** : Site No 41, **North by** : Road, **South by** : Site No.23.

Given under my hand and seal of the court on this 17th day of March 2026.

By Order of the Court, Senior Sheristedar, City Civil Court, Bangalore.

Advocate for plaintiff : **S. Raj Prabhu,**
Off/BNo: 13, 13th Cross, Vasanth nagar, Bengaluru-560001.

ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ...

Dated: 13.03.2026

-: ಸಾರ್ವಜನಿಕ ಪ್ರಕಟಣೆ :-

[illegible]

ಸಹಿ/- ಕಾರ್ಯದರ್ಶಿ

IN THE COURT OF THE PRI CIVIL JUDGE AND JMFC AT ANEKAL
C.Misc. No.542/2026

BETWEEN: 1. Sri. Kumar. G, S/o Late. Gurappa, aged about 27 years. **2. Sri. Santhosh,** S/o Late. Gurappa, aged about 35 years. **3. Smt. Anasuya,** W/o Late. Manjunath, aged about 29 years. **4. Sri. M. Chandan Kumar,** S/o Late. Manjunath, aged about 20 years. **5. Sri. M. Karthik,** S/o Late. Manjunath, aged about 19 years. Are all R/at No.72, Near Anjaneyaswamy Temple, Boorukunte Village, Sarjapura Hobli, Anekal Taluk, Bangalore District ...**Petitioners**

AND: The Tahasildar, Anekal Taluk ...**Respondent.**

NOTICE

Whereas the petitioner have filed the above petition for seeking the death certificate of father 1st and 2nd petitioners and father-in-law of 3rd petitioner and grandfather of 4th & 5th petitioner namely **Gurappa** S/o Late Lingappa who died on 28-12-2006 at Boorukunte Village, Sarjapura Hobli, Anekal Taluk, Bangalore District before the Prl Civil Judge and JMFC at Anekal, whereas the above petition is fixed for hearing date on **27/04/2026** at **11.00 AM** if anybody interest in this matter regard to appear in this court in personally or by a pleader to file objections the same of you failing which the petition will be disposed on enquiry.

Given under my hand and seal of the Court on this 24/03/2026

By order of the Court, Sheristedar, Prl Civil Judge and JMFC at Anekal

Advocate for Petitioner: **Sri. Raviprakash. N,**
Office at 1st Floor, C Block, STB Complex, Attibele Main Road, Anekal Town, Anekal Taluk, Bangalore District

---

[illegible] (Kannada court notices)

ಜಿಲ್ಲಾ ಪಂಚಾಯತ್ ಧಾರವಾಡ
ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಧಾರವಾಡ - 580001.
ದೂರವಾಣಿ: 0836-2442316 ಇ-ಮೇಲ್: zpeddwd@rediffmail.com

ಸಂಖ್ಯೆ: ಪಂ.ರಾ.ಇಂ.ವಿ.ಧಾ/ಕ.ಇಂ.-2/2025-26/5227 ದಿನಾಂಕ: 20-03-2026

ಅಲ್ಪಾವಧಿ ಟೆಂಡರ್ ಪ್ರಕಟಣೆ-46/2025-26 (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

[illegible] ... No.FD 876 Exp-12/2017, Bangalore, Dated: 15-09-2017 ... KW-1, KW-2 & KW-3 ... https://kppp.karnataka.gov.in ...

Indent Numbers	:	
General	:	23970/Call-2, 19944/Call-3, 19388/Call-2, 18445/Call-3, 16773/Call-2, 16698/Call-3, 25733
CAT-1	:	24145/Call-2, 16682/Call-2
SC Category	:	24418/Call-2, 17720/Call-2
Category-II(A)	:	16768/Call-2

ಕ್ಯಾಲೆಂಡರ್ ಆಫ್ ಇವೆಂಟ್ಸ್ 1) ... 30-03-2026 ... 08-04-2026 ... 4.00 ... 2) ... 09-04-2026 ... 4.30 ... 3) ... 13-04-2026 ... 11.00 ...

... https://kppp.karnataka.gov.in ...

ಸಹಿ/- (ಆರ್.ಎಂ. ಸೊಪ್ಪಿಮಠ)
ಕಾರ್ಯನಿರ್ವಾಹಕ ಇಂಜಿನೀಯರರು,
ಪಂ.ರಾ.ಇಂ. ವಿಭಾಗ, ಧಾರವಾಡ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕನೀನಿನಿ,
ನಂ.4, ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.

... 1/ TFS/4ನೇ ಕರೆ ಟೆಂಡರ್ ಪ್ರಕಟಣೆ ಸಂಖ್ಯೆ: 12/2025-26/ ದಿ: 23.03.2026

ಟೆಂಡರ್ ಪ್ರಕಟಣೆ - 4ನೇ ಕರೆ

[illegible] ... 12/2025-26/ ದಿ: 14.10.2025 ... 25.11.2025 ... 12/2025-26 ದಿ: 28.01.2026 ...

1. ... 25.03.2026 ... 16.04.2026 ... 17.30 ... 2.Pre-Bid Meeting ದಿ : 10.04.2026 ... 11.00 ... 3. ... 17.04.2026 ... 17.30 ... 4. ... After obtaining approval of technical bid from competent authority 5. ... 12 ತಿಂಗಳು ... 6. ... ರೂ.523.46 ಲಕ್ಷಗಳು 7. ... ರೂ.7.86 ಲಕ್ಷಗಳು

... 8660573513

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಕನೀನಿನಿ., ನಂ.4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಉಪ ನಿರ್ದೇಶಕರ ಕಛೇರಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಳಗಾವಿ - 590 010.
ದೂರವಾಣಿ : 0831-2950306, ಇಮೇಲ್ : dysobelgaum@gmail.com

No. : D.Y.E.S./BGM/MESS/2025-26 ದಿನಾಂಕ : 26-03-2026

ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

[illegible]

1) ... ರೂ. 1,51,12,500/-, ... ರೂ. 2,26,688/-, 2) ... 26-03-2026, 3) ... 18-04-2026 ... 5.00 ... 4) ... 21-04-2026 ... 11.00 ... 5) ... 23-04-2026 ... 11.00 ...

... https://kppp.karnataka.gov.in ... 080 - 22501216, 25501227 ... 0831-2950306 ...

ಸಹಿ/- ಉಪ ನಿರ್ದೇಶಕರು ಹಾಗೂ
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಬೆಳಗಾವಿ ಜಿಲ್ಲೆ.

ಬೆಂಗಳೂರು ಕೇಂದ್ರ ನಗರ ಪಾಲಿಕೆ
... ಬೆಂಗಳೂರು-560011

ಸಂ: ... /15/2025-26 ದಿನಾಂಕ: 25.03.2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ

(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

[illegible]

ಕ್ರ.ಸಂ.	ಕಾಮಗಾರಿಯ ಹೆಸರು
1	[illegible] ... (ರೂ. ಲಕ್ಷಗಳಲ್ಲಿ): 20.00, ... (ರೂ.ಗಳಲ್ಲಿ): ರೂ. 50,000/-.

(1) ... (https://kppp.karnataka.gov.in) ... (2) ... 30.03.2026 ... 3:00 ... (3) ... 02.04.2026 ... 4:00 ... (4) ... 04.04.2026 ... 11:30 ... (5) ... https://kppp.karnataka.gov.in ...

ಸಹಿ/- ಕಾರ್ಯಪಾಲಕ ಅಭಿಯಂತರರು ...

ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ
ಕಾವೇರಿ ಜಲಾನಯನ ಯೋಜನೆಗಳು
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕಾಡಾ ನಂ.1 ವಿಭಾಗ,
ಹೇಮಾವತಿ ಕಾಲೋನಿ, ಕುಣಿಗಲ್ ರಸ್ತೆ, ತುಮಕೂರು.
ದೂರವಾಣಿ ಸಂಖ್ಯೆ : 0816-2006073 E-Mail: eecada1tumkur@gmail.com

... 34/2025-26 ದಿನಾಂಕ25-03-2026 ...
(THROUGH KARNATAKA PUBLIC PROCUREMENT PORTAL ONLY K/W-2)

... Providing 13 office personnel through outsourcing for, CADA No.1 Division Office Tumkur, CADA No.2 sub Division Offices Tumkur and Channarayapattana including ADA Sub Division Offices at Tumkur for the year 2026-27, for 12 Months. ... ರೂ.31.92/- ಲಕ್ಷ ... https://kppp.karnataka.gov.in. ...

... 25-03-2026 ... 01-04-2026 ... 4.00 ...

... 01-04-2026 ... 4.00 ...

... 02-04-2026 ... 5.00 ...

... 0816-2006073 ...

ಸಹಿ/- ಕಾರ್ಯಪಾಲಕ ಇಂಜಿನಿಯರ್,
ನಂ.1 ವಿಭಾಗ, ಕಾಡಾ- ...,
ತುಮಕೂರು.

DIPR/TUM/RO-313/25-26/Oysters

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಕಾರ್ಯಪಾಲಕ ಅಭಿಯಂತರರವರ ವಿಭಾಗ ಕಚೇರಿ, ಎಂ.ಜಿ ರಸ್ತೆ, ಕಾರವಾರ-581301
Email: eekuwsdbkwr@gmail.com ದೂರವಾಣಿ ಸಂಖ್ಯೆ: 08382201080

ಮ್ಯಾನುಯಲ್ ಟೆಂಡರ್ ಅಧಿಸೂಚನೆ

[illegible]

... /2171/2025-26. ದಿನಾಂಕ: 25/03/2026.

... ರೂ. 4,57,782/- ... ರೂ. 14,000-00, ... ರೂ. 1,500.00 ... 04 ತಿಂಗಳು ... ರೂ. 2.70 ಲಕ್ಷ ...

... (1) ... 27/03/2026 ... 04/04/2026 ... 17:00 ... (2) ... 04/04/2026 ... 08/04/2026 ... 17:30 ... (3) ... 10/04/2026 ... 16.30 ... (4) ... 13/04/2026 ... 11:00 ...

ಸಹಿ/- ಕಾರ್ಯಪಾಲಕ ಅಭಿಯಂತರು,
ಕ.ನ.ನೀ.ಸ ಮತ್ತು ಒಳಚರಂಡಿ ಮಂಡಳಿ, ವಿಭಾಗ, ಕಾರವಾರ

DIPR/KWR/KSMCA/1253/25-26 dt. 26.03.2026

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಚೇರಿ,
ಲೋಕೋಪಯೋಗಿ ಇಲಾಖೆ ಗದಗ ವಿಭಾಗ ಗದಗ

Phone 2-238782 Fax No. 08372-237268 E.Mail : eepwdgad@gmail.com

... 1 2 3 4 ... 2025-26/5821 ದಿನಾಂಕ: 25-03-2026

ಟೆಂಡರ್ ಪ್ರಕಟಣೆ ಹಾಗೂ ಅವಧಿ ವಿಸ್ತರಣೆ

[illegible] ... 540.00 ಲಕ್ಷ ... 07 ... ರೂ: 5.00 ಲಕ್ಷ ... ರೂ: 200.00 ಲಕ್ಷ) ... (kppp) ... (kppp) ... http://www.kppp.Karnataka.gov.in/ ...

Work Indent No:- Part-1 34879, 33032, 33031, 29101/Call-3 and 34529
... 04-04-2026 ... 06-04-2026 ... 4.00 ... 07-04-2026 ... 08-04-2026.

Work Indent No:- Part-2 32157-ST/call-2 and 34835
... 8-04-2026 ... 10-04-2026 ... 4.00 ... 13-04-2026 ... 15-04-2026.

[illegible] ... 10 ...

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/- ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ ಗದಗ ವಿಭಾಗ ಗದಗ

ಹೊಸ ದಿಗಂತ
ಶುಕ್ರವಾರ, 27 ಮಾರ್ಚ್ 2026
ಬೆಂಗಳೂರು



ಮಹಾತ್ಮಾಗಾಂಧಿ ರಾಮರಾಜ್ಯದ ಕನಸನ್ನು ಕಂಡಿದ್ದರು. ಅಂದರೆ ರಾಮನ ಆದರ್ಶ ಗುಣಗಳನ್ನು ಅವರು ಗುರುತಿಸಿದ್ದರು. ಆದರೆ ನಮ್ಮ ದುರ್ದೈವಕ್ಕೆ, ನಮ್ಮ ರಾಜಕಾರಣಿಗಳಿಗೆ ಇವು ಯಾವುವೂ ಬೇಡ.

ಶ್ರೀರಾಮನೆಂದರೆ ಅಮಿತಾನಂದಸ್ವರೂಪೀ

ಗ.ನಾ.ಭಟ್ಟ



ಶ್ರೀರಾಮನವಮಿಯೆಂದರೆ ಭಾರತೀಯರಿಗೆ ಸಂತಸದ ಹೊನಲು ಹರಿಯುವ ಬಹು ದೊಡ್ಡ ಹಬ್ಬ. ಅದಕ್ಕೆ ಶ್ರೀರಾಮನ ಘನವಾದ ವ್ಯಕ್ತಿತ್ವವೇ ಕಾರಣ. ಆ ದಿನದಂದು ಭಾರತಾದ್ಯಂತ ರಘುನಾಥತಿಲಕ ರಾಮನಿಗೆ ಪೂಜೆ-ಪುನಸ್ಕಾರ ಅತ್ಯಂತ ವೈಭವದಿಂದ ನಡೆಯುತ್ತದೆ. ಅದರ ಅಂಗವಾಗಿ ಎಷ್ಟೋ ಮನೆಗಳಲ್ಲಿ ಶ್ರೀರಾಮಾಯಣ ಪಾರಾಯಣ, ಪ್ರವಚನ ಜರುಗುತ್ತದೆ. ಸಂಗೀತೋತ್ಸವ, ನಾಟ್ಯ-ನಾಟಕಾದಿ ಸಾಂಸ್ಕೃತಿಕ ಕಾರ್ಯಕ್ರಮಗಳು ಸಂಪನ್ನಗೊಳ್ಳುತ್ತವೆ. ಯುವಕರು ರಸ್ತೆಗಳಲ್ಲಿ ಪಾನಕ, ಪನಿವಾರ, ಕೋಸಂಬರಿ ಹಂಚುತ್ತಾರೆ. ಇವೆಲ್ಲವೂ ಶ್ರೀರಾಮನ ಮಹಿಮೆಯ ಫಲಶ್ರುತಿಗಳು.

ರಾಮನೆಂದರೆ ಆನಂದಸ್ವರೂಪೀ; ಅವನು ಮೋಕ್ಷದಾಯಕ. ರಾಮ ಎಂಬ ಒಂದೇ ನಾಮ ಮಹಾವಿಷ್ಣುವಿನ ಸಾವಿರ ನಾಮಗಳಿಗೆ ಸಮಾನ ಎಂದು ಹೇಳುತ್ತಾರೆ. ಅವನು ಚೆಲುವಿಗೂ ಚೆಲುವು; ನೀಲಮೇಘಶ್ಯಾಮ; ಮುದ್ದು ಮುದ್ದಾದ ರೂಪ; ಕಣ್ಣು ತಣಿಯುವ ಚೆಲುವು. ಅವನು ನಿಂತರೂ ಚೆಂದ; ಕೂತರೂ ಚೆಂದ; ಮಲಗಿದರೂ ಚೆಂದ; ನಡೆದರೂ ಚೆಂದ; ನಿಂತರೂ ಚೆಂದ. ಮಾತಂತೂ ಸುಮನೋಹರ. 'ವಕ್ತಾ ವಾಚಸ್ಪತಿರ್ಯಥಾ'-ಮಾತಿನಲ್ಲಿ ಬೃಹಸ್ಪತಿಯಿದ್ದಂತೆ. ಹೀಗೆ ಕೊಂಡಾಡಿದವನು ವಾಲ್ಮೀಕಿಮಹರ್ಷಿ. ರಾಮನೆಂದರೆ ಅವನು ಕೇವಲ ದಾಶರಥಿ ರಾಮನಲ್ಲ, ಅವನು ಪರಬ್ರಹ್ಮನೂ ಹೌದು. ಅದನ್ನು ಸಾರುವ ಉಕ್ತಿಯೊಂದು ಹೇಳುತ್ತದೆ-

ರಮಂತೇ ಯೋಗಿನೋನಂತೇ ನಿತ್ಯಾನಂದೇ ಚಿದಾತ್ಮನಿ ।
ಇತಿ ರಾಮಪದೇನಾಸೌ ಪರಂ ಬ್ರಹ್ಮಾಭಿಧೀಯತೇ ॥

''ಪರಬ್ರಹ್ಮವಾಚಕವಾದ ಈ ರಾಮ ಪದದಿಂದ ಯೋಗಿಗಳು ಅನಂತವಾದ, ನಿತ್ಯಾನಂದವಾದ ಚಿದಾತ್ಮದಲ್ಲಿ ಸದಾ ರಮಿಸುತ್ತಾರೆ'' ಎಂಬ ಈ ಮಾತು ರಾಮನ ವ್ಯಕ್ತಿಸೌಂದರ್ಯವನ್ನು ಹೇಳುವುದರೊಂದಿಗೆ ಅವನ ಪರಬ್ರಹ್ಮತ್ವವನ್ನೂ ಸಾಬೀತುಪಡಿಸುತ್ತದೆ. ರಾಮ ಭಕ್ತರ ಅಂತರಂಗಪ್ರವೃತ್ತಿಯಂತೆ ದೇವರಾಗಬಲ್ಲ; ಧರ್ಮಸಂಕಟದ ವೇಳೆಯಲ್ಲಿ ಗುರುವಾಗಬಲ್ಲ; ಏಕಾಂತಧ್ಯಾನದಲ್ಲಿ ಪರಬ್ರಹ್ಮವಾಚಕನಾಗಬಲ್ಲ. 'ಯಸ್ಯ ದೇವೇ ಪರಾ ಭಕ್ತಿರ್ಯಥಾ ದೇವೇ ತಥಾ ಗುರೌ'. ಹೀಗೆ ಶ್ರೀರಾಮನ ಭವ್ಯ ವ್ಯಕ್ತಿತ್ವವನ್ನು ಕೊಂಡಾಡುವ ಸಾವಿರಾರು ಶ್ಲೋಕಗಳು ಇವೆ. ಅಂತಹವುಗಳಲ್ಲಿ ಹೃದಯಾನಂದಕರವಾದ ಇನ್ನೊಂದು ಶ್ಲೋಕ ಹೀಗೆ ವರ್ಣಿಸುತ್ತದೆ.

ಕೌಸಲ್ಯಾ ನಯನೋತ್ಸವೋ ದಶರಥಸ್ಯೋದ್ಯತ್ತಪಸ್ಯಾಫಲಂ ।
ವಿಶ್ವಾಮಿತ್ರಮನೋರಥೋ ಜನಕಭೂಪಾಲಸ್ಯ ಭಾಗ್ಯೋದಯಃ ॥
ವೈದೇಹೀವದನಾರವಿಂದಮಧುಪಃ ಕೋದಂಡಝುಂಕಾರಭೂಃ ।
ಧರ್ಮಸ್ಯೈಕಪರಾಯಣಂ ವಿಜಯತೇ ಶ್ರೀರಾಮಚಂದ್ರಪ್ರಭುಃ ॥

''ಕೌಸಲ್ಯೆಯ ಕಣ್ಣಿಗೆ ಹಬ್ಬವನ್ನುಂಟುಮಾಡಿದವನೂ, ದಶರಥನ ತಪಸ್ಸಿನ ಫಲವಾಗಿ ಉದಿಸಿದವನೂ, ವಿಶ್ವಾಮಿತ್ರರ ಮನೋರಥವನ್ನು ನೆರವೇರಿಸಿದವನೂ, ಜನಕಮಹಾರಾಜನ ಭಾಗ್ಯಸಂಪತ್ತೂ ಆದ, ವೈದೇಹಿಯ ವದನಾರವಿಂದಕ್ಕೆ ಭ್ರಮರಪ್ರಾಯನೂ ಆದ ಮತ್ತು ಆ ಭ್ರಮರಕ್ಕೆ ಕೋದಂಡದ ಝುಂಕಾರವೇ ಭ್ರಮರದ ಗುಂಜಾರವವಾಗಿ ಪರಿಣಮಿಸಿದ, ಧರ್ಮವನ್ನೇ ತನ್ನ ಉಸುರಾಗಿಸಿಕೊಂಡ, ಧರ್ಮಪರಾಯಣನಾದ ಆ ಶ್ರೀರಾಮಚಂದ್ರನು ವಿಜಯಿಯಾಗಲಿ'' ಎಂದು ಅರಿಕೆ ಮಾಡಿಕೊಳ್ಳುವ ಈ ಶ್ಲೋಕ ದಿಟಕ್ಕೂ ಹೃದಯಾನಂದಕರ. ''ಕೋನ್ವಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್ ಕಶ್ಚ ವೀರ್ಯವಾನ್''-'' ಸದ್ಯಕ್ಕೆ ಈ ವರ್ತಮಾನ ಕಾಲದಲ್ಲಿ ಗುಣವಂತರಲ್ಲಿ, ವೀರರಲ್ಲಿ ಮೊದಲಿಗನಾಗಿ ಪರಿಗಣಿಸಬೇಕಾದ ವ್ಯಕ್ತಿ ಯಾವನಿದ್ದಾನೆ?'' ಎಂದು ಹದಿನಾರು ಗುಣಗಳ ಪಟ್ಟಿಯನ್ನೇ ನಾರದರ ಮುಂದಿಟ್ಟ ವಾಲ್ಮೀಕಿಮಹರ್ಷಿಗೆ ನಾರದರು ನೀಡಿದ ಉತ್ತರದಲ್ಲಿ ಒಂದು ಹೀಗಿದೆ-

ಇಕ್ಷ್ವಾಕುವಂಶಪ್ರಭವೋ ರಾಮೋ ನಾಮ ಜನೈಃ ಶ್ರುತಃ ।
ಸರ್ವಲೋಕಪ್ರಿಯಃ ಸಾಧುರದೀನಾತ್ಮಾ ವಿಚಕ್ಷಣಃ ॥
ಬಾಲಕಾಂಡಃ : 1-8, 15

''ಅಂಥವನೊಬ್ಬ ನಮ್ಮ ಕಾಲದಲ್ಲೇ ಇದ್ದಾನೆ. ಅವನನ್ನು ಎಲ್ಲೂ ಹುಡುಕಬೇಕಿಲ್ಲ, ಈ ಭೂಮಿಯಲ್ಲೇ ಇದ್ದಾನೆ. ಅವನೇ ಇಕ್ಷ್ವಾಕುವಂಶದ ರಾಜ ರಾಮಚಂದ್ರ. ನೀನು ಕೇಳಿದ ಎಲ್ಲಾ ಸದ್ಗುಣಗಳೂ ಅವನಲ್ಲಿ ಇವೆ. ಅದಕ್ಕಾಗಿಯೇ ಆತ 'ಸರ್ವಲೋಕಪ್ರಿಯಃ' ಬರಿಯ ಭೂಮಿಯ ಜನರಷ್ಟೇ ಅಲ್ಲ, ಸ್ವರ್ಗದ ದೇವತೆಗಳೂ ಅವನನ್ನು ಗೌರವಿಸುತ್ತಾರೆ. ಇಂತಹ ಗುಣವುಳ್ಳವನಾದರೂ ಅವನು ಸಾಧು ಅನ್ನಿಸಿಕೊಂಡಿದ್ದಾನೆ. ಸೌಜನ್ಯದ ಮೂರ್ತಿ; ಸಜ್ಜನಿಕೆಯ ಪ್ರತೀಕ; ಸದ್ಗುಣಗಳ ಗಣಿಯಾಗಿದ್ದಾನೆ. ರಾಮನಲ್ಲಿ ಅಹಂಕಾರದ ಸುಳಿವಿಲ್ಲ, ಸಾಧು ಎಂದಮಾತ್ರಕ್ಕೆ ಎಲ್ಲರ ಮುಂದೆಯೂ ತಲೆಬಾಗಿ, ಹಲ್ಲುಕಿರಿಯುವ ಸ್ವಭಾವ ಅವನದಲ್ಲ, ಅವನು ಅದೀನಾತ್ಮಾ-ಯಾರ ಮುಂದೆಯೂ ಡೊಗ್ಗು ಸಲಾಮು ಹೊಡೆಯುವವನಲ್ಲ, ದೀನನಾಗಿ ನಡೆದುಕೊಳ್ಳುವವನೂ ಅಲ್ಲ, ಸಂದರ್ಭ ಬಂದರೆ ಅವನು ಕಠಿಣನೂ ಆಗಬಲ್ಲ; ಮೃದುವೂ ಆಗಬಲ್ಲ, 'ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ'. ಸಾಮಾನ್ಯವಾಗಿ ಜನರಲ್ಲಿ ದೈನ್ಯ ಅಥವಾ ಅಹಂಕಾರ-ಈ ಎರಡರಲ್ಲಿ ಒಂದು ಇದ್ದೇ ಇರುತ್ತದೆ. ಒಂದೋ ದೈನ್ಯ, ಇಲ್ಲ ಅಹಂಕಾರ. ಎರಡನ್ನೂ ಮೀರಿ ನಡೆದುಕೊಳ್ಳುವುದು ಅನೇಕರಿಗೆ ಗೊತ್ತೇ ಇರುವುದಿಲ್ಲ, ರಾಮ ಇದಕ್ಕೆ ಅಪವಾದ. ಏಕೆಂದರೆ ಅವನು ವಿಚಕ್ಷಣ. ಎಲ್ಲರದ ಬಗ್ಗೆ ಎಲ್ಲವನ್ನೂ ತಿಳಿದ ಮೇಧಾವಿ. ಎಲ್ಲಿ, ಹೇಗೆ ನಡೆದುಕೊಳ್ಳಬೇಕೆಂದು ತಿಳಿದ ಪ್ರಾಜ್ಞ. ಇಂತಹ ರಾಮನ ಆಡಳಿತವೂ ಆದರ್ಶಪ್ರಾಯವಾಗಿತ್ತು. ರಾಜಕೀಯ ವ್ಯವಸ್ಥೆ, ಅರ್ಥನೀತಿ ಎಲ್ಲವೂ ಸುದೃಢವಾಗಿತ್ತು. ಮಂತ್ರಿಗಳು, ಅಮಾತ್ಯರು ಎಲ್ಲರೂ ರಾಜನಷ್ಟೇ ಶೂರರೂ, ವಿದ್ಯಾವಂತರೂ, ಇಂದ್ರಿಯಗಳ ಮೇಲೆ ಹಿಡಿತವಿದ್ದವರೂ, ಪ್ರಜೆಗಳ ಮನಸ್ಸನ್ನು ಅರಿಯಬಲ್ಲವರೂ ಆಗಿದ್ದರು. ಸಾವಿರ ಮೂರ್ಖರಿಗಿಂತ ಜ್ಞಾನವಂತನಾದ ಒಬ್ಬನೇ ಮಂತ್ರಿ ಸಾಕು ಅನ್ನುವುದು ರಾಮನ ರಾಜನೀತಿಯಾಗಿತ್ತು. 'ಕಚ್ಚಿತ್ ಸಹಸ್ರಮೂರ್ಖಾಣಾಂ ಏಕಮಿಚ್ಛಸಿ ಪಂಡಿತಮ್'-(ಅಯೋಧ್ಯಾ:100-22)

ಇಂದಿನ ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಇಂತಹ ಆದರ್ಶವನ್ನು ಕಾಣುವುದು ದುರ್ಲಭವೇ ಆಗಿದೆ. ಮಂತ್ರಿಸಂಪುಟದಲ್ಲಿ ಎಲ್ಲೆಲ್ಲೂ ಮೂರ್ಖರೇ ತುಂಬಿಕೊಂಡಿರುವುದನ್ನು ನಾವು ಪ್ರತಿದಿನ ಕಾಣುತ್ತಿರುತ್ತೇವೆ. ಬೆಳಗಾಗೆದ್ದರೆ ದ್ವೇಷ ರಾಜಕಾರಣ ಮಾಡುವುದು, ಪರಸ್ಪರ ನಿಂದಿಸುವುದು, ರಾಷ್ಟ್ರದ್ರೋಹ ಕೆಲಸ ಮಾಡುವುದು, ತನ್ನ ಖಾತೆಯ ಬಗ್ಗೆ ಯೋಚಿಸದೆ, ಅಧ್ಯಯನ ಮಾಡದೆ, ದೇಶದ ಪ್ರಗತಿಗೆ ಶ್ರಮಿಸದೆ ಇರುವ ಸಾವಿರ ಸಾವಿರ ಮಂತ್ರಿಗಳನ್ನು ನಾವು ಇಂದು ಕಾಣಬಹುದು. ಅರ್ಹತೆಗೆ, ತಿಳಿವಳಿಕೆಗೆ ಯಾವ ಮನ್ನಣೆಯೂ ಇಲ್ಲದೆ ಜಾತಿಪ್ರಾತಿನಿಧ್ಯ, ಪ್ರಾದೇಶಿಕ ಪ್ರಾತಿನಿಧ್ಯ ಅನ್ನುತ್ತಾ ಅನರ್ಹರನ್ನೇ ಮಂತ್ರಿಗಳನ್ನಾಗಿ ಮಾಡುವುದು ಇಂದಿನ ರಾಜಕಾರಣದಲ್ಲಿ ಬಗೆಹರಿಸಲಾಗದ ಅನಿಷ್ಟ. ಸುದೈವಕ್ಕೆ ಕೇಂದ್ರ ಸರಕಾರದಲ್ಲಿ ಇಂತಹ ಮಂತ್ರಿಗಳು ಇಲ್ಲ ಅನ್ನುವುದೇ ಸಮಾಧಾನಕರ ಸಂಗತಿ.



ನಾಲ್ಪಸನ್ನಿಚಯಃ ಕಶ್ಚಿದಾಸೀತ್ತಸ್ಮಿನ್ ಪುರೋತ್ತಮೇ ।
ಕುಟುಂಬೀ ಯೋ ಹ್ಯಸಿದ್ಧಾರ್ಥೋಽಗವಾಶ್ವಧನಧಾನ್ಯವಾನ್ ॥
ಕಾಮೀ ವಾ ನ ಕದರ್ಯೋ ವಾ ನೃಶಂಸಃ ಪುರುಷಃ ಕ್ವಚಿತ್ ।
ದ್ರಷ್ಟುಂ ಶಕ್ಯಮಯೋಧ್ಯಾಯಾಂ ನಾವಿದ್ವಾನ್ನ ಚ ನಾಸ್ತಿಕಃ ॥
ಬಾಲಕಾಂಡಃ 6-7, 8

''ರಾಮರಾಜ್ಯದಲ್ಲಿ ಸ್ವಲ್ಪಮಾತ್ರವೇ ಹಣಕಾಸುಳ್ಳ ಯಾವ ಗೃಹಸ್ಥನೂ ಇರಲಿಲ್ಲ, ಇಷ್ಟಾರ್ಥ ಸಿದ್ಧಿಸದೆ ಆಶಾಭಂಗ ಹೊಂದಿದವನಾಗಲೀ, ಕುದುರೆ, ಹಸು, ಧನಧಾನ್ಯಗಳಿಲ್ಲದವನಾಗಲೀ ಒಬ್ಬನೂ ಇರಲಿಲ್ಲ, ಕಾಮುಕರು, ಜಿಪುಣರು, ಕ್ರೂರಿಗಳು, ವಿದ್ಯಾವಿಹೀನರು, ನಾಸ್ತಿಕರು ಯಾರೂ ಇರಲಿಲ್ಲ'' ಎಂದು ಕವಿ ದಾಖಲಿಸುತ್ತಾನೆ. ಎಂತಹ ಅಪರೂಪದ ಮಾತಿದು. ರಾಮರಾಜ್ಯದಲ್ಲಿ ''ಧನಧಾನ್ಯವಿಲ್ಲದ, ಅಶ್ವಸಂಪತ್ತು-ಗೋಸಂಪತ್ತು ಇಲ್ಲದವವನು ಒಬ್ಬನೂ ಇರಲಿಲ್ಲ'' ಅನ್ನುತ್ತಾನೆ. ನಮ್ಮನ್ನು ಆಳುವವರಿಗೆ ಇಂತಹ ಒಂದು ಸುಂದರ ಪರಿಕಲ್ಪನೆ ಇದೆಯೇ? ಅವರು ಎಂದಾದರೂ ಇಂತಹ ಮಹಾಕಾವ್ಯವನ್ನು ಓದಿದ್ದಾರೆಯೇ.

ಕವಿ ವಾಲ್ಮೀಕಿ ನಮ್ಮ ಕಣ್ಣನ್ನು ತೆರೆಸುವ ಇನ್ನೊಂದು ಅದ್ಭುತ ಮಾತನ್ನು ಹೇಳುತ್ತಾನೆ. ರಾಮರಾಜ್ಯದಲ್ಲಿ ನಾಸ್ತಿಕರೇ ಇರಲಿಲ್ಲವಂತೆ. 'ನ ಚ ನಾಸ್ತಿಕಃ'. ನಮ್ಮ ದುರ್ದೈವ ನೋಡಿ. ಭಾರತದ ಎಷ್ಟೋ ರಾಜ್ಯಗಳಲ್ಲಿ ನಾಸ್ತಿಕ ಸರ್ಕಾರವೇ ಇದೆ. ದೀಪಾವಳೀ, ಯುಗಾದಿಯಂತಹ ಹಿಂದು ಹಬ್ಬಗಳಂದು ಹಿಂದೂಗಳಿಗೆ ಯಾವ ಶುಭಾಶಯಗಳನ್ನೂ ಕೋರದೆ ಇತರ ಮತೀಯರ ಹಬ್ಬದಂದು ಅವರನ್ನು ಓಲೈಸುತ್ತಾ, ಅವರ ವೇಷಭೂಷಣ ಧರಿಸಿಕೊಂಡು, ಅವರ ಜೊತೆಗೇ ಊಟ ಮಾಡುತ್ತಾ ಸಂಭ್ರಮದಿಂದ ಬೀಗುವುದನ್ನು ಕಂಡಾಗ ಅವರು ಆಸ್ತಿಕರು ಎಂದು ಅನ್ನಿಸುತ್ತದೆಯೇ? ಖಂಡಿತ ಇಲ್ಲ, ಆಹಾರದ ವಿಷಯದಲ್ಲಿ ಸಸ್ಯಾಹಾರ ಅಥವಾ ಮಾಂಸಾಹಾರ ಅನ್ನುವುದು ಅವರವರಿಗೆ ಸಂಬಂಧಪಟ್ಟಿದ್ದು. ಸ್ವತಃ ಶ್ರೀರಾಮಚಂದ್ರನೇ ಮಾಂಸಾಹಾರಿಯಾಗಿದ್ದ. ಡಾ॥ ರಾಜಕುಮಾರ್ ರಾಘವೇಂದ್ರ ಸ್ವಾಮಿಗಳ ಪಾತ್ರ ಮಾಡುವಾಗ ಮಾಂಸವನ್ನು ಸೇವಿಸುತ್ತಿರಲಿಲ್ಲವಂತೆ. ಹಾಗೆಯೇ ಎನ್.ಟಿ.ಆರ್ ಕೂಡಾ ಶ್ರೀರಾಮನ ಪಾತ್ರ ಮಾಡುವಾಗ ಮಾಂಸಾಹಾರವನ್ನು ಮುಟ್ಟುತ್ತಿರಲಿಲ್ಲವಂತೆ. ಇದು ಶಿಷ್ಟಾಚಾರ. ಅಷ್ಟರಮಟ್ಟಿಗೆ ಅವರಲ್ಲಿ ದೇವರ ಬಗ್ಗೆ ಗೌರವವಿತ್ತು.

ಮಹಾತ್ಮಾಗಾಂಧಿ ರಾಮರಾಜ್ಯದ ಕನಸನ್ನು ಕಂಡಿದ್ದರು. ಅಂದರೆ ಇಂತಹ ಗುಣಗಳನ್ನು ಅವರು ಗುರುತಿಸಿದ್ದರು. ಆದರೆ ನಮ್ಮ ದುರ್ದೈವಕ್ಕೆ, ನಮ್ಮ ದುಷ್ಟರಾಜಕಾರಣಿಗಳಿಗೆ ಇವು ಯಾವವೂ ಬೇಡ. 'ತ್ಯಾಗೇನೈಕೇ ಅಮೃತತ್ವಮಾನಶುಃ'-''ತ್ಯಾಗದಿಂದ ಬರುವ ಸುಖವೇ ನಿಜವಾದ ಸುಖ'' ಎಂಬುದು ಶ್ರೀರಾಮನ ಆದರ್ಶವಾಗಿತ್ತು. ಅರಸು ಪದವಿ, ಆಡಳಿತ ಪೀಠ, ಧರ್ಮಸಂರಕ್ಷಣೆಯ ಹೊಣೆ ಹೊತ್ತ ಧರ್ಮಪ್ರಭುವಿನ ತ್ಯಾಗಕ್ಷೇತ್ರ ಮಾತ್ರ, ಅದು ಸ್ವ-ವೈಭವೀಕರಣದ ಭೋಗದ ಸ್ಥಾನವಲ್ಲ ಎಂದು ತೋರಿಸಿಕೊಟ್ಟ ಮಹಾನುಭಾವ ಶ್ರೀರಾಮಚಂದ್ರ. ಭೋಗೈಕತತ್ಪರರಾದ ಇಂದಿನ ಬಹುಪಾಲು ರಾಜಕಾರಣಿಗಳಿಗೆ ಇದು ಅರ್ಥವಾಗುವುದಿಲ್ಲ.

ಶ್ರೀ ರಾಮನು ಮಾನವ ಕುಲಕ್ಕೆ ಆದರ್ಶ ಏಕೆ?

ವಿದ್ವಾನ್ ನರಸಿಂಹ ಭಟ್ಟ



ಎಲ್ಲರಿಗೂ ಬಂದ ಜಿಜ್ಞಾಸೆ ಇದು. ಏಕೆಂದರೆ ರಾಮನವಮಿ ಒಂದು ಶ್ರೇಷ್ಠವಾದ ಪರ್ವ. ಈ ಪರ್ವವು ನಮ್ಮನ್ನು ಶ್ರೀರಾಮನ ಆದರ್ಶದ ಕಡೆ ಕೊಂಡೊಯ್ಯುತ್ತದೆ. ಹಾಗಾಗಿ ಇಂದು ರಾಮನನ್ನು ಪರಿಪರಿಯಾಗಿ ನೆನಪಿಸಿಕೊಳ್ಳುವ ಶ್ರೇಷ್ಠವಾದ ಪವಿತ್ರವಾದ ಪರ್ವ. ಆದಾವ ಕಾಲದ ಇತಿಹಾಸದಲ್ಲಿ ಬರುವ ಒಬ್ಬ ವ್ಯಕ್ತಿಯನ್ನು ನಾವು ಏಕೆ ಸ್ಮರಿಸಿಕೊಳ್ಳಬೇಕು? ಅವನ ನಡೆ, ಅವನ ನುಡಿಯನ್ನು ಅದೇಕೆ ಅನುಸರಿಸಬೇಕು? ಅನುಕರಿಸಬೇಕು? ಎಂಬುದು ನಮಗೆ ಬರುವ ಸಾಮಾನ್ಯ ಪ್ರಶ್ನೆಯಾಗಿದೆ. ಹೀಗೊಂದು ಮಾತು - ''ನ ದೇವಚರಿತಂ ಚರಿತಂ ಚರೇತ್'' ಎಂಬುದಾಗಿ. ಅಂದರೆ ದೇವರು ಮಾಡಿದಂತೆ ಮಾಡಬಾರದು ಎಂಬುದಾಗಿ. ಇನ್ನೊಂದು ಮಾತು - ''ರಾಮಾದಿವತ್ ವರ್ತಿತವ್ಯಂ ನ ತು ರಾವಣಾದಿವತ್'' ರಾಮನಂತೆ ಇರಬೇಕು; ರಾವಣನಂತೆ ಅಲ್ಲ ಎಂಬುದಾಗಿ. ಎರಡು ಮಾತುಗಳು ಪರಸ್ಪರ ವಿರೋಧದಂತೆ ಕಾಣುತ್ತವೆ. ವಾಸ್ತವವಾಗಿ ಇವೆರಡೂ ವಿರೋಧದಂತೆ ಭಾಸವಾಗುತ್ತದೆ; ಆದರೆ ವಿರೋಧವಿಲ್ಲ, ಹಾಗಾದರೆ ನಾವು ರಾಮನಂತೆ ನಡೆಯಬಾರದೇ? ರಾಮನಂತೆ ನುಡಿಯಬಾರದೇ? ಎಂಬ ಪ್ರಶ್ನೆಯೂ ಇದರ ಜೊತೆಯಲ್ಲಿ ಸಹಜವಾಗಿ ಬರುತ್ತದೆ. ಹಾಗಾಗಿ ಈ ಎಲ್ಲಾ ವಿಷಯಗಳನ್ನು ಇಟ್ಟುಕೊಂಡು ರಾಮನನ್ನು ಸ್ವಲ್ಪ ನೆನಪಿಸಿಕೊಳ್ಳೋಣ.

ಶ್ರೀಮದ್ ರಾಮಾಯಣದಲ್ಲಿ ವಾಲ್ಮೀಕಿಗಳು ನಾರದರಿಗೆ ಕೇಳುವ ಪ್ರಶ್ನೆ. ಅನೇಕ ಗುಣಗಳನ್ನು ಪಟ್ಟಿ ಮಾಡಿ ಇಂತಹ ಗುಣವಿಶಿಷ್ಟನಾದ ಯಾವನಾದರೂ ಒಬ್ಬ ವ್ಯಕ್ತಿ ಇದ್ದಾನೆಯೇ? ಎಂದು. ಅದಕ್ಕೆ ದಶರಥನಂದನ, ರಘುಕುಲತಿಲಕ, ಸರ್ವಜನಪ್ರಿಯ ವೇದ-ವೇದಾಂಗ-ತತ್ವಜ್ಞ, ಸ್ಮಿತಪೂರ್ವಭಾಷೀ, ಏಕಪತ್ನೀವ್ರತಸ್ಥ ಇತ್ಯಾದಿ ಅನೇಕ ಗುಣಗಳನ್ನು ಪಟ್ಟಿ ಮಾಡಿ ಶ್ರೀರಾಮನ ಆದರ್ಶದ ವ್ಯಕ್ತಿತ್ವವನ್ನು ಎಲ್ಲರೂ ಮನಗಾಣುವಂತೆ ವಿವರಿಸುವುದನ್ನು ನಾವು ಕಾಣಬಹುದು. ಅಂದರೆ ಶ್ರೀರಾಮನು ಒಬ್ಬ ಅವತಾರಿ. ಅವನ ಸಂಕಲ್ಪವು ಮಾನವನ ಅವತಾರರೂಪವಾದದ್ದು. ರಾವಣನ ಸಂಹಾರಕ್ಕೆಂದೇ ಅವತರಿಸಿದ ಯುಗಪುರುಷ. ರಾಮಣನ ವರ ಫಲಿಸಬೇಕಾದರೆ ಮಾನವನರೂಪದಲ್ಲಿ ಅವತರಿಸಬೇಕಾದದ್ದು ಅತ್ಯಂತ ಅನಿವಾರ್ಯವಾಗಿತ್ತು. ಹಾಗಾಗಿ ಶ್ರೀರಾಮನು ತನ್ನ ದೇವತ್ವವನ್ನು ಎಲ್ಲೂ ಪ್ರಕಟಪಡಿಸದೇ ಮಾನವನಾಗಿಯೇ ತನ್ನ ಬದುಕಿನ ಕೊನೆಯವರೆಗೂ ವ್ಯವಹರಿಸಿದ. ಅತಿಮಾನುಷವಾದ ಯಾವ ಪವಾಡವನ್ನೂ ಮಾಡಿಲ್ಲ, ಮಾನವನ ಪರಿಮಿತಿಗೆ ಮೀರಿದ ಅದಾವ ಕಾರ್ಯವೂ ಅವನಿಂದಾಗಿಲ್ಲ, ಒಬ್ಬ ಸಾಮಾನ್ಯ ಮಾನವನಾಗಿ ಹೇಗೆ ಬದುಕಿ, ಬಲಿಷ್ಠನಾದ ರಾವಣನಂತಹ ಶತ್ರುವನ್ನು ಸಂಹರಿಸಬಹುದು? ಎಂಬುದಾಗಿ ಬದುಕಿ ತೋರಿಸಿದ. ಹಾಗಾಗಿ ಶ್ರೀರಾಮನ ಚರಿತೆ ನಮಗೆ ಅನುಕರಣೀಯ. ಇನ್ನೊಂದು ಮಾತು ನ ದೇವಚರಿತಂ ಚರೇತ್ ಎಂಬ ಮಾತಿಗೆ ಇದು ವಿರುದ್ಧವಲ್ಲವೇ? ಎಂದರೆ ಶ್ರೀರಾಮನು ಎಲ್ಲೂ ತನ್ನ ದೇವತ್ವವನ್ನು ಪ್ರದರ್ಶಿಸಿಲ್ಲ, ತನ್ನ ಅವತಾರ ಸ್ವರೂಪವಾದ ಮಾನುಷರೂಪವನ್ನೇ ಎಲ್ಲೆಡೆ ನಿರೂಪಿಸಿದ. ಹಾಗಾಗಿ ಶ್ರೀರಾಮನದ್ದು ಮಾನವಜೀವನವೇ ಹೊರತು, ದೇವಜೀವನ ಅಲ್ಲ, ಆದ್ದರಿಂದ ಶ್ರೀರಾಮನ ಚರಿತೆ ಅನುಕರಣೀಯ ಮತ್ತು ಅನುಸರಣೀಯ. ಇಂತಹ ವಿಶಿಷ್ಟ ಗುಣಸಂಪನ್ನನಾದ ರಾಮನು ನಮಗೆಲ್ಲರಿಗೂ ಆದರ್ಶ.

ಈ ಹಿಂದೆ ಹೇಳಿದಂತೆ ಅವನು ಬಾಲ್ಯದಿಂದ ಹಿಡಿದು ನಿರ್ಯಾಣದವರೆಗೆ ಅನೇಕ ಆದರ್ಶಗುಣಗಳನ್ನು ಪ್ರಕಟಪಡಿಸಿದ. ತಂದೆಗೆ ಮಗನಾಗಿ ಯಾವ ರೀತಿ ಇರಬೇಕು? ಎಂಬುದನ್ನು ತೋರಿಸಿದ. ತಂದೆಗೆ ಅನೇಕ ಪತ್ನಿಯರಿದ್ದರೂ ಅವರೆಲ್ಲರನ್ನು ತನ್ನ ಸ್ವಂತ ತಾಯಿಯಂತೆ ಹೇಗೆ ಪರಿಗಣಿಸಬಹುದು ಎಂಬ ಉದಾತ್ತಭಾವವನ್ನು ಬಿತ್ತರಿಸಿದ. ಒಬ್ಬನೇ ತಂದೆಗೆ ಮೂವರು ಪತ್ನಿಯರಲ್ಲಿ ಹುಟ್ಟಿದ ನಾಲ್ಕು ಜನ ಅಣ್ಣತಮ್ಮಂದಿರು ಹೇಗೆ ಅನ್ಯೋನ್ಯವಾಗಿ ಬದುಕಬಹುದು ಎಂಬುದನ್ನು ತೋರಿಸಿಕೊಟ್ಟ, ಹೇಗೆ ಗುರುವಿಗೆ ತಕ್ಕ ಶಿಷ್ಯ ಎಂಬುದನ್ನು ವಿಶ್ವಾಮಿತ್ರನ ಯಜ್ಞಸಂರಕ್ಷಣೆಯ ನೆಪದಲ್ಲಿ ನೆನಪಿಸಿದ. ತಾನು ಆಡಿದಂತೆ ಮಾಡುವೆನು ಎಂಬ ಸತ್ಯಸಂಧತೆಯನ್ನು ರಾಮಾಯಣದ ಬುಡದಿಂದ ತುದಿಯವರೆಗೆ ಅರುಹಿದ. ಸುಗ್ರೀವನ ಜೊತೆ ಸಖ್ಯವನ್ನು ಬೆಳಸಿ ಹೇಗೆ ಮೈತ್ರಿಯನ್ನು ಮಾಡಬೇಕು? ಎಂಬುದನ್ನು ಜಾಹಿರಪಡಿಸಿದ. ಶತ್ರುವಿನ ಪಾಳೆಯದಲ್ಲಿ ಇದ್ದು ಶರಣಾಗತನಾಗಿ ಬಂದರೆ ಅವರನ್ನು ಹೇಗೆ ಸ್ವೀಕರಿಸಬೇಕು? ಎಂಬುದನ್ನು ತೋರಿಸಿ ಶರಣಾಗತ-ವತ್ಸಲನಾದ ಎಂಬುದನ್ನು ವಿಭೀಷಣ ಶರಣಾಗತಿಯ ಪ್ರಕರಣದಲ್ಲಿ ಜಗತ್ತಿಗೆ ತಿಳಿಸಿದ. ವೈರವು ವ್ಯಕ್ತಿಗತವಾದದ್ದಲ್ಲ; ವ್ಯಕ್ತಿಯಲ್ಲಿರುವ ದೋಷಗತವಾದದ್ದು ಎಂಬುದನ್ನು ತಿಳಿಸಲು ಮರಣಾಂತಾನಿ



ವೈರಾಣಿ ಎಂಬಂತೆ ರಾವಣನ ಮತ್ತು ವಾಲಿಯ ಮರಣದ ಅನಂತರ ಸ್ವತಃ ತಾನೇ ಇದ್ದು ಅವರಿಬ್ಬರಿಗೂ ಅಂತ್ಯಕ್ರಿಯೆಯನ್ನು ಮಾಡಿಸಿದ್ದು ಅವನೆಂತಹ ಸಮತ್ವ ಉಳ್ಳವನು!? ಎಂಬುದನ್ನು ತಿಳಿಸಿದ. ಹೀಗೆ ಅವನ ಪ್ರತಿ ಹೆಜ್ಜೆಯೂ ಆದರ್ಶ. ಅವನ ಪ್ರತಿ ನುಡಿಯೂ ಆದರ್ಶ. ರಾಮನೆಂದೂ ತಪ್ಪನ್ನು ಮಾಡಲಿಲ್ಲ; ತಪ್ಪನ್ನು ಆಡಿಲ್ಲ, ಏಕೆಂದರೆ ಅವನೊಬ್ಬ ಧರ್ಮಪುರುಷ. ಧರ್ಮವೇ ಅವತರಿಸಿದರೆ ಅದು ರಾಮನಾಗುವುದು ತಾನೆ! ಧರ್ಮವಾದಲ್ಲಿ ಎಂದಾದರೂ ತಪ್ಪು ನಡೆಯಲು ಸಾಧ್ಯವೇ? ಹಾಗಾಗಿ ನಮ್ಮ ಬುದ್ಧಿಗೆ ಶ್ರೀರಾಮನು ತಪ್ಪಾಗಿ ಕಂಡರೆ, ಅದು ನಮ್ಮ ಬುದ್ಧಿಯ ದೋಷದಿಂದ ಅಷ್ಟೇ, ಹೊರತು ಶ್ರೀರಾಮನ ತಪ್ಪಲ್ಲ, ಅಲ್ಲಿ ತಪ್ಪು ಅಸಾಧ್ಯ. ಏಕೆಂದರೆ ಅವನು ಧರ್ಮಮೂರ್ತಿ. ಹೀಗೆ ಧರ್ಮಸ್ವರೂಪನಾಗಿ, ಗುಣಪರಿಪೂರ್ಣನಾಗಿ, ಆದರ್ಶ ಮಾನವನಾಗಿ ಬೆಳಗಿದ.

ಅಷ್ಟೇ ಅಲ್ಲ, ಇಂದ್ರಿಯಗಳಿಗೂ ಅತಿ ವಿಷಯನಾದ, ತನ್ನ ನಡೆಯಿಂದ ಸಾಮಾನ್ಯರಿಗೂ ಅನುಕರಣೀಯನಾದ. ಯಾರು ಅಂತರಂಗದಲ್ಲಿ ಕಾಣಲು ಸಮರ್ಥರೋ ಅವರಿಗೂ ಶ್ರೀರಾಮನು ದೇವನಾಗಿ ಕಂಡ. ಯಾರು ಇನ್ನೂ ಒಳಗೆ ಕಾಣಬಲ್ಲರೋ ಅವರಿಗೆ ಆತ್ಮಾರಾಮನಾಗಿ ಗೋಚರಿಸಿದ. ಇದಕ್ಕೆ ಶ್ರೀರಂಗ ಮಹಾಗುರುಗಳ ಒಂದು ಮಾತು ಸಾಕು ಶ್ರೀರಾಮನ ಅಸಾಧಾರಣತ್ವವನ್ನು ಅರ್ಥಮಾಡಿಕೊಳ್ಳಲು. ''ನಾರಾಯಣನು ನರನಾಗಿ ಅವತರಿಸಿ ನರರೊಡನೆ ಕರೆದುಕೊಂಡು ಹೋಗಲು ಇಳಿದು ಬಂದವನೇ ಶ್ರೀರಾಮ'' ಎಂಬ ಮಾತು ಶ್ರೀರಾಮನ ಪರಿಪೂರ್ಣ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಂತೆ. ಕೇವಲ ಪರ್ವಕಾಲದಲ್ಲಿ ಮಾತ್ರವಲ್ಲ, ಯಾವಾಗಲೂ ಶ್ರೀರಾಮನ ಆದರ್ಶ ವ್ಯಕ್ತಿತ್ವವನ್ನು ನಾವು ಸ್ಮರಿಸಬೇಕು ಎಂಬುದಾಗಿ ಭಾವಿಸುತ್ತೇನೆ.

ಸಂಪಾದಕೀಯ

ಸಂಕಷ್ಟದ ಬೆನ್ನೇರಿ ಬರುವ ಸಮಾಜಘಾತುಕರು

ಯುದ್ಧ ಎಂಬುದು ಎಲ್ಲೋ ಒಂದು ಕಡೆ ನಡೆದರೂ ಅದು ನಮಗೆ ಯಾವುದೇ ಅಡ್ಡಿ ಮಾಡಲ್ಲ ಎಂಬುದು ಸತ್ಯವಲ್ಲ. ಅದು ಜಗತ್ತಿನ ಎಲ್ಲ ದೇಶಗಳಿಗೂ ಒಂದಿಲ್ಲೊಂದು ರೀತಿಯಲ್ಲಿ ಅಡ್ಡಿ ಮಾಡುತ್ತದೆ. ಇಂಥ ಹೊತ್ತಿನಲ್ಲಿ ತಾವು ಲಾಭ ಮಾಡಿಕೊಳ್ಳುವುದು ಹೇಗೆ ಎಂಬುದು ಸಮಾಜಘಾತುಕರ ಆಲೋಚನೆ. ಇದಕ್ಕಾಗಿ, ದೇಶದ ಮತ್ತು ಜನರ ಸ್ಥೈರ್ಯವನ್ನೇ ಅಲ್ಲಾಡಿಸಲು ಹೊಂಚು ಹಾಕುತ್ತಿರುತ್ತಾರೆ. ಕರೋನಾ ಸಂಕಟದ ದಿನಗಳಲ್ಲಿ ಔಷಧ, ಆಕ್ಸಿಜನ್ ಕೊರತೆಯ ಮಧ್ಯೆಯೂ ಇಲ್ಲದ-ಸಲ್ಲದ ಸುದ್ದಿ ಹಬ್ಬಿಸಿ, ಕಾಳಸಂತೆ ನಡೆಸಿದವರು ನಮ್ಮ ನಡುವೆಯೇ ಇದ್ದರು. ಆ ಸ್ವಾರ್ಥದ ಕಳಂಕ ಇನ್ನೂ ಒಣಗಿಲ್ಲ.



ಈಗ ಜಗತ್ತುಯುದ್ಧದ ನೆರಳಿನಲ್ಲಿ ನಿಂತಿರುವ ಸಮಯದಲ್ಲಿ, ಮತ್ತದೇ ಜಾಯಮಾನದ ಮಂದಿ ಸಕ್ರಿಯರಾಗಿದ್ದಾರೆ. ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ಸರಬರಾಜಿನಲ್ಲಿ ಯಾವುದೇ ತೊಂದರೆ ಇಲ್ಲ ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸ್ಪಷ್ಟಪಡಿಸಿದ್ದರೂ, ಸಾಮಾಜಿಕ ಮಾಧ್ಯಮಗಳ ಮೂಲಕ ಹಬ್ಬಿಸಿದ ವದಂತಿಗಳನ್ನೇ ನಿಜ ಎಂದು ಭ್ರಮಿಸಿ ಜನ ಬಂಕ್‌ಗಳ ಮುಂದೆ ಕ್ಯೂ ನಿಲ್ಲುತ್ತಿದ್ದಾರೆ. ಈ ಅವ್ಯವಸ್ಥೆ ಆಕಸ್ಮಿಕವಲ್ಲ; ಯಾರದ್ದೋ ದುರುದ್ದೇಶದ ಸ್ಕ್ರಿಪ್ಟ್ ಇದು. ಈಗಾಗಲೇ ತೈಲ ಕಂಪನಿಗಳು ಎರಡು ತಿಂಗಳಿಗೆ ಆಗುವಷ್ಟು ದಾಸ್ತಾನು ನಮ್ಮಲ್ಲಿದೆ ಎಂದು ಹೇಳುತ್ತಿವೆ. ಪ್ರಧಾನಿ ನರೇಂದ್ರ ಮೋದಿ ಅವರು, ಶುಕ್ರವಾರ ಎಲ್ಲ ಮುಖ್ಯಮಂತ್ರಿಗಳ ಸಭೆ ಕರೆದು ಪರಿಸ್ಥಿತಿ ಅವಲೋಕಿಸುತ್ತಾರೆ. ಈ ಯುದ್ಧದ ಗಾಂಭೀರ್ಯತೆ ಎಲ್ಲರಿಗೂ ಅರ್ಥವಾಗಿದೆ. ಆದರೆ, ಇಲ್ಲಿ ಕೆಲವು ರಾಜಕೀಯ ಪಕ್ಷಗಳ ಪಾತ್ರವನ್ನೂ ಪ್ರಶ್ನಿಸಲೇಬೇಕು. ಆಡಳಿತ ಪಕ್ಷಗಳ ವೈಫಲ್ಯ ಎತ್ತಿ ತೋರಿಸಲು ವಿರೋಧ ಪಕ್ಷಗಳು ಅವಕಾಶ ಹುಡುಕುವುದು ಸಹಜ. ಆದರೆ ಆ ಅವಕಾಶಕ್ಕಾಗಿ ದೇಶದ ಸ್ಥಿರತೆಯನ್ನೇ ಒತ್ತೆ ಇಡುವುದು ರಾಜಕೀಯ ನೈತಿಕತೆಯ ಅಧಃಪತನ. ಸಂಕಷ್ಟ ಕಾಲದಲ್ಲಿ ರಾಜಕೀಯ ವ್ಯತ್ಯಾಸಗಳನ್ನು ಬದಿಗಿಟ್ಟು ರಾಷ್ಟ್ರ ಹಿತದ ನೆಲೆಯಲ್ಲಿ ನಿಲ್ಲುವ ಪ್ರಬುದ್ಧತೆ ಇಲ್ಲದಿದ್ದರೆ, ಅದು ಆ ಪಕ್ಷದ ಮಾತ್ರವಲ್ಲ, ನಮ್ಮ ಪ್ರಜಾಪ್ರಭುತ್ವದ ದೌರ್ಬಲ್ಯ.

ವದಂತಿ ಹಬ್ಬಿಸುವವರ ವಿರುದ್ಧ ಕಾನೂನು ಕ್ರಮ ಕಠಿಣವಾಗಿರಲೇಬೇಕು. ಆದರೆ ಇಷ್ಟೇ ಸಾಲದು. ಸರ್ಕಾರ ಸಹ ಕೇವಲ ಅಧಿಕೃತ ಹೇಳಿಕೆ ಕೊಟ್ಟು ಕೈ ತೊಳೆದುಕೊಳ್ಳಬಾರದು. ಪ್ರತಿ ಮೂಲೆಮೂಲೆಗೂ ಸತ್ಯ ತಲುಪುವಂತಹ ಪ್ರಭಾವಶಾಲಿ ಮಾಹಿತಿ ಪ್ರಚಾರ ಅಗತ್ಯ. ಎಲ್ಲಕ್ಕಿಂತ ಮುಖ್ಯವಾಗಿ, ಪ್ರತಿ ನಾಗರಿಕನೂ ತಾನೊಬ್ಬ ಜವಾಬ್ದಾರಿಯುತ ದೇಶದ ಸದಸ್ಯ ಎಂಬ ಪ್ರಜ್ಞೆಯಿಂದ ವರ್ತಿಸಬೇಕು. ಮಾಧ್ಯಮಗಳ ಜವಾಬ್ದಾರಿಯೂ ಈ ಸಂದರ್ಭದಲ್ಲಿ ನಿರ್ಣಾಯಕ. ಅಪಕ್ವ ಸುದ್ದಿಗಳನ್ನು ವೇಗವಾಗಿ ಹರಡುವ ಸಾಮಾಜಿಕ ಮಾಧ್ಯಮಕ್ಕೆ ಪ್ರತಿತಂತ್ರವಾಗಿ, ಮುಖ್ಯವಾಹಿನಿ ಮಾಧ್ಯಮಗಳು ತ್ವರಿತವಾಗಿ, ಸಾಕ್ಷ್ಯಾಧಾರಿತವಾಗಿ ಸತ್ಯ ಹೇಳಬೇಕು. ಸುಳ್ಳು ಸುದ್ದಿ ಮತ್ತು ಸತ್ಯ ಸುದ್ದಿ ನಡುವಿನ ಓಟದಲ್ಲಿ ಮಾಧ್ಯಮ ಹಿಂದೆ ಬಿದ್ದರೆ, ಸೋಲು ಇಡೀ ಸಮಾಜದ್ದು.

ಸಂಕಷ್ಟ ಕಾಲದಲ್ಲಿ ತಾಳ್ಮೆ ಮತ್ತು ವಿವೇಕ ಇವೇ ನಿಜವಾದ ದೇಶಭಕ್ತಿ. ಗಾಬರಿ ಹುಟ್ಟಿಸುವ ಸಂದೇಶಗಳಿಗೆ ಬಲಿಯಾಗದಿರುವುದು ದೇಶಕ್ಕೆ ಮಾಡುವ ಸೇವೆ.

ಆಯುರ್ವೃದ್ಧಿ- ಕ್ಷೀಣ ಹೇಗೆ?

ವೃದ್ಧಾರ್ಕೋ ಹೋಮಧೂಮಶ್ಚ ಬಾಲಸ್ತ್ರೀ ನಿರ್ಜಲೋದಕಮ್।
ರಾತ್ರೌ ಕ್ಷೀರಾನ್ನ ಭುಕ್ತಿಶ್ಚ ಆಯುರ್ವೃದ್ಧಿರ್ದಿನೇ ದಿನೇ॥
ಬಾಲಾರ್ಕಃ ಪ್ರೇತಧೂಮಶ್ಚ ವೃದ್ಧಸ್ತ್ರೀ ಪಲ್ವಲೋದಕಮ್।
ರಾತ್ರೌ ದಧ್ಯನ್ನಭುಕ್ತಿಶ್ಚ ಆಯುಃ ಕ್ಷೀಣಂ ದಿನೇ ದಿನೇ ॥

ಸಂಜೆಯ ಸೂರ್ಯದರ್ಶನ, ಹೋಮಧೂಮ, ಕಿರಿಯವಳೊಂದಿಗೆ ಮದುವೆ, ಝರಿಯ ಜಲಸೇವನೆ, ರಾತ್ರಿ ಹಾಲನ್ನದ ಊಟ ಇವು ಆಯುಸ್ಸನ್ನು ವೃದ್ಧಿಸುತ್ತವೆ.



ಅಂತೆಯೇ ಬೆಳಗಿನ ಸೂರ್ಯದರ್ಶನ, ಹೆಣದ ಹೊಗೆ, ಹಿರಿಯಳೊಂದಿಗೆ ಮದುವೆ, ಕೆರೆಯ ನೀರು ಸೇವನೆ, ರಾತ್ರಿ ಮೊಸರನ್ನದ ಊಟ - ಇವು ಆಯುಷ್ಯವನ್ನು ಕಡಿಮೆ ಮಾಡುತ್ತದೆ - ಎಂಬುದು ಶ್ಲೋಕಾರ್ಥ.

ಪ್ರತಿಯೊಬ್ಬರಿಗೂ ಇಷ್ಟು ವರ್ಷ ಆಯುಷ್ಯವೆಂಬುದು ವಿಧಿಲಿಖಿತ. ಇದನ್ನು ಬದಲಾಯಿಸಲು ಸಾಧ್ಯವೆ ಎಂಬ ಜಿಜ್ಞಾಸೆ ಸಹಜ. ಸಹಜವಾಗಿ, ನಮ್ಮ ಆಚಾರ-ವಿಚಾರ ವ್ಯವಹಾರಗಳ ಮೂಲಕ ಆಯುಷ್ಯಾವಧಿಯನ್ನು ವಿಸ್ತರಿಸಿಕೊಳ್ಳಲೂಬಹುದು. ಕ್ಷೀಣ ಮಾಡಿಕೊಳ್ಳಲೂಬಹುದು. ಎಲ್ಲವೂ ನಮ್ಮ ಪ್ರಾಮಾಣಿಕ ಪ್ರಯತ್ನ, ಸಾಧನೆಗಳನ್ನು ಅವಲಂಬಿಸಿದೆ. ಪ್ರಕೃತ ಯುಗಳ ಶ್ಲೋಕದಲ್ಲಿ ಆಯುಷ್ಯವನ್ನು ಹೇಗೆ ವೃದ್ಧಿಸಿಕೊಳ್ಳಬಹುದು ಹಾಗೂ ಹೇಗೆ ನಡೆದುಕೊಂಡರೆ ಆಯುಷ್ಯ ಕ್ಷೀಣವಾಗುತ್ತದೆ ಎಂಬುದನ್ನು ತಿಳಿಸಲಾಗಿದೆ. ಯಾವೆಲ್ಲ ಕಾರಣಗಳಿಂದಾಗಿ ಆಯುಸ್ಸು ಕ್ಷೀಣಿಸುತ್ತದೆ ಎಂಬುದನ್ನು ಎರಡನೆಯ ಶ್ಲೋಕ ತಿಳಿಸಿಕೊಡುತ್ತದೆ. ಮುಳುಗುವ ಸೂರ್ಯ ಕೆಂಬಣ್ಣದಿಂದ ದಿಗಂತವನ್ನು ಬೆಳಗುತ್ತಾ ನಮ್ಮೆಲ್ಲ ಉತ್ಸಾಹವನ್ನು ಹೆಚ್ಚಿಸುತ್ತಾನೆ. ಮುಳುಗುವ ಸೂರ್ಯ ನಾಳೆ ಉದಯಿಸುವ ಸೂರ್ಯನಿಗೆ ಮುನ್ನುಡಿ. ಇಂಥಹ ಸೂರ್ಯನ ದರ್ಶನ ಉತ್ಸಾಹ ತುಂಬುವುದರ ಮೂಲಕ ಆಯುಷ್ಯ ವೃದ್ಧಿಗೆ ಕಾರಣನಾಗುತ್ತಾನೆ.

ಹೋಮದ ಹೊಗೆ ಅಪೂರ್ವ ದ್ರವ್ಯಗಳನ್ನು ಸ್ವೀಕರಿಸಿ ಹೊರಹೊಮ್ಮುವಂಥದ್ದು. ಅಗ್ನಿಗೆ ಅರ್ಪಿಸುವ ತುಪ್ಪ ಹಾಗೂ ವಿಶೇಷ ಸಮಿತ್ತುಗಳಿಂದಾಗಿ ಹೋಮ ಧೂಮಕ್ಕೆ ರೋಗಾಣುಗಳನ್ನು ನಾಶಪಡಿಸುವ ಸಾಮರ್ಥ್ಯ ಬಂದಿರುತ್ತದೆ. ಜತೆಗೆ ಮಂತ್ರದ ಮೂಲಕ ಅಭಿಮಂತ್ರಿತ ಹೋಮ ದ್ರವ್ಯಗಳಾದ್ದರಿಂದ ಹೊರಸೂಸುವ ಧೂಮ ಆರೋಗ್ಯಕಾರಕ. ತನಗಿಂತಲೂ ಚಿಕ್ಕವಳನ್ನು ಮದುವೆಯಾಗುವುದರಿಂದ ಅವಳ ಉತ್ಸಾಹದ ಓಡಾಟ ನಮ್ಮ ಆರೋಗ್ಯವನ್ನು ಹೆಚ್ಚಿಸಿ ದೀರ್ಘಾಯುಷ್ಯಕ್ಕೆ ಕಾರಣವೆನಿಸುತ್ತದೆ. ಝರಿಯ ನೀರು ಪರಿಶುದ್ಧ ಆಯುಃಕಾರಕ. ರಾತ್ರಿಯ ಹೊತ್ತು ಹಾಲನ್ನವನ್ನು ಊಟ ಮಾಡಬೇಕು. ಈ ಲಘುವಾದ ಆಹಾರ ಜೀರ್ಣಕ್ರಿಯೆಗೆ ಪೂರಕವಾಗಿ ಆಯುಷ್ಯ ವೃದ್ಧಿಸುತ್ತದೆ. ಇವುಗಳ ಸರಿಯಾದ ಪಾಲನೆಯೇ ಆಯುಷ್ಯ ವೃದ್ಧಿಗೆ ಕಾರಣ ಎಂಬುದು ಜ್ಞಾನಿಗಳ ಅಭಿಮತ.

ಎಳೆಬಿಸಿಲು ಅಂದರೆ ಮುಂಜಾನೆಯ ಬಿಸಿಲು ಆರೋಗ್ಯಕ್ಕೆ ಒಳ್ಳೆಯದು. ವಿಟಮಿನ್ನುಗಳಿರುತ್ತವೆ ಇತ್ಯಾದಿ ಹೇಳುತ್ತಾರೆ. ಆದರೆ ಪ್ರಕೃತ ಶ್ಲೋಕದಲ್ಲಿ ಬೆಳಗಿನ ಬಿಸಿಲು ದೀರ್ಘಾಯುಷ್ಯಕ್ಕೆ ಮಾರಕ ಎನ್ನಲಾಗಿದೆ. ಈ ಹೇಳಿಕೆಯ ಬಗ್ಗೆ ನನಗೇ ಗೊಂದಲವಿದೆ. ಮೂಲಗ್ರಂಥದಲ್ಲಿ ಬಲವಾದ ಕಾರಣವಿರಬಹುದು. ಹೆಣ ಸುಟ್ಟ ಹೊಗೆ, ಕಸಕಡ್ಡಿ, ಪ್ಲಾಸ್ಟಿಕ್ ಸುಟ್ಟ ಹೊಗೆ ಇವೆಲ್ಲವೂ ವಿಷಯುಕ್ತ. ಇವುಗಳನ್ನು ಸೇವಿಸಿದರೆ ಆಯುಷ್ಯಕ್ಕೆ ಕ್ರಮೇಣ ಸಂಚಕಾರ. ವೃದ್ಧಸ್ತ್ರೀ ಅಂದರೆ ನಮಗಿಂತಲೂ ಹಿರಿಯವಳು ಮಡದಿಯಾದರೆ ಚಟುವಟಿಕೆ ನಮಗಿಂತಲೂ ಕಡಿಮೆ. ಪರಿಣಾಮವಾಗಿ ಜೀವನೋತ್ಸಾಹವಿರದು. ಸರೋವರದ ನೀರು ಆರೋಗ್ಯಕ್ಕೆ ಒಳ್ಳೆಯದಲ್ಲ. ಎಲ್ಲ ರೀತಿಯ ಹೊಲಸು ಅಲ್ಲಿರಬಹುದು. ರಾತ್ರಿಯ ಹೊತ್ತು ಮೊಸರನ್ನ ನಿಷಿದ್ಧ. ಇದು ಆರೋಗ್ಯದ ಏರುಪೇರಿಗೆ ಕಾರಣ. ಶ್ವಾಸಕೋಶಕ್ಕೂ ಒಳ್ಳೆಯದಲ್ಲ. ಆದ್ದರಿಂದ ರಾತ್ರಿ ಮೊಸರನ್ನ ಊಟ, ಮಜ್ಜಿಗೆ ಕುಡಿಯುವುದು... ಆಯುಷ್ಯ ಕ್ಷೀಣತೆಗೆ ಕಾರಣವೆನಿಸುತ್ತದೆ.

ಧುರಂಧರ: ಸಂಭಾಷಣೆ ಮತ್ತು ಬಲೂಚ್ ಪ್ರಶ್ನೆ!

ಉಘೇ ವೀರಭೂಮಿಗೆ
• ಸಂತೋಷ್ ತಮ್ಮಯ್ಯ
santoshthammaiah@gmail.com



ಧುರಂಧರ ಸಿನೆಮಾ ನೋಡಿದ ಬಹುತೇಕರಿಗೆ ಇದು ಮಹತ್ವದ ದೃಶ್ಯಗಳೇನಲ್ಲ!

ಎಸ್. ಪಿ ಚೌಧರಿ ಅಸ್ಲಂ ಸಂದರ್ಭ ಸಿಕ್ಕಾಗಲೆಲ್ಲಾ ಬಲೂಚಿಗಳನ್ನು "ಏ ಬಲೂಚ್" ಎಂದು ಕರೆಯುತ್ತಾನೆ. ಪಠಾಣ್ ಅಹಂಕಾರ ಹೊದ್ದ ಎಸ್.ಪಿ ಚೌಧರಿಗೆ ಬಲೂಚಿಗಳೆಂದರೆ ಪಠಾಣರಷ್ಟು ಶ್ರೇಷ್ಠರಲ್ಲದ, ಅವರಷ್ಟು ಪಕ್ವರಲ್ಲದ, ತೆಪ್ಪಗಿರಲೆಂದೇ ಹುಟ್ಟಿದ ಜನ. ಎಸ್.ಪಿ ಚೌಧರಿಯ ಈ ಮಾನಸಿಕತೆಯೇ ಪಾಕಿಸ್ತಾನದ್ದೂ ಕೂಡ. ಶೇರ್-ಇ-ಬಲೂಚ್ ಬಿರುದು ಹೊತ್ತವನನ್ನು ಕೂಡ ಈ ಚೌಧರಿ ಹಾಗೆಯೇ ಕರೆಯುತ್ತಾನೆ. ಒಂದು ಹಂತದಲ್ಲಂತೂ ಆತ ಐವರು ಬಲೂಚ್ ವಿದ್ಯಾರ್ಥಿಗಳ ನಕಲಿ ಎನ್‌ಕೌಂಟರ್ ನಡೆಸುತ್ತಾನೆ. ಅದಕ್ಕೆ ಆತ "ಮಗರಮಚ್ ಪೆ ಭರೋಸಾ ಕರ್ ಸಕ್ತೆ ಹೈ, ಪರ್ ಬಲೂಚ್ ಪೆ ನಹೀ"(ಮೊಸಳೆಯನ್ನಾದರೂ ನಂಬಬಹುದು, ಬಲೂಚಿಗಳನ್ನಲ್ಲ) ಎಂಬ ಕಾರಣ ಕೊಡುತ್ತಾನೆ.

ಇವೆಲ್ಲವೂ ಸಿನೆಮಾ ವಿಮರ್ಶಕರು ಚರ್ಚೆ ಮಾಡಲೇಬೇಕಾದ ಸಂಗತಿಗಳೇನಲ್ಲ. ಸಿನೆಮಾ ಹೇಳಹೊರಟ ಸಂಗತಿಯೇ ಬೇರೆ. ಆದರೆ ಸಿನೆಮಾದಲ್ಲಿ ಬಲೂಚ್ ದಟ್ಟವಾಗಿ ಕಾಣುವುದರಿಂದ ಅದೂ ಕೂಡ ಮುಖ್ಯ. ಬಲೂಚ್ ಇತಿಹಾಸವನ್ನು ಅವಲೋಕಿಸಿದರೆ ಈ ಸಂಭಾಷಣೆಗಳು ಕಳೆದ ಏಳು ದಶಕಗಳಲ್ಲಿ ಬಲೂಚಿಗಳೊಂದಿಗೆ ಏನು ನಡೆದಿದೆಯೋ ಅದರ ನಾಲ್ಕು ಹನಿಗಳ ಪಾಕ ಎನಿಸದಿರದು. ಜೊತೆಗೆ ಪಾಕ್ ಇತಿಹಾಸ ಕೂಡ ಎನ್‌ಕೌಂಟರ್ ಸ್ಪೆಶಲಿಸ್ಟ್ ದಿವಂಗತ ಚೌಧರಿ ಅಸ್ಲಮನನ್ನು ಆತನ ಬಲೂಚ್ ದ್ವೇಷದ ಒಂದೇ ಕಾರಣಕ್ಕೆ ಮಹಾಪುರುಷನ ರೀತಿಯಲ್ಲಿ ನೋಡುತ್ತದೆ! ಅಲ್ಲದೆ ಇಂದಿಗೂ ಪಾಕಿಸ್ತಾನದಲ್ಲಿ ಒರಟಾಗಿ ವರ್ತಿಸುವವರನ್ನು, ಉರ್ದು ಬಾರದವನನ್ನು ಮತ್ತು ಅನಕ್ಷರಸ್ಥನನ್ನು ಬಲೂಚ್ ಎಂದು ಹಂಗಿಸಲಾಗುತ್ತದೆ! (Searchlights on Baloches and Balochistan-Justice Mir Khuda Bakhsh Marri). ಹಾಗಾಗಿ ಸಿನೆಮಾದಲ್ಲೂ ಅದನ್ನೇ ಬಳಸಿರುವುದರಲ್ಲಿ ನಿರ್ದೇಶಕನ ಸಂಚೇನಿಲ್ಲ.

ಆದರೆ ನಿರ್ದೇಶಕ ಸಾಂಕೇತಿಕವಾಗಿ ಬಳಸಿದ ಕೆಲವು ಸಂಭಾಷಣೆಗಳಿಂದ ಕೆಲ 'ಇಂಗ್ಲಿಷ್ ಬಲೂಚಿಗಳಿಗೆ' ಬೇಸರವಾಗಿದೆಯಂತೆ. ಎಷ್ಟೆಂದರೆ ಅವರು ಗುಜರಾತ್ ಹೈಕೋರ್ಟ್ ಮೆಟ್ಟಿಲೇರಿ, ಚಿತ್ರಪ್ರದರ್ಶನವನ್ನು ರದ್ದು ಮಾಡಬೇಕೆಂದು ಕೋರಿದ್ದಾರೆ. ವಿಚಿತ್ರವೆಂದರೆ ಸಿನೆಮಾದಿಂದ ಬಲೂಚಿಸ್ತಾನದ ಸಾಮಾನ್ಯ ಬಲೂಚ್‌ಗಳಿಗೇನೂ ಬೇಸರವಾಗಿಲ್ಲ! ಅವರು ಸಿನೆಮಾ ಮತ್ತು ನಿರ್ದೇಶಕನನ್ನು ಹೊಗಳಿದ್ದಾರೆ. ಹಾಗಾದರೆ ಕಷ್ಟಕ್ಕಾಗದ ಬಲೂಚಿಗಳು ಸಹವಾಸದೋಷದಿಂದ ಕೆಟ್ಟರೇ? ಹಾಗೆ ಹೇಳಬಹುದು. ಏಕೆಂದರೆ ವಿದೇಶದ ಬಲೂಚ್ ಸಂಘಟನೆಗಳು ವರ್ಷಕ್ಕೊಮ್ಮೆಯೋ ಎರಡು ಬಾರಿಯೋ ಕ್ಯಾಂಡಲ್ ಉರಿಸಿ ಬಲೂಚಿತನ ಪ್ರದರ್ಶಿಸಿದರೆ ಕರ್ತವ್ಯ ಮುಗಿಯಿತೆಂದು ತೆಪ್ಪಗಿರುವವರು. ಅದಕ್ಕೆ ಯಾವುದೋ ಗೊಂದಲ, ಜನಾಂಗೀಯ ದೌರ್ಜನ್ಯವನ್ನು ಕಾಫಿರರ ಮುಂದೆ ತೋರಿಸಿಕೊಳ್ಳಬಾರದೆಂಬ ಸ್ವಭಾವವೂ ಇರಬಹುದು. ಇಲ್ಲದಿದ್ದರೆ ಇವರಿಗೆ ಸಿನೆಮಾದಲ್ಲಿ ಪಾಕಿಸ್ತಾನದ ಬಲೂಚ್ ವಿರೋಧಿ ನೀತಿ ಕಾಣಿಸಬೇಕಿತ್ತು. ಆದರೆ ಇವರು ಕೋಪಿಸಿಕೊಂಡಿದ್ದು ನಿರ್ದೇಶಕನ ಮೇಲೆ!

ಧುರಂಧರ್ ಭಾರತದ ಆಂತರಿಕ ಭದ್ರತೆ, ಗೂಢಚರ್ಯೆ ವ್ಯವಸ್ಥೆ, ರಾಜತಾಂತ್ರಿಕ ಕಥನದಂತೆ ಕಂಡರೂ ಸಿನೆಮಾದುದ್ದಕ್ಕೂ ಬಲೂಚ್ ಬೆಸೆದುಕೊಂಡಿದೆ. ಕರಾಚಿಯ ಸುತ್ತಮುತ್ತ ನಡೆಯುವ ಗ್ಯಾಂಗ್‌ವಾರ್‌ಗಳಿಂದ ಹಿಡಿದು ಸಂಸತ್ ಚುನಾವಣೆಯವರೆಗೆ ಬಲೂಚ್‌ಗಳು ಪ್ರಮುಖ ಪಾತ್ರ ವಹಿಸಬಲ್ಲರು ಎಂಬುದನ್ನು ಸಿನೆಮಾದ ಎರಡೂ ಭಾಗಗಳು ಹೇಳುತ್ತವೆ. ಇದೇ ಕತೆಯನ್ನು ಆದಿತ್ಯ ಧರ್ ಕೊಂಚವೇ ತಿದ್ದಿದರೂ ಅದು ಪಕ್ಕಾ ಬಲೂಚ್ ಸಿನೆಮಾದಂತೆಯೂ ಕಾಣಿಸಬಹುದೆಂಬಷ್ಟು ಅದು ಬಲೂಚ್‌ಮಯವಾಗಿದೆ. ಅಸಲಿಗೆ ಬಲೂಚ್ ನೋವನ್ನು ಹೊತ್ತು ಅಸ್ತಿತ್ವದಲ್ಲಿರುವುದು ಹಾಗೆಯೇ. ಏಳು ದಶಕಗಳಿಂದಲೂ ಅದು ಗಾಯಗೊಂಡಿದೆ. ಗಾಯಗೊಂಡ ಕಾರಣಕ್ಕೆ ಘಾತಕತನವನ್ನು ಮೈಗೂಡಿಸಿಕೊಂಡಿದೆ. ಸಿನೆಮಾದಲ್ಲಿ ಕಾಣುವಂತೆಯೇ ಬಲೂಚಿಗಳಲ್ಲಿ ಒರಟುತನವಿದೆ. ತನ್ನ ಮಣ್ಣಿಗಾಗಿ ತನ್ನನ್ನೇ ಕೊಂದುಕೊಳ್ಳುವಷ್ಟು ಆಕ್ರೋಶವಿದೆ. ಪಾಕಿಸ್ತಾನದ ಒಟ್ಟು ಭೂಭಾಗದ ಶೇ.44ರಷ್ಟನ್ನು ಹೊಂದಿದ್ದರೂ ಅಲ್ಲಿನ ಶೇ. 84ರಷ್ಟು ಜನರನ್ನೂ ಬಡವರು. ಇಸ್ಲಾಮಾಬಾದ್, ಲಾಹೋರ್‌ಗಳು ಹೇಳುವಂತೆ ಬಲೂಚಿನ ಹೆಚ್ಚಿನವರು ಅನಕ್ಷರಸ್ಥರು. ಆದರೆ ಪಠಾಣರಷ್ಟು ಶತಮೂರ್ಖರಲ್ಲ, ಪಠಾಣರಿಗೆ ತಮಗಿಂತಲೂ ಬಲೂಚರು ಪರಾಕ್ರಮಿಗಳೆಂಬ ಹೊಟ್ಟೆಕಿಚ್ಚಿದೆ. ಆದರೆ ಬಲೂಚಿಗಳಿಗೆ ತಾವು ಪಠಾಣರಂತೆ ಪ್ರಾಣಭಯದಿಂದ ಪಲಾಯನ ಮಾಡುವವರಲ್ಲ ಎಂಬ ಸ್ವಾಭಿಮಾನವಿದೆ. ಪಠಾಣ-ಪಂಜಾಬಿಗಳಂತೆ ಬಲೂಚಿಗಳು ಏಟ್ಟಾಲಿ, ಕಮಿಗೊಳ್ಳಿಗಳ ಜೋತೆ ಇರುವವರಲ್ಲ. ಆದರೆ ಹಠಮಾರಿತನದಿಂದ ಭಾಷೆ ಮತ್ತು ಜನಾಂಗವನ್ನು ಉಳಿಸಿಕೊಂಡು ಬಂದವರು.

ಒಂದು ಕಾಲದ ಶ್ರೀಮಂತ ಬಲೂಚಿಗಳಿಂದು ಪಾಕಿಸ್ತಾನದ ಗುಲಾಮಗಿರಿಗೆ ಬಿದ್ದಿದೆ. ಒಂದೊಮ್ಮೆ ಬಲೂಚ್‌ಗಳಿಗೇ ಇದ್ದ ಕ್ವೆಟ್ಟಾದಲ್ಲೇ ಇಂದು ಅವರು ಅಲ್ಪಸಂಖ್ಯಾತರಾಗುವ ಹಾದಿಯಲ್ಲಿದ್ದಾರೆ. ಅವರ ಸಂಪನ್ಮೂಲಗಳಿಂದ ಇಸ್ಲಾಮಾಬಾದ್ ಕೊಬ್ಬಿದೆ. ಇನ್ನೇನು ಬಲೂಚಿ ಧ್ವನಿ ಉಡುಗಿತು ಎನ್ನುವಷ್ಟರಲ್ಲಿ ಬಲೂಚಿ ವಂಶವಾಹಿನಿಯಲ್ಲಿ ಪರಾಕ್ರಮದ ಘರ್ಜನೆ ಮೊಳಗುತ್ತದೆ. ಬಲೂಚಿಗಳನ್ನು ಛೇದಿಸಲೆಂದೇ ಪಾಕಿಸ್ತಾನ ಸೇನೆ ಪಠಾಣ್ ಸೈನಿಕರ ವಿಶೇಷ ತುಕಡಿಯನ್ನು ರಚನೆ ಮಾಡಿದೆ. ಬಲೂಚಿಗಳ ಮಾರಣಹೋಮ ನಡೆಯುತ್ತಿದೆ. ಪಠಾಣ್ ಪಡೆ ಗೆದ್ದು ಬೀಗುತ್ತಿದ್ದಾಗಲೇ ಇಸ್ಲಾಮಾಬಾದಿನಲ್ಲೋ ಬಲೂಚಿಗಳ ಸ್ಫೋಟದ ಸದ್ದು ಕೇಳಿಸುತ್ತದೆ. ಪಾಕಿಸ್ತಾನ ರಚನೆಯಾದಂದಿನಿಂದ ಬಲೂಚಿಗಳಿಗೆ ಅವರ ಮೇಲೆ ಸಂಪೂರ್ಣ ಗೆಲುವು ಸಾಧ್ಯವಾಗಲಿಲ್ಲ ಎಂಬುದು ಎಷ್ಟು ಸತ್ಯವೋ, ಪಾಕಿಸ್ತಾನಕ್ಕೂ ಬಲೂಚಿಗಳನ್ನು ಪೂರ್ಣ ಗೆಲ್ಲಲಾಗಲಿಲ್ಲ ಎಂಬುದು ಕೂಡ ಅಷ್ಟೇ ಸತ್ಯ. ಬಲೂಚಿಗಳು ಅಲೆಕ್ಸಾಂಡರನ ಕಾಲದಿಂದಲೂ ರಣಭೂಮಿಯಲ್ಲಿ ಪಳಗಿದವರು. ಭಾಷೆ ಮತ್ತು ಪರಂಪರೆಯನ್ನು ಸವಾಲುಗಳ ಹೊರತಾಗಿಯೂ ಕಾಪಿಟ್ಟುಕೊಂಡವರು. ಬುಡಕಟ್ಟು ಗುಣದ ಬಲೂಚಿಗಳನ್ನು ಆಯಾ ಕಾಲಘಟ್ಟದಲ್ಲಿ ಎಲ್ಲರೂ ಬಳಸಿಕೊಳ್ಳುತ್ತಾ ಬಂದರೂ ಅವರ ಸ್ವಂತಿಕೆ ನಾಶವಾಗಿಲ್ಲ. ಬ್ರಿಟಿಷರಿಗೆ ಪರಿಸ್ಥಿತಿಗಳು ಕುತ್ತಿಗೆಗೆ ಬರುತ್ತಿದ್ದಾಗಲೆಲ್ಲಾ ಸಹಾಯಕ್ಕೆ ಬಂದವರು ಈ ಬಲೂಚಿಗಳು. ಬಲೂಚಿಗಳನ್ನು ಬಳಸಿಯೇ ಬ್ರಿಟಿಷರು ಆಫ್ಘನ್ ಯುದ್ಧಗಳನ್ನು ಗೆದ್ದರು. ಜೊತೆಗೆ ಬಲೂಚಿನ ಸಂಪನ್ಮೂಲಗಳನ್ನೂ ದೋಚಿದರು. ಇಷ್ಟೆಲ್ಲಾ ನಡೆಯುತ್ತಿದ್ದಾಗಲೂ ಬಲೂಚಿಗಳಿಗೆ ತಮ್ಮ 'ಕಲಾತ್' ಎಂಬ ಸಂಸ್ಥಾನವಿತ್ತು. ಅದರ ಖಾನ್‌ಗಳು ಬ್ರಿಟಿಷರೊಂದಿಗಿದ್ದರೂ ಸ್ವತಂತ್ರ ಬಲೂಚಿನ ಆಕಾಂಕ್ಷೆ ಅವರಲ್ಲಿ ಇಂಗಿರಲಿಲ್ಲ. 1920ರಲ್ಲಿ ಯೂಸುಫ್ ಅಲಿ ಮಾಗ್ಸಿ ಎಂಬಾತನ ನೇತೃತ್ವದಲ್ಲಿ ಬಲೂಚ್ ರಾಷ್ಟ್ರವಾದಿಗಳ ಗುಂಪು 'ಯಂಗ್ ಬಲೂಚ್' ಎಂಬ ರಹಸ್ಯ ಸಂಘಟನೆಯನ್ನು ಸ್ಥಾಪಿಸಿದರು. ಕೆಲ ವರ್ಷಗಳ ನಂತರ ಅದು ಹೆಸರು ಮತ್ತು ಸ್ವರೂಪಗಳೆರಡನ್ನೂ ಬದಲಿಸಿಕೊಂಡು 'ಅಂಜುಮನ್-ಎ ಇತ್ತೆಹಾದ್-ಎ ಬಲೂಚಾನ್' ಆಯಿತು. ಮುಂದೆ ಅದು ರಾಜಕೀಯ ಪಕ್ಷವಾಗಿ ಬದಲಾಯಿತು. ಅದರ ಪ್ರೇರಣೆಯಿಂದ ಇನ್ನೂ ಹಲವು ರಾಜಕೀಯ ಪಕ್ಷಗಳು ಉಗಮವಾದವು. ಜನರ ಸ್ವಾತಂತ್ರ್ಯ ಬಯಕೆ ಬಲಗೊಳ್ಳತೊಡಗಿದಂತೆ ಎದುರಾದ ಮಹಾಯುದ್ಧ ಸೃಷ್ಟಿಸಿದ ಒತ್ತಡಗಳಿಂದ ಬಲೂಚಿಸ್ತಾನ್ 1948ರ ಆಗಸ್ಟ್ 11ರಂದು ಸ್ವತಂತ್ರವಾಯಿತು. 108 ವರ್ಷಗಳ ಆಡಳಿತದಿಂದ ಬಿಡುಗಡೆಗೊಂಡರೂ ಕಲಾತ್ ಮುಖಂಡ ಖಾನ್ ಮೀರ್ ಸರ್ ಅಹಮದ್ ಯಾರ್ ಖಾನ್ ಅಹಮದ್‌ಜಾಯ್ ಇನ್ನೂ ಗೊಂದಲದಲ್ಲಿದ್ದ. ಬಲೂಚನ್ನು ಬ್ರಿಟೀಷರು ಪ್ರಿನ್ಸ್ಲೀ ಸ್ಟೇಟ್ ಆಗಿಯೇ ಇಟ್ಟಿದ್ದರು. ಖಾನ್ ಸಾಹೇಬನಿಗೆ ಬಲೂಚಿಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಸ್ವಾತಂತ್ರ್ಯ ತನಗಿದೆ ಎಂಬ ಭಾವನೆ ಅಹಂಕಾರವಾಗಿ ಬದಲಾಯಿತು. ಒಂದು ಹಂತದಲ್ಲಿ ಖಾನ್ ಎಲ್ಲರಿಂದಲೂ ಅಂತರ ಕಾಯ್ದುಕೊಂಡ. ಆದರೆ ಸ್ವತಂತ್ರವಾಗುಳಿಯುವ ಮತ್ತು ಯಾರೊಂದಿಗೂ ವಿಲೀನದ ನಿರ್ಧಾರವನ್ನು ತೆಗೆದುಕೊಳ್ಳದೆಹೋದ. ಆದರೆ ಖಾನ್ ಸಾಹೇಬನಿಗೆ ಬ್ರಿಟಿಷ್ ಕಾಲದಲ್ಲಿ ಕಾನೂನು ಸಲಹೆಗಾರನಾಗಿದ್ದವನು ಮಹಮದಾಲಿ ಜಿನ್ನಾ. ತಡಮಾಡದ ಜಿನ್ನಾ ನೇರವಾಗಿ ಖಾನ್ ಸಾಹೇಬನಿಗೆ ಪಾಕಿಸ್ತಾನದೊಂದಿಗೆ ವಿಲೀನವಾಗಬೇಕೆಂದು ಬೆದರಿಕೆಯ ಪತ್ರ ರವಾನಿಸಿದ. ಖಾನ್ ಅದಕ್ಕೂ ಉತ್ತರಿಸಲಿಲ್ಲ, ಕೊನೆಗೆ 1948ರ ಮಾರ್ಚ್ 27ರಂದು ಲಾಹೋರಿನಿಂದ ಹೊರಟ ಪಠಾಣ್ ತುಕಡಿ ಖಾನನ ಆಸ್ಥಾನಕ್ಕೆ ನುಗ್ಗಿ ಬಲವಂತದಿಂದ ಪಾಕಿಸ್ತಾನದೊಂದಿಗೆ ವಿಲೀನದ ಪತ್ರಕ್ಕೆ ಸಹಿ ಹಾಕಿಸಿಕೊಂಡಿತು. ಕೇವಲ 137 ದಿನಗಳಲ್ಲೇ ಬಲೂಚರು ಸ್ವಾತಂತ್ರ್ಯ ಕಳೆದುಕೊಂಡಿದ್ದರು. ಅದೆಷ್ಟು ಹೀನಾಯವಾಗಿ ಕಳೆದುಕೊಂಡರೆಂದರೆ ಬ್ರಿಟಿಷ್ ಕಾಲದಲ್ಲಿದ್ದ ಸ್ವಾತಂತ್ರ್ಯ ಕೂಡ ಈಗಿರಲಿಲ್ಲ, ಬೆಂಕಿಯಿಂದ ಹೊರಬಂದೆವು ಎಂದುಕೊಳ್ಳುತ್ತಿದ್ದಂತೆಯೇ ಬಲೂಚರು ಬಾಣಲೆಗೆ ಬಿದ್ದರು.

ಪಾಕಿಸ್ತಾನಕ್ಕೆ ಸೇರಿದ ಬಲೂಚಿನ ಸಂಪನ್ಮೂಲ ಮತ್ತೊಮ್ಮೆ ಲೂಟಿಯಾಗತೊಡಗಿತು. ಬಲೂಚರ ಸ್ವಾಭಿಮಾನ ಬಡವನ ಕೋಪದಂತಾಗುತ್ತಿತ್ತು. 1948ರ ಕ್ರಾಂತಿಯನ್ನು ಪಾಕಿಸ್ತಾನ ಅದೆಷ್ಟು ಭೀಕರವಾಗಿ ಅಡಗಿಸಿತೆಂದರೆ ಕ್ರಾಂತಿಕಾರಿಗಳನ್ನು ಸಾಮೂಹಿಕವಾಗಿ ಗಲ್ಲಿಗೇರಿಸಿತು. 1958ರಲ್ಲಿ ಆಯೂಬ್ ಖಾನ್ ಬಲೂಚಿನ ರಾಜ್ಯ ಸ್ಥಾನಮಾನವನ್ನು ಕೊನೆಗೊಳಿಸಿ ಅಲ್ಪಸ್ವಲ್ಪ ಸ್ವಾಯತ್ತತೆಯನ್ನೂ ರದ್ದುಗೊಳಿಸಿದ. ವಿರೋಧಿಸಿದವರನ್ನು ಗಲ್ಲಿಗೇರಿಸಿದ. 1960ರ ಗೆರಿಲ್ಲಾ ಯುದ್ಧ ಪಾಕಿಸ್ತಾನದ ನಿದ್ರೆ ಕೆಡಿಸಿತ್ತಾದರೂ ಕ್ರೂರವಾಗಿ ಕ್ರಾಂತಿಯನ್ನು ಅಡಗಿಸಲಾಯಿತು. 1970ರಲ್ಲಿ ಇರಾನ್ ಜೊತೆಗೂಡಿ ಪಾಕಿಸ್ತಾನ ಬಲೂಚ್ ಸ್ವಾತಂತ್ರ್ಯಹೋರಾಟಗಾರರ ನರಮೇಧ ನಡೆಸಿತು. ದಾಖಲೆಗಳ ಪ್ರಕಾರ ಅಂದು 30 ಸಾವಿರಕ್ಕೂ ಹೆಚ್ಚಿನ ಬಲೂಚ್‌ಗಳ ಮಾರಣಹೋಮ ನಡೆಯಿತು. ಇಂದು ಅದೇ ಇರಾನ್ ನಮ್ಮ ಮೇಲೆ ಅನ್ಯಾಯವಾಗಿ ಆಕ್ರಮಣ ನಡೆಸಲಾಗಿದೆ ಎಂದು ಅವಲತ್ತುಕೊಳ್ಳುತ್ತಿದೆ. ಪಾಲುದಾರ ಪಾಕಿಸ್ತಾನ ತಾನು ಯುದ್ಧವನ್ನು ನಿಲ್ಲಿಸುತ್ತೇನೆ ಎಂದು ಒದ್ದಾಡುತ್ತಿದೆ! ಈ ಎಲ್ಲಾ ಕ್ರಾಂತಿಗಳು ಬೇಗನೆ ಅಡಗಿತ್ತಾದರೂ 2003ರಲ್ಲಿ ಪ್ರಾರಂಭವಾದ ಬಲೂಚ್ ರಾಷ್ಟ್ರೀಯತೆಯ ಅಲೆ ಸ್ವತಂತ್ರ ಬಲೂಚಿನ ಭರವಸೆಯನ್ನು ಜೀವಂತವಾಗಿಟ್ಟಿದೆ. ಪಾಕಿಸ್ತಾನದ ನಿರ್ಲಕ್ಷ್ಯ ಮತ್ತು ಬಲೂಚಿಗಳ ಮೇಲಿನ ದೌರ್ಜನ್ಯವನ್ನು ವಿಶ್ವಮಟ್ಟಕ್ಕೆ ಮುಟ್ಟಿಸುವ ಪ್ರಯತ್ನದಲ್ಲಿ ಬಲೂಚಿಗಳು ಅಷ್ಟಿಷ್ಟು ಯಶಸ್ಸು ಕಂಡಿದ್ದಾರೆ. ಅದರಲ್ಲೂ ಬಲೂಚಿನ ಗ್ವಾದರ್ ಬಂದರು ಮತ್ತು ಚೀನಾ ಗುತ್ತಿಗೆಯನ್ನು ತೀವ್ರವಾಗಿ ವಿರೋಧಿಸುತ್ತಿದ್ದಾರೆ. ಸಶಸ್ತ್ರ ಕ್ರಾಂತಿ ಹಿಂದೆಂದಿಗಿಂತಲೂ ಪಾಕಿಸ್ತಾನಕ್ಕೆ ತಲೆನೋವಾಗಿದೆ. ಬಲೂಚ್ ನ್ಯಾಶನಲ್ ಮೂವ್ಮೆಂಟ್ (BNM), ಬಲೂಚ್ ರಿಪಬ್ಲಿಕನ್ ಪಾರ್ಟಿ (BRP), ಬಲೂಚಿಸ್ತಾನ್ ಲಿಬರೇಷನ್ ಫ್ರಂಟ್ (BLF), ಬಲೂಚ್ ಲಿಬರೇಷನ್ ಆರ್ಮಿ (BLA), ಬಲೂಚ್ ಸ್ಟೂಡೆಂಟ್ಸ್ ಆರ್ಗನೈಜೇಷನ್‌ಗಳು ಹೋರಾಟಕ್ಕಿಳಿದಿವೆ. ಕೆಲವು ವರದಿಗಳ ಪ್ರಕಾರ 2003ರಿಂದ 2007ರವರೆಗೆ ಬಲೂಚಿಸ್ತಾನದಲ್ಲಿ ಕಾಣೆಯಾದವರ ಸಂಖ್ಯೆ 18,000ಕ್ಕೂ ಹೆಚ್ಚು, ಈ ಅವಧಿಯಲ್ಲಿ 7,000ಕ್ಕೂ ಹೆಚ್ಚು ಮಂದಿ ಪಾಕಿಸ್ತಾನದ ಬಂಧನದಲ್ಲಿಯೇ ಸಾವನ್ನಪ್ಪಿದ್ದಾರೆ. ಆದರೆ 1948ರಿಂದ ಇಲ್ಲಿಯವರೆಗೆ ಎಷ್ಟು ಜನ ಬಲೂಚ್‌ಗಳು ಸಾವನ್ನಪ್ಪಿದ್ದಾರೆ, ಕಾಣೆಯಾಗಿದ್ದಾರೆಂಬುದರ ಸಂಖ್ಯೆ ಲೆಕ್ಕದಲ್ಲಿಲ್ಲ. ಮಾನವಹಕ್ಕುಗಳೇ ಇಲ್ಲದ ದೇಶದಲ್ಲಿ ಸತ್ತವರ ಲೆಕ್ಕಹಾಕುವವರಾರು? ವಿಚಿತ್ರವೆಂದರೆ ಮಾನವಹಕ್ಕುಗಳ ದೊಡ್ಡದೊಡ್ಡ ಮಾತಾಡುವ ಜಾಗತಿಕ ಸಂಘಟನೆಗಳು ಮತ್ತು ತಾನೇ ಜಗತ್ತಿನ ಪಟೇಲ ಎಂದಾಡುವವರಾರೂ ಬಲೂಚರನ್ನು ಬೆಂಬಲಿಸಿಲ್ಲ, ಭದ್ರತಾಮಂಡಳಿ ಅಲ್ ಜಜೀರಾದ ರದ್ದಿ ಪೇಪರಿನ ಸುದ್ದಿಗಳನ್ನು ಆರಿಸಿ ವರದಿಯೊಂದನ್ನು ಮಂಡಿಸಿ ಕೈತೊಳೆದುಕೊಂಡಿದೆ. ಭೂಪಟದಲ್ಲಿ ಗಾಜಾ ಗುರುತಿಸಲಾಗದಿದ್ದರೂ ಸೇವ್ ಪ್ಯಾಲೆಸ್ಟೀನ್ ಎನ್ನುವ ಭಾರತೀಯ ಮುಸ್ಲಿಮರು ಬಲೂಚರನ್ನು ಅನುಕಂಪದಿಂದ ನೋಡಿದ್ದಕ್ಕೆ ಉದಾಹರಣೆಗಳಿಲ್ಲ, ಗಾಜಾದ ಭಯೋತ್ಪಾದಕರಿಗೆ ಸಲ್ಲುವ ಗೌರವ ಬಲೂಚಿಗಳಿಗಿಲ್ಲವೆಂದರೆ ಅವರೆಷ್ಟು ನತದೃಷ್ಟರಾಗಿರಬಹುದು?

ಬಲೂಚರ ದುರಂತ ಕಥನವನ್ನು ಅರ್ಥ ಮಾಡಿಕೊಳ್ಳದಿದ್ದರೆ ಧುರಂಧರ ಕೂಡ ಪ್ರಭಾವಿಯಾಗಿ ಮೂಡುತ್ತಿರಲಿಲ್ಲ. ಲಿಯಾರಿಯಲ್ಲಿ ನಡೆಯುತ್ತಿದ್ದ ಗ್ಯಾಂಗ್‌ವಾರುಗಳಲ್ಲಿ ಬಲೂಚಿ ಗೂಂಡಾಗಳದ್ದೇ ಕೈಮೇಲೇಕೆ? ಅಲ್ಲೂ ಬಲೂಚಿಯರನ್ನು ಪಾಕಿಸ್ತಾನ ಹೇಗೆ ಬಳಸಿಕೊಂಡಿತು? ರೆಹಮಾನ್ ಬಲೂಚ್, ಉಜೈರ್ ಬಲೂಚ್ ಮೊದಲಾದವರನ್ನು ಬಲೂಚರ ವಿರುದ್ಧ ಹೇಗೆ ಬಳಸಿಕೊಳ್ಳಲಾಯಿತು? ಎಂಬುದನ್ನು ಸಿನೆಮಾ ಸೂಕ್ಷ್ಮವಾಗಿ ಹೇಳಿದರೂ ಅಸಲಿ ಕತೆ ಅಷ್ಟೇ ಅಲ್ಲ, ಆದರೆ ಅಷ್ಟನ್ನಾದರೂ ಸಿನೆಮಾ ಮೂಲಕ ತೋರಿಸಿದ್ದಕ್ಕಾಗಿ ಬಲೂಚರು ನಿರ್ದೇಶಕರಿಗೆ ಋಣಿಯಾಗಿರಬೇಕಿತ್ತು. ಆದರೆ ಸಹವಾಸದಿಂದ ಬಲೂಚನೂ ಕೆಟ್ಟ, ಕೋರ್ಟ್ ಮೆಟ್ಟಿಲೇರಿದ.

ಇನ್ನಷ್ಟು ಬೇಕೆನ್ನ ಹೃದಯಕ್ಕೆ ರಾಮ...!

▸ ಶಶಿರ ಹೆಚ್.ಪಿ.



ಇಂದು ಶ್ರೀರಾಮನವಮಿ

ರಾಮರಾವಣರ ನಡುವೆ ಯುದ್ಧ ಆರಂಭವಾಗಿದೆ, ಕುಂಭಕರ್ಣನನ್ನು ರಾವಣನು ಯುದ್ಧಕ್ಕಾಗಿ ಎಬ್ಬಿಸಿ ಯುದ್ಧಕ್ಕೆ ಹೋಗಬೇಕು ಎಂದಾಗ, ಕುಂಭಕರ್ಣನು 'ಶ್ರೀರಾಮನು ಏಕೆ ನಮ್ಮ ಮೇಲೆ ಯುದ್ಧಕ್ಕೆ ಬಂದಿರುವನು' ಎಂದು ಪ್ರಶ್ನಿಸಿದನು. ಆಗ ರಾವಣನು ಸೀತೆಯ ಅಪಹರಣದ ಘಟನೆಯನ್ನು ವಿವರಿಸಿದ. ಕುಂಭಕರ್ಣನು 'ನಿನಗೆ ಸೀತೆಯು ಒಲಿದಳೆ' ಎಂದು ಕೇಳಿದ. ಆಗ ರಾವಣನು 'ನಾನು ಸಾಕಷ್ಟು ರೀತಿಯಲ್ಲಿ ಪ್ರಯತ್ನಿಸಿದ್ದೇನೆ, ಆದರೂ ಆಕೆ ನನಗೆ ಒಲಿಯಲಿಲ್ಲ' ಎಂದನು. ಆಗ ಕುಂಭಕರ್ಣನು 'ನೀನು ಶ್ರೀರಾಮನ ಶರೀರವನ್ನು ತಾಳಿ ಆಕೆಯ ಬಳಿ ಸಾಗಿದೆಯಾ' ಎಂದು ಪ್ರಶ್ನಿಸಿದನು. ಆಗ ರಾವಣ ಹೇಳುತ್ತಾನೆ, 'ಅಯ್ಯಾ ಕುಂಭಕರ್ಣ, ನಾನು ಶ್ರೀರಾಮನನ್ನು ನನ್ನಲ್ಲಿ ಆಹ್ವಾನಿಸಿಕೊಂಡರೆ, ನನ್ನಲ್ಲಿರುವ ರಾವಣನೇ ಇಲ್ಲವಾಗುತ್ತಾನೆ. ರಾವಣನಿಗೆ ಪರಸ್ತ್ರೀ ಮೇಲೆ ವ್ಯಾಮೋಹವೇ ಹೊರತು ಶ್ರೀರಾಮನಿಗಲ್ಲ, ಹೀಗಾಗಿ ನಾನು ರಾಮನಂತೆ ದೇಹವನ್ನು ಹೊಂದಿದರೆ ಸೀತೆಯ ಮೇಲಿನ ಕಾಮನೆಯೇ ಹೊರಟು ಹೋಗುತ್ತದೆ'

ಇದು ಶ್ರೀರಾಮನ ಆದರ್ಶಗಳಿಗೆ ಉದಾಹರಣೆ.

ಕುಂಭಕರ್ಣನು ಸತ್ತ ನಂತರ ರಾವಣನು ಇಂದ್ರಜಿತುವನ್ನು ಯುದ್ಧಕ್ಕೆ ಕಳುಹಿಸಿದ. ಲಕ್ಷ್ಮಣನು ರಾವಣನ ಮಗನಾದ ಇಂದ್ರಜಿತುವನ್ನು ಕೊಂದನು. ಇಂದ್ರಜಿತುವಿನ ಬಲಗೈ ಆತನ ಪತ್ನಿಯಾದ ಸುಲೋಚನೆಯ ಬಳಿ ಬಿದ್ದಿತು. ಆ ಕೈ ಅಲ್ಲಿಯವರೆಗೆ ನಡೆದ ವೃತ್ತಾಂತವನ್ನು ನೆಲದ ಮೇಲೆ ಬರೆದು, ತನ್ನ ಮೃತ್ಯುವು ಲಕ್ಷ್ಮಣನಿಂದ ಆಯಿತು ಎಂದು ಬರೆದು ಸುಮ್ಮನಾಯಿತು. ಆಗ ಸುಲೋಚನೆ ತಾನು ತನ್ನ ಪತಿಯೊಡನೆ ಚಿತೆಯನ್ನು ಏರಲು ನಿರ್ಧರಿಸಿದಳು. ತನ್ನ ಮಾವನಾದ ರಾವಣನ ಬಳಿ ಹೋಗಿ, ನನ್ನ ಪತಿಯು ಮರಣವಾಗಿದೆ, ಅವರ ಶರೀರ ಈಗ ರಾಮನ ಬಳಿಯಿದೆ, ತಾವು ಅದನ್ನು ತರಿಸಿಕೊಟ್ಟರೆ, ನಾನು ಪತಿಯೊಡನೆ ಸಹಗಮನ ಮಾಡುವೆ ಎಂದಳು. ಆಗ ರಾವಣನು, "ನೀನೇ ಹೋಗಿ ನಿನ್ನ ಪತಿಯ ಶರೀರವನ್ನು ರಾಮನಿಂದ ಪಡೆದುಕೋ" ಎಂದ. ರಾವಣನ ಸಭೆಯಲ್ಲಿದ್ದವರೆಲ್ಲರೂ, 'ಹೇ ಪ್ರಭು ನೀವೇನು ಮಾಡುತ್ತಿರುವಿರಿ? ನಿಮ್ಮ ಸೊಸೆಯನ್ನು ರಾಮನ ಬಿಡಾರಕ್ಕೆ ಕಳುಹಿಸುತ್ತಿದ್ದೀರಲ್ಲ, ಆತನು ನಿಮ್ಮ ಶತ್ರು, ನೀವು ಆತನ ಪತ್ನಿಯನ್ನು ನಿಮ್ಮ ಬಳಿ ಇಟ್ಟುಕೊಂಡಿರುವಿರಿ, ನಿಮ್ಮ ಸೊಸೆಯನ್ನು ಆತನ ಬಳಿ ಮಗನ ಶವಕ್ಕಾಗಿ ಕಳುಹಿಸುವುದು ಎಷ್ಟು ಸರಿ? ರಾಮ ನಿಮ್ಮ ಸೊಸೆಗೆ ಏನಾದರೂ ಮಾಡಿಬಿಟ್ಟರೆ' ಎಂದರು. ಆಗ ರಾವಣನು 'ನಾನು ಶ್ರೀರಾಮನನ್ನು ನಂಬುತ್ತೇನೆ. ಇತರರ ಮನೆಯ ಹೆಣ್ಣನ್ನು ಬಂಧಿಯಾಗಿ ಇಡಲು ಆತನು ರಾವಣನಲ್ಲ, ಆತ ಶ್ರೀರಾಮಚಂದ್ರ, ನೀವು ಬಹುಶಃ ನನ್ನ ನೆಚ್ಚಿಸುವ ಸಲುವಾಗಿ ನಿಮ್ಮ ಆಲೋಚನಾ ಸಾಮರ್ಥ್ಯವನ್ನು ಕಳೆದುಕೊಂಡಿರಬೇಕು. ರಾವಣನು ಪರಸ್ತ್ರೀಯನ್ನು ಅಪಹರಿಸುವ ಬುದ್ಧಿಯುಳ್ಳವನೇ ಹೊರತು ರಾಮನಲ್ಲ' ಎಂದನು.

ಹೀಗೆ ಪ್ರತಿಯೊಬ್ಬರಲ್ಲೂ ರಾಮ-ರಾವಣರಿರುತ್ತಾರೆ. ಇದೇ ವಿಷಯವನ್ನು ಡಿ.ವಿ.ಜಿ.ಯವರು ಮಂಕುತಿಮ್ಮನ ಕಗ್ಗದಲ್ಲಿ ಹೀಗೆ ಹೇಳುತ್ತಾರೆ.

ದೇವ ದಾನವರ ರಣರಂಗ ಮಾನವಹೃದಯ
ಭಾವರಾಗಹಠಂಗಳವರ ಸೇನೆಗಳು।
ಭೂವಿಭವಜಯಗಳ ಭ್ರಾಂತಿಯಲಿ ಮರೆಯುವರು
ಜೀವಾಮೃತವನವರು - ಮಂಕುತಿಮ್ಮ ॥

ನಮ್ಮ ಹೃದಯದಲ್ಲಿ ಶ್ರೀರಾಮನಿಗೆ ಅವತಾರವನ್ನು ತಾಳಲು ನಾವು ಅವಕಾಶ ನೀಡಬೇಕು. ಆಗ ನಮ್ಮಲ್ಲಿರುವ ರಾವಣನ ಅಂತ್ಯವಾಗುತ್ತದೆ. ರಾಮನಿರುವಲ್ಲಿ ರಾವಣನಿರಲು ಸಾಧ್ಯವಿಲ್ಲ. ಇತರರು ನಮ್ಮನ್ನು ಎಷ್ಟು ಬದಲಾಯಿಸಲು ಪ್ರಯತ್ನಿಸಿದರೂ ನಾವುಗಳು ಬದಲಾಗುವುದಿಲ್ಲ. ಹೀಗಾಗಿ ನಮ್ಮ ಉದ್ಧಾರವನ್ನು ನಾವೇ ಮಾಡಿಕೊಳ್ಳಬೇಕು. ಧರ್ಮ ಎಂಬ ಶಬ್ದಕ್ಕೆ ಹಲವಾರು ಅರ್ಥಗಳಿವೆ. ಶ್ರೀವಿಷ್ಣು ಸಹಸ್ರನಾಮದಲ್ಲಿ ವಿಷ್ಣುವಿನ ಒಂದು ಹೆಸರು ಧರ್ಮ, ಎಲ್ಲೆಡೆ ವ್ಯಾಪಿಸುವುದರಿಂದ ಆತನನ್ನು ವಿಷ್ಣು ಎಂದು ಕರೆಯುತ್ತೇವೆ. ದೇವರು ಪ್ರತಿಯೊಬ್ಬರ ಹೃದಯದಲ್ಲಿ ವಾಸಿಸುತ್ತಿದ್ದಾನೆ ಎಂದು ತಿಳಿದವರು ಹೇಳುತ್ತಿದ್ದರು. ಹೀಗಾಗಿ ಧರ್ಮವೆಂದರೆ ನಮ್ಮ ಚೈತನ್ಯವೆಂದಾಗುತ್ತದೆ. ನಾವುಗಳು 'ನಾನು, ನಾನು' ಎಂದು ಸಂಭೋಧಿಸುವುದನ್ನೇ 'ಆತ್ಮ' ಎಂದು ಸಂಸ್ಕೃತದಲ್ಲಿ ಕರೆಯಲಾಗಿದೆ. ಆತ್ಮನನ್ನು ಅರಿತವನು ಸರ್ವವನ್ನು ಅರಿಯುತ್ತಾನೆ



ಎಂಬುದು ಉಪನಿಷತ್ತಿನ ಉಪದೇಶವಾಗಿದೆ. ಧರ್ಮವೆಂಬುದು ಶುದ್ಧ ಚೈತನ್ಯದ ಹೆಸರಾಗಿದೆ. ಹೀಗೆ ಹಿಂದೂಗಳು ಕೋಟ್ಯಂತರ ನಾಮಗಳಿಂದ, ಹೆಸರುಗಳಿಂದ ಆ ಚೈತನ್ಯವನ್ನು ಕಾಣುತ್ತಾರೆ ಹಾಗೂ ಕರೆಯುತ್ತಾರೆ.

ನಾವುಗಳೆಲ್ಲ ಚೈತನ್ಯ ಸ್ವರೂಪದವರಾಗಿದ್ದೇವೆ. ಪರಮಾತ್ಮ ನಮ್ಮೆಲ್ಲರ ಹೃದಯವಾಸಿಯಾಗಿದ್ದಾನೆ. ಈ ನೈಜ ತಿಳುವಳಿಕೆಯನ್ನು ಧರ್ಮ ಎನ್ನಬಹುದು. ಈ ಸತ್ಯವನ್ನು ತಿಳಿಯದವನು ಅಧರ್ಮಿಯಾಗುತ್ತಾನೆ. ಯಾವಾಗ ಧರ್ಮವು ಎಂದರೆ ವ್ಯಕ್ತಿಯು ತಾನು ಚೈತನ್ಯ ಸ್ವರೂಪ ಎಂಬುದನ್ನು ಮರೆಯುತ್ತಾನೋ, ಆಗ ಆತನು ಅಧರ್ಮಿಯಾಗುತ್ತಾನೆ. ಅದನ್ನೇ ಧರ್ಮದ ಹಾನಿ ಎನ್ನಬಹುದು. ವ್ಯಕ್ತಿ ಅಧರ್ಮಿಯಾಗುವುದು ಎಂದರೆ ಕಣ್ಣಿಗೆ ಕಾಣುವ ಶರೀರ, ನಾಮ, ರೂಪ, ಅನುಷ್ಠಾನವಿಲ್ಲದ ಕೇವಲ ಬಾಹ್ಯ ಆಚರಣೆ ನಿಜವೆಂದು ನಂಬುವುದಾಗಿದೆ. ಯಾವಾಗ ನಮ್ಮ ಹೃದಯದಲ್ಲಿ ಜ್ಞಾನದ ಅವತಾರ ಹುಟ್ಟುವುದೋ, ಅಂದರೆ ನಾನು ಅಧರ್ಮಿಯಲ್ಲ, ನಾನು ವಾಸ್ತವದಲ್ಲಿ ಧರ್ಮರೂಪವಾದ ಚೈತನ್ಯವೆಂದು ಅರಿಯಲ್ಪಡುವುದೋ, ಆಗ ಆತನಿಗೆ ಎಲ್ಲೆಲ್ಲೂ ಚೈತನ್ಯ ದರ್ಶನವೇ ಕಾಣುತ್ತದೆ. ವೇದಾಂತದಲ್ಲಿ ಈ ಚೈತನ್ಯವನ್ನು 'ಬ್ರಹ್ಮ' ಎಂದು ಕರೆದಿದ್ದಾರೆ. ಈ ವಾಸ್ತವ ಅರಿವಾದಾಗ ದುಷ್ಟರು ಹೊರಗಿಲ್ಲ ಎಂಬುದು ಅರಿವಾಗುತ್ತದೆ. ಆ ಕ್ಷಣದಲ್ಲಿ ಆತನಲ್ಲಿದ್ದ ರಾಕ್ಷಸನೂ ನಾಶವಾಗಿ, ಒಳಗೆ ಅಡಗಿದ್ದ ಸಾಧುವು ಪ್ರಕಟವಾಗುತ್ತಾನೆ. ಇದು ನಿಜವಾಗಿಯೂ ಅವತಾರದ ರಹಸ್ಯವೆನ್ನಬಹುದು. ನಾವು ಈ ಪ್ರಪಂಚದಲ್ಲಿ ಜೀವಿಸುವಾಗ, ಪ್ರತಿಯೊಬ್ಬನೂ ನಮ್ಮ ಆತ್ಮಸ್ವರೂಪವೆ ಎಂದು ಅರಿತರೆ ಈ ಭೂಮಿಯು ಸ್ವರ್ಗವಾಗುತ್ತದೆ. ಒಬ್ಬ ಜ್ಞಾನಿ ಈ ಜಗತ್ತಿನಲ್ಲಿ ಹೇಗೆ ಜೀವಿಸುತ್ತಾನೆ ಎಂಬುದನ್ನು ಡಿ.ವಿ.ಜಿ. ಹೀಗೆ ವಿವರಿಸಿದ್ದಾರೆ.

ಬ್ರಹ್ಮಾನುಸಂಧಾನ ಲೋಕಸಂಧಾನದಲಿ
ಬ್ರಹ್ಮದರ್ಶನವೆಲ್ಲ ಜೀವಪೋಷದಲಿ।
ಬ್ರಹ್ಮಾನುಭವ ದೇಹ ಕರುಣಾನುಭವಗಳಲಿ
ಮರ್ಮವಿದು ಮುಕ್ತಿಗೆಲೊ - ಮಂಕುತಿಮ್ಮ ॥

ನಾವು ಆ ಚೈತನ್ಯವನ್ನು ಪ್ರತಿಯೊಬ್ಬರಲ್ಲಿ ಕಾಣಬೇಕು. ನಮ್ಮ ದೇಹ ಇಂದ್ರಿಯಗಳ ಮುಖಾಂತರ ಅನುಭವಿಸುವ ಎಲ್ಲ ಅನುಭವಗಳನ್ನು ಆ ಚೈತನ್ಯದನುಭವವೆಂದು ಅರಿತರೆ ಅದೇ ಮುಕ್ತಿ.

ಮೋದಿಯವರು ಶಾಂತಿದೂತರಾಗಲಿ

ಪತ್ರ ಮಿತ್ರ

ಅಮೆರಿಕಾ- ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧವನ್ನು ನಿಲ್ಲಿಸಲು ಭಾರತದ ಪ್ರಧಾನಿ ಮೋದಿ ಮಧ್ಯಸ್ಥಿಕೆಯನ್ನು ವಹಿಸಬೇಕು ಎಂಬ ಮಾತುಗಳು ಇತ್ತೀಚೆಗೆ ಬಹಳವಾಗಿ ಕೇಳಿಬಂದವು. ಮೋದಿಯವರು ಶಾಂತಿದೂತರಾಗಲು ಸರಿಯಾದ ವ್ಯಕ್ತಿ ಎಂಬ ಅಭಿಪ್ರಾಯ ಎಲ್ಲರದು. ಈ ವಿಷಯದ ಕುರಿತು ಫಿನ್‌ಲೆಂಡ್ ಅಧ್ಯಕ್ಷ ಸಾರ್ವಜನಿಕವಾಗಿ ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಿ, ಮೋದಿಯವರು ಯುದ್ಧ ನಿಲ್ಲಿಸಲು ಮಧ್ಯಸ್ಥಿಕೆ ವಹಿಸಬೇಕು ಎಂದರು. ಯುಎಇ ರಾಯಭಾರಿ ಕೂಡಾ "ಮೋದಿಯವರ ಒಂದು ಮಾತು ಯುದ್ಧ ನಿಲ್ಲಿಸಬಲ್ಲುದು" ಎಂದು ಹೇಳಿದರು. ಇನ್ನೂ ಕೆಲವು ಮುಖಂಡರು ಇದೇ ರೀತಿಯ ಅಭಿಪ್ರಾಯ ಸೂಚಿಸಿದ್ದಾರೆ.

ಇಂದು, ಮೋದಿಯವರು ವಿಶ್ವದಲ್ಲೇ ಅತಿ ಹೆಚ್ಚು ಜನಪ್ರಿಯ ನಾಯಕ. ಭಾರತವು ವಿಶ್ವದ ಹೆಚ್ಚಿನ ದೇಶಗಳೊಡನೆ ಉತ್ತಮ ಸ್ನೇಹ ಸಂಬಂಧ ಹೊಂದಿದೆ. ಪ್ರಸ್ತುತ ಯುದ್ಧನಿರತರಾಗಿರುವ ಅಮೆರಿಕಾ, ಇರಾನ್, ಇಸ್ರೇಲ್ ಮತ್ತು ಗಲ್ಫ್ ರಾಷ್ಟ್ರಗಳೊಡನೆ ಭಾರತದ ಸಂಬಂಧ ಉತ್ತಮವಾಗಿದೆ. ಮೋದಿಯವರು ಈ ಎಲ್ಲಾ ದೇಶಗಳ ಮುಖಂಡರೊಡನೆ ಸೌಹಾರ್ದ ಸ್ನೇಹ ಹೊಂದಿದ್ದಾರೆ. ಎಲ್ಲರೊಡನೆ ಸಂಬಂಧ ಸುಧಾರಿಸುವಲ್ಲಿ ಬಹಳ ಪ್ರಯತ್ನ ಮಾಡುತ್ತಿದ್ದಾರೆ. ಇರಾನ್‌ಗೆ ಬಹಿರಂಗ ಬೆಂಬಲ ಸೂಚಿಸದಿದ್ದರೂ, ಭಾರತ ಮತ್ತು ಇರಾನ್ ಸಂಬಂಧ ಹಾಳಾಗದಂತೆ ನೋಡಿಕೊಳ್ಳುತ್ತಿದ್ದಾರೆ. ಇರಾನ್ ಜತೆ ನಡೆದ ಮಾತುಕತೆಯ ಪರಿಣಾಮವಾಗಿ ಅಲ್ಲಿಂದಲೂ ತೈಲ ತರಿಸುವಲ್ಲಿ ಯಶಸ್ಸು ಹೊಂದಿದ್ದಾರೆ.

ಅಮೆರಿಕಾ ಅಧ್ಯಕ್ಷ ಟ್ರಂಪ್ ಅವರ ವಿಚಿತ್ರ ವರ್ತನೆಯ ನಡುವೆಯೂ, ಮೋದಿ ಚಾಣಾಕ್ಷತೆಯಿಂದ ಎಲ್ಲವನ್ನೂ ನಿಭಾಯಿಸುವಲ್ಲಿ ಯಶಸ್ಸು ಪಡೆಯುತ್ತಿದ್ದಾರೆ. ವಿಭಿನ್ನ ದೇಶಗಳ ನಡುವಿನ ಸಂಬಂಧದಲ್ಲಿ ಸ್ಥಿರತೆ ತರುವಲ್ಲೂ ಸಾಕಷ್ಟು ಪ್ರಯತ್ನ ಮಾಡುತ್ತಿದ್ದಾರೆ. ತನ್ನ ದೂರದೃಷ್ಟಿಯಿಂದ ಎಲ್ಲವನ್ನೂ ಸರಿದೂಗಿಸಿಕೊಂಡು ಹೋಗುವ ಕ್ಷಮತೆ, ಬದ್ಧತೆ, ಪ್ರಾಮಾಣಿಕತೆ ಮೋದಿಯವರಲ್ಲಿದೆ ಎಂಬುದು ಮನದಟ್ಟಾಗಿರುವುದರಿಂದ ಅವರ ಉದ್ದೇಶವನ್ನು ಯಾರೂ ಅನುಮಾನಿಸುತ್ತಿಲ್ಲ.

ಕೊಲ್ಲಿ ಸಮರ ನಿಲ್ಲಿಸುವಲ್ಲಿ, ಜಗತ್ತಿನಲ್ಲಿ ಶಾಂತಿ ನೆಲೆಸುವಂತೆ ಮಾಡುವಲ್ಲಿ ಮೋದಿಯವರು ಪ್ರಧಾನ ಪಾತ್ರ ವಹಿಸುವುದು ಒಳ್ಳೆಯದು ಎಂಬುದು ಭಾರತೀಯರ ಆಶಯ.

-ಶಂಕರನಾರಾಯಣ ಭಟ್, ಮಾಡಗೇರಿ

ಕಣ್ಗಾವಲು ಅಗತ್ಯ

ಪಡಿತರ ವ್ಯವಸ್ಥೆಯಲ್ಲಿನ ಅಕ್ರಮಗಳು ಬಡವರ ಹಸಿವಿನೊಂದಿಗೆ ನಡೆಯುತ್ತಿರುವ ಕ್ರೂರತನಕ್ಕೆ ಸಾಕ್ಷಿ. ಇದನ್ನು ತಡೆಯಲು ಅಕ್ಕಿ ಗೋದಾಮುಗಳಲ್ಲಿ ಸಿ.ಸಿ.ಟಿ.ವಿ. ಅಳವಡಿಕೆ ಮತ್ತು ಸಾಗಣೆಕೆ ವಾಹನಗಳಿಗೆ ಜಿಪಿಎಸ್. ಅಳವಡಿಕೆ ಅತ್ಯಗತ್ಯ. ಇವು ವ್ಯವಸ್ಥಿತವಾಗಿ ಪಡಿತರ ಗೋದಾಮುಗಳಲ್ಲಿ ನಡೆಯುತ್ತಿರುವ ಮಹಾ ಲೂಟಿ ತಡೆಯಲು ಇದು ಅನಿವಾರ್ಯ.

ಸಾರ್ವಜನಿಕರ ತೆರಿಗೆ ಹಣದಲ್ಲಿ ಖರೀದಿಸಿದ ಅಕ್ಕಿ ಕಾಳಸಂತೆಗೆ ಮಾರಾಟವಾಗುತ್ತಿರುವುದು ವ್ಯವಸ್ಥೆಯ ನೈತಿಕ ಪತನಕ್ಕೆ ಸಾಕ್ಷಿ. ಕೇವಲ ಕ್ಯಾಮೆರಾ ಇಟ್ಟರೆ ಸಾಲದು, ಪ್ರತಿಯೊಂದು ಪಡಿತರ ಚೀಲಕ್ಕೂ ಆರ್‌ಎಫ್‌ಐಡಿ ಟ್ಯಾಗ್ ಅಳವಡಿಸಿ ಗೋದಾಮಿನಿಂದ ಹೊರಬಂದ ಪ್ರತಿ ಕ್ಷಣವನ್ನೂ ಟ್ರ್ಯಾಕ್ ಮಾಡಬೇಕು. ಈ ದತ್ತಾಂಶವನ್ನು ಸಾರ್ವಜನಿಕ ಡ್ಯಾಶ್‌ಬೋರ್ಡ್‌ನಲ್ಲಿ ಲಭ್ಯವಾಗುವಂತೆ ಮಾಡಿ ಡಿಜಿಟಲ್ ಆಡಿಟ್ ನಡೆಸಬೇಕು. ತಂತ್ರಜ್ಞಾನದ ಈ ಕಠಿಣ ಬೇಲಿ ಇಲ್ಲದಿದ್ದರೆ ಭ್ರಷ್ಟರ ಕೈಯಲ್ಲಿ ಸರ್ಕಾರದ ಯೋಜನೆಗಳು ಕೇವಲ ಕಾಗದದ ಮೇಲಿನ ಅಂಕಿಅಂಶಗಳಾಗಿ ಉಳಿಯುತ್ತವೆ. ಬಡವರ ಹಕ್ಕು ರಕ್ಷಿಸಲು ತಂತ್ರಜ್ಞಾನದ ಹರಿತ ಆಯುಧಗಳನ್ನು ಅಳವಡಿಸುವುದು ಅಗತ್ಯ.

-ಡಾ.ವಿಜಯಕುಮಾರ ಎಚ್.ಕೆ, ರಾಯಚೂರು

ಕುತೂಹಲವಿದೆ

"ಶಿಯಾ ಮುಸ್ಲಿಮರು ಇರಾನನ್ನು ಅಷ್ಟು ಪ್ರೀತಿಸುವವರಾದರೆ ಇರಾನಿಗೇ ಹೋಗಲಿ" ಎಂಬುದಾಗಿ ಪಾಕಿಸ್ತಾನದ ಸೇನಾ ಮುಖ್ಯಸ್ಥ ಮುನೀರ್ ಇತ್ತೀಚೆಗೆ ಹೇಳಿದ್ದಾರೆ. ಇದು ಸಹಜವಾಗಿಯೇ ಅಲ್ಲಿನ ಶಿಯಾ ಮುಸ್ಲಿಮ್ ಮುಖಂಡರಿಗೆ ರೋಷ ಬರಿಸಿದೆ. ಸೌದಿ ಅರೇಬಿಯಾದೊಂದಿಗೆ ಮಾಡಿಕೊಂಡ ಮಿಲಿಟರಿ ಒಪ್ಪಂದದ ಅನ್ವಯ ಇರಾನಿನ ವಿರುದ್ಧ ದಾಳಿ ನಡೆಸಬೇಕಾದ ಅನಿವಾರ್ಯತೆಯಲ್ಲಿ ಪಾಕಿಸ್ತಾನ ಸಿಲುಕಿಕೊಂಡಿದೆ. ಅಮೆರಿಕಕ್ಕೂ ಸಹಕಾರ ನೀಡಬೇಕಾದ ಒತ್ತಡದ ಸ್ಥಿತಿ ಅದರದು. ಆದರೆ ಸ್ವದೇಶದಲ್ಲಿರುವ ಶಿಯಾ ಮುಸ್ಲಿಮರು ಇರಾನನ್ನು ಬೆಂಬಲಿಸುತ್ತಿದ್ದಾರೆ. ಪಾಕಿಸ್ತಾನವು ಅಮೆರಿಕಕ್ಕೆ ಬೆಂಬಲ ನೀಡುವುದನ್ನು ಅವರು ಒಪ್ಪುತ್ತಿಲ್ಲ, ಆದರೂ ಸೇನಾ ಮುಖ್ಯಸ್ಥರು ತಮ್ಮ ದೇಶದ ಶಿಯಾ ಮುಸ್ಲಿಮರನ್ನೇ ಎದುರು ಹಾಕಿಕೊಳ್ಳಲು ತಯಾರಾಗಿದ್ದಾರೆ.

ಇಂತಿರುವಾಗ, ಮುಸ್ಲಿಮ್ ರಾಷ್ಟ್ರಗಳೆಂಬ ಕಾರಣಕ್ಕೆ ಇರಾನ್ ಮತ್ತು ಪಾಕಿಸ್ತಾನಗಳೆರಡನ್ನೂ ಪ್ರೀತಿಸುವ ಇಲ್ಲಿನ ಕೆಲವು ಮಂದಿ ಈ ಬೆಳವಣಿಗೆಗೆ ಯಾವ ರೀತಿ ಪ್ರತಿಕ್ರಿಯಿಸುತ್ತಾರೆಂಬ ಕುತೂಹಲ ನಮಗಿದೆ. ಪ್ಯಾಲೆಸ್ತೀನ್ ಮೇಲೆ ನಡೆಯುವ ದಾಳಿಯನ್ನು ಖಂಡಿಸುವ ಇವರು, ಅಫಘಾನಿಸ್ತಾನದ ಆಸ್ಪತ್ರೆ ಮೇಲೆ ಪಾಕಿಸ್ತಾನವು ದಾಳಿ ಮಾಡಿ ನೂರಾರು ಮಂದಿ ಅಮಾಯಕರ ಸಾವಿಗೆ ಕಾರಣವಾಗಿರುವುದರ ಬಗ್ಗೆ ಸೊಲ್ಲೆತ್ತುವುದಿಲ್ಲ!

-ಪವೀಣ ಚಂದ್ರ, ಮೈಸೂರು

ವಿಪಕ್ಷಗಳ ವರಸೆ

ಭಾರತವು ಕೊಲ್ಲಿ ಯುದ್ಧ ನಿಲ್ಲಿಸಲು ಮಧ್ಯಸ್ಥಿಕೆ ವಹಿಸಬೇಕಾಗಿತ್ತು ಎಂದು ವಿರೋಧ ಪಕ್ಷಗಳು ಸರ್ವಪಕ್ಷ ಸಭೆಯಲ್ಲಿ ಆಗ್ರಹಿಸಿದ ಪ್ರಸಂಗ ನಡೆದಿದೆ. ಪಾಕಿಸ್ತಾನವನ್ನು ನೋಡಿ ಕಲಿಯಿರಿ ಎಂಬಂತಹ ಉಪದೇಶವೂ ಸಿಕ್ಕಿದೆ. ಅದಕ್ಕೆ ವಿದೇಶಾಂಗ ಸಚಿವ ಜೈಶಂಕರ್‌ರವರು "ಮಧ್ಯಸ್ಥಿಕೆ ವಹಿಸಲು ಭಾರತವು ದಲ್ಲಾಳಿ ರಾಷ್ಟ್ರವಲ್ಲ" ಎಂದು ಸೂಕ್ತ ಉತ್ತರವನ್ನೆ ನೀಡಿದ್ದಾರೆ.

ಒಂದು ವೇಳೆ ನಿಜವಾಗಿಯೂ ಭಾರತವು ಮಧ್ಯಸ್ಥಿಕೆ ವಹಿಸಲು ಮುಂದಾಗಿದ್ದರೆ ಇದೇ ವಿರೋಧ ಪಕ್ಷಗಳ ಪ್ರತಿಕ್ರಿಯೆ ಹೇಗಿರುತ್ತಿತ್ತು? ಆಗ ಅವುಗಳ ವರಸೆಯೇ ಬದಲಾಗುತ್ತಿತ್ತು. ಭಾರತಕ್ಕೆ ಇಂತಹ ಉಸಾಬರಿ ಏಕೆ ಬೇಕು, ಭಾರತದ ವಿದೇಶಾಂಗ ನೀತಿಯೇ ಸರಿಯಿಲ್ಲ ಎಂದು ಟೀಕಿಸುತ್ತಿದ್ದವೇನೋ. ಮಧ್ಯಸ್ಥಿಕೆ ವಹಿಸಲು ಮುಂದಾಗಿ ಅದು ಸಫಲವಾಗದಿದ್ದರಂತೂ "ಮೋದಿಯವರು ಅಂತಾರಾಷ್ಟ್ರೀಯ ಮಧ್ಯಸ್ಥಿಕೆ ವಹಿಸಲು ಅಸಮರ್ಥರು, ಆದ್ದರಿಂದ ಅವರು ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಬೇಕು" ಎಂದು ಒತ್ತಾಯಿಸುತ್ತಿದ್ದುದು ಖಂಡಿತ.

-ಶೈಲೇಶ್ ಆಚಾರ್ಯ, ಉಡುಪಿ

ಕಾಮ್-ಬ್ರೈನ್ ಡಿಜಿಟಲ್ ಮಾಹಿತಿ



• **ಬೆಂಗಳೂರು:** ನಗರದಲ್ಲಿರುವ ಮಿದುಳು ತಜ್ಞರು, ಮನೋವೈದ್ಯರು ಮತ್ತು ನರವಿಜ್ಞಾನಿಗಳು ಕೂಡಿದ ತಂಡವೊಂದು ಮನೋವೈದ್ಯಕೀಯ ಅಸ್ವಸ್ಥತೆಯನ್ನು ವಿಶ್ಲೇಷಿಸಲು ಉಪಯೋಗವಾಗುವ ಕಾಮ್-ಬ್ರೈನ್ ಎಂದು ಹೆಸರಿಸಲಾದ ಡಿಜಿಟಲ್ ಮಾಹಿತಿ ಭಂಡಾರವೊಂದನ್ನು ಅಭಿವೃದ್ಧಿಪಡಿಸಿದ್ದಾರೆ.

ಕಾಮ್-ಬ್ರೈನ್ ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿರುವ ರೋಗಿಗಳ ಮಿದುಳು ರಚನೆ ಮತ್ತು ಅದರ ಕಾರ್ಯಾಚರಣೆಯ ಬಗ್ಗೆ ಎಲ್ಲಾ ಮಾಹಿತಿಯನ್ನು ಬೃಹತ್ ಪ್ರಮಾಣದಲ್ಲಿ ಸಂಗ್ರಹಿಸುವ ಮತ್ತು ವ್ಯವಸ್ಥಿತವಾಗಿ ದಾಖಲಿಸುವ ಭಾರತದ ಮೊಟ್ಟಮೊದಲ ಪ್ರಯತ್ನವಾಗಿದೆ.

ಈ ಬಗ್ಗೆ ಮಾತನಾಡಿದ ಎನ್‌ಸಿಬಿಎಸ್ ನಿರ್ದೇಶಕ ಪ್ರೊ. ಎಲ್.ಎಸ್. ಶಶಿಧರ, ವಿವಿಧ ಮನೋವೈದ್ಯಕೀಯ ಅಸ್ವಸ್ಥತೆಗಳಿಗೆ ಕಾರಣಗಳನ್ನು ತಿಳಿಯಲು ಹೆಚ್ಚಿನ ಮೂಲಭೂತ ಸಂಶೋಧನೆಯ ಅಗತ್ಯವಿದೆ. ಒಂದೇ ಕುಟುಂಬದ ಪೀಡಿತ ಮತ್ತು ಬಾಧಿತವಲ್ಲದ ವ್ಯಕ್ತಿಗಳಿರಡರ ಬಗ್ಗೆಯೂ ದೊಡ್ಡ ಪ್ರಮಾಣದ ಡೇಟಾ ಸೆಟ್ಟುಗಳು ಲಭ್ಯವಾಗುವಂತೆ ಮಾಡಿರುವ ಕಾಮ್ ಬ್ರೈನ್ ಆವಿಷ್ಕಾರವನ್ನು ವೇಗಗೊಳಿಸಲು ಮತ್ತು ಹೆಚ್ಚು ಪರಿಣಾಮಕಾರಿ ಚಿಕಿತ್ಸೆಯನ್ನು ಅಭಿವೃದ್ಧಿಪಡಿಸಲು ನಮಗೆ ಸಹಾಯ ಮಾಡುತ್ತದೆ ಎಂದು ಹೇಳಿದರು.

ಅನುದಾನ ಬಿಡುಗಡೆಗೂ ಮುನ್ನ ಪರಿಶೀಲಿಸಲಿ

• **ಬೆಂಗಳೂರು:** ಐದು ನಗರ ಪಾಲಿಕೆಯ 2026-27ರ ಸಾಲಿಗೆ ಆಯವ್ಯಯದಲ್ಲಿ ಬಿಡುಗಡೆ ಮಾಡುವ ಅನುದಾನ ಸಂಬಂಧ ಮರು ಪರಿಶೀಲನೆ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಘಟಕ ಮಾಜಿ ಅಧ್ಯಕ್ಷ ರಮೇಶ್ ಎನ್.ಆರ್ ಒತ್ತಾಯಿಸಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಪತ್ರ ಬರೆದ ಅವರು, ಬೆಂಗಳೂರು ಮಹಾನಗರದಿಂದ ರಾಜ್ಯ ಸರ್ಕಾರಕ್ಕೆ ಕಳೆದ ಆರ್ಥಿಕ ವರ್ಷದಲ್ಲಿ



ಲಭಿಸಿರುವ 1,70,000 ಕೋಟಿ ರೂ.ಆದಾಯದ ಪೈಕಿ, ಬೆಂಗಳೂರು ಮಹಾನಗರದ ಅಭಿವೃದ್ಧಿ ಕಾರ್ಯಗಳಿಗೆಂದು ಕೇವಲ 7,000 ಕೋಟಿ ರೂ. ಗಳಷ್ಟು ಅಲ್ಪ ಪ್ರಮಾಣದ ಅನುದಾನವನ್ನು ನೀಡುವ ಮೂಲಕ ಬೆಂಗಳೂರು ಮಹಾನಗರದ ಜನತೆಗೆ ಮಹಾ ವಂಚನೆಯನ್ನು ಮಾಡಿರುತ್ತಾರೆ. ಅಂದರೆ, ಬೆಂಗಳೂರು ಮಹಾನಗರದಿಂದ ರಾಜ್ಯ ಸರ್ಕಾರಕ್ಕೆ ವಿವಿಧ ತೆರಿಗೆ , ಆದಾಯದ ಮೂಲಗಳಿಂದ ಲಭಿಸಿರುವ ಒಟ್ಟು ಮೊತ್ತದ ಶೇ.4.11ರಷ್ಟು ಮಾತ್ರವೇ ಬೆಂಗಳೂರು ಮಹಾನಗರದ ಅಭಿವೃದ್ಧಿ ಕಾರ್ಯಗಳಿಗೆ ನೀಡಿರುತ್ತಾರೆ ಎಂದರು. ಅಧಿಕಾರಿ - ನೌಕರರ ವೇತನ, ಪೌರ ಕಾರ್ಮಿಕರ ವೇತನ ಮತ್ತು ಪಿಂಚಣಿ ಸೇರಿದಂತೆ ಅತ್ಯಗತ್ಯವಿರುವ ನಿರ್ವಹಣೆ ಕಾರ್ಯ ಹಾಗೂ ಕನಿಷ್ಠ ಪ್ರಮಾಣದ ಅಭಿವೃದ್ಧಿ ಕಾರ್ಯಗಳಿಗೆಂದು ಅವಶ್ಯಕತೆ ಇರುವ 16,000 ಕೋಟಿ ರೂ.ಗಳನ್ನು 2026-27ರ ಸಾಲಿಗೆ ಬಿಡುಗಡೆ ಮಾಡುವ ಸಂಬಂಧ ಮರು ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದರು.

ಕೋದಂಡ ರಾಮ



ರಾಮನವಮಿ ಹಿನ್ನೆಲೆಯಲ್ಲಿ ರಾಜಾಜಿನಗರದ ರಾಮ ಮಂದಿರದಲ್ಲಿ ಮಕ್ಕಳ ರೂಪದಲ್ಲಿ ಬಂದ ರಾಮ ಸೀತೆಯರನ್ನು ಕಂಡ ಸಾರ್ವಜನಿಕರು ಕಣ್ತುಂಬಿಕೊಂಡರು.

ಕಿರುಸುದ್ದಿ

ಹವ್ಯಕ ಮಹಾಸಭಾದ ವಿವಿಧ ಪ್ರಶಸ್ತಿಗೆ ಆಯ್ಕೆ

• **ಬೆಂಗಳೂರು:** ಶ್ರೀಅಖಿಲ ಹವ್ಯಕ ಮಹಾಸಭೆಯು ನೀಡುವ ಹವ್ಯಕ ವಿಭೂಷಣ, ಹವ್ಯಕ ಭೂಷಣ, ಹವ್ಯಕ ಶ್ರೀ, ಹವ್ಯಕ ಸೇವಾಶ್ರೀ ವಾರ್ಷಿಕ ವಿಶೇಷ ಪ್ರಶಸ್ತಿಗೆ ಸಾಧಕರನ್ನು ಆಯ್ಕೆ ಮಾಡಲಾಗಿದೆ. ಸಾಹಿತಿ ಮುಂಡಂಬೈಲು ಗೋಪಾಲಕೃಷ್ಣ ಶಾಸ್ತ್ರಿ, ಶಿಕ್ಷಣ ತಜ್ಞ ಎಸ್. ಶಂಭು ಭಟ್ ಕಡತೋಕ ಅವರಿಗೆ ಹವ್ಯಕ ವಿಭೂಷಣ, ಚಿತ್ರ ಕಲಾವಿದ ನೀರ್ನಳ್ಳಿ ಗಣಪತಿ, ಪಶು ತಜ್ಞ ಡಾ.ವೈ.ವಿ.ಕೃಷ್ಣಮೂರ್ತಿ, ಉದ್ಯಮಿ ಉಮೇಶ ಬಂದಗದ್ದೆ ಅವರು ಹವ್ಯಕ ಭೂಷಣ, ಕಸೂತಿ ಉದ್ಯಮಿ ಪೂರ್ಣಿಮಾ ಕೆ.ಭಟ್, ಯಜುರ್ವೇದ ಘನಪಾಠಿ ವೇ.ಮೂ.ಸುಚೇತನ ಭಟ್, ಸಮಾಜ ಸೇವಕ ಆನಂದ ಹೆಗಡೆ ಶೀಗೇಹಳ್ಳಿ, ಕ್ರೀಡಾಪಟು ಪ್ರತ್ಯೂಷ ಕುಮಾರ್ ಅವರು ಹವ್ಯಕ ಶ್ರೀ, ಹಿರಿಯ ಸಂಚಾಲಕ ಡಾ.ಬಿ.ವಿ.ನರಹರಿ ರಾವ್, ಹಿರಿಯ ನಿರ್ದೇಶಕ ಬೋನಂತಾಯ ಶಿವಶಂಕರ ಭಟ್, ಹವ್ಯಕ ವಧೂ-ವರ ವೇದಿಕೆ ಸಂಚಾಲಕ ಕೃಷ್ಣಮೂರ್ತಿ ಹೆಗಡೆ ಹ್ಯಾಗಲಿ ಅವರು ಹವ್ಯಕ ಸೇವಾಶ್ರೀಗೆ ಆಯ್ಕೆಯಾಗಿದ್ದಾರೆ. ಮಾ.29ರಂದು ಮಲ್ಲೇಶ್ವರದ ಹವ್ಯಕ ಭವನದಲ್ಲಿ ನಡೆಯುವ 83ನೇ ವರ್ಷದ ಹವ್ಯಕ ಸಂಸ್ಥಾಪನೋತ್ಸವ ಕಾರ್ಯಕ್ರಮದಲ್ಲಿ 2025-26 ನೇ ಸಾಲಿನ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಇದೇ ಸಂದರ್ಭದಲ್ಲಿ ವಿಶೇಷ ಸಾಧನೆಗಳನ್ನು ಮಾಡಿದ ವಿದ್ಯಾರ್ಥಿಗಳಿಗೆ ಪಲ್ಲವ ಪ್ರಶಸ್ತಿಯನ್ನು ನೀಡಿ ಮಕ್ಕಳಿಗೆ ಪ್ರೋತ್ಸಾಹ ನೀಡಲಾಗುವುದು. ಪತ್ರಿಕೆಯ ವಜ್ರಮಹೋತ್ಸವದ ಪ್ರಯುಕ್ತ ವಿಶೇಷ ಸಂಚಿಕೆಯನ್ನು ಹೊರತರಲಾಗುತ್ತಿದ್ದು, ಭಾನುವಾರ ಸಂಚಿಕೆಯ ಲೋಕಾರ್ಪಣೆ ಹಾಗೂ ಪತ್ರಿಕೆಯಲ್ಲಿ ಸಂಪಾದಕರು ಹಾಗೂ ಸಂಚಾಲಕರಾಗಿ ಸೇವೆ ಸಲ್ಲಿಸಿದವರಿಗೆ ಇದೇ ಸಂದರ್ಭದಲ್ಲಿ ಗೌರವಾರ್ಪಣೆ ಕಾರ್ಯಕ್ರಮ ನಡೆಯಲಿದೆ.

ಅಂಗಳದ ಡೇರೆ ಹೂ ಕೃತಿ ನಾಳೆ ಲೋಕಾರ್ಪಣೆ

• **ಬೆಂಗಳೂರು:** ನವ್ಯ ವೇವ್ ಬುಕ್ಸ್ ವತಿಯಿಂದ ವೈ.ಎನ್. ಗುಂಡೂರಾವ್ ವಿರಚಿತ ಪ್ರಬಂಧ ಸಂಕಲನ ಗುಬ್ಬಿಗಾನ ಹಾಗೂ ಕೆ.ಎನ್. ಭಗವಾನ್ ವಿರಚಿತ ಕಥಾಸಂಕಲನ ಅಂಗಳದ ಡೇರೆ ಹೂ ಪುಸ್ತಕಗಳ ಲೋಕಾರ್ಪಣೆ ಕಾರ್ಯಕ್ರಮ ಮಾರ್ಚ್ 28ರ ಶನಿವಾರ ಬೆಳಗ್ಗೆ 10 ಗಂಟೆಗೆ ಗಿರಿನಗರದ 2ನೇ ಹಂತದ 8ನೇ ಅಡ್ಡರಸ್ತೆಯಲ್ಲಿರುವ ಅಳಿಲು ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದೆ. ವೇದಿಕೆಯಲ್ಲಿ ಖ್ಯಾತ ಹಾಸ್ಯ ಭಾಷಣಕಾರ ಎಂ.ಎಸ್. ನರಸಿಂಹಮೂರ್ತಿ, ಲೇಖಕಿ ಮಧುರಾ ಕರ್ಣಂ, ಎನ್. ರಾಮನಾಥ್ ಹಾಗೂ ಕೃತಿಕಾರರು ಉಪಸ್ಥಿತರಿರಲಿದ್ದಾರೆ.

ಬೈಕ್ ಡಿಕ್ಕಿ: ಸೈಕಲ್ ಸವಾರ ಸಾವು

• **ಬೆಂಗಳೂರು:** ಎಚ್‌ಎಎಲ್ ಏರ್‌ಪೋರ್ಟ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ರಸ್ತೆ ಅಪಘಾತ ಸಂಭವಿಸಿದ್ದು, ನಿಯಂತ್ರಣ ತಪ್ಪಿದ ಕೆಟಿಎಂ ಬೈಕ್ ಸೈಕಲ್‌ಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಮೃತಪಟ್ಟಿದ್ದಾರೆ. ಮೃತಪಟ್ಟ ಬೈಕ್ ಸವಾರನನ್ನು ಸ್ಟಿಫನ್ ಜಾರ್ಜ್ ಬಿನು (22) ಎಂದು ಗುರುತಿಸಲಾಗಿದೆ. ಬುಧವಾರ ರಾತ್ರಿ ಸುಮಾರು 10.30ರ ಸಮಯದಲ್ಲಿ ಮಹಮ್ಮದ್ ಅಸ್ಗರ್ (37) ಎಂಬವರು ತಮ್ಮ ಎಲೆಕ್ಟ್ರಿಕ್ ಸೈಕಲ್‌ನಲ್ಲಿ ಎಚ್‌ಎಎಲ್ ಏರೋಸ್ಪೇಸ್ ಕಡೆಯಿಂದ ಬಂದು ಯು-ಟರ್ನ್ ಪಡೆಯುತ್ತಿದ್ದರು. ಬಿಎಂಎಲ್ ಜಂಕ್ಷನ್ ಕಡೆಯಿಂದ ಕೆಟಿಎಂ ಬೈಕ್‌ನಲ್ಲಿ ಅತಿವೇಗವಾಗಿ ಬಂದ ಸ್ಟಿಫನ್, ಸೈಕಲ್‌ಗೆ ಡಿಕ್ಕಿ ಹೊಡೆದಿದ್ದಾರೆ. ಎಚ್‌ಎಎಲ್ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಾಗಿದೆ.

ನಗರದ ಮೂಲ ಸೌಕರ್ಯ ಕುರಿತು ಚರ್ಚೆ| ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂಗಿತ

ಬೆಂಗಳೂರು ಅಭಿವೃದ್ಧಿಗೆ ಹೆಚ್ಚು ಆಸಕ್ತಿ

• **ವಿಧಾನಪರಿಷತ್:** ಆಸಕ್ತಿಯಿಂದ ಬೆಂಗಳೂರು ಅಭಿವೃದ್ಧಿ ಖಾತೆಯನ್ನು ವಹಿಸಿಕೊಂಡಿದ್ದೇನೆ. ನಾನು ಈ ಹಿಂದೆ ನಗರಾಭಿವೃದ್ಧಿ ಸಚಿವನಾಗಿದ್ದೆ, ಇಂಧನ ಸಚಿವನಾಗಿದ್ದೇನು. ನನಗೆ ಈಗ ಸಾಕಷ್ಟು ಅನುಭವ ಹೊಂದಿದ್ದು ಬೆಂಗಳೂರಿನಲ್ಲೂ ಬದಲಾವಣೆ ಮಾಡಬೇಕು ಎಂದು ಹೊರಟಿದ್ದೇನೆ. ಅದರೂ ಒಂದಷ್ಟು ಜನ ತಪ್ಪು ಕಂಡುಹಿಡಿದರು. ಇದು ವಿರೋಧ ಪಕ್ಷದ ಕರ್ತವ್ಯವೂ ಹೌದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಬೆಂಗಳೂರು ನಗರದ ಮೂಲಸೌಕರ್ಯದ ಕುರಿತು ನಿಯಮ 69ರ ಚರ್ಚೆಯ ಮೇಲೆ ಉತ್ತರ ನೀಡಿದ ಅವರು, ನಗರದ ಹಿತಕ್ಕೆ ನಾವು ಕೈಗೊಂಡಿರುವ ಅನೇಕ ತೀರ್ಮಾನಗಳ ಬಗ್ಗೆ ವಿರೋಧ ಪಕ್ಷದವರು ಟೀಕೆ ಮಾಡಬಹುದು, ಮಾಡಲಿ. ಆದರೆ ಮುಂದಿನ 5 ವರ್ಷಗಳ ನಂತರ ಡಿ.ಕೆ. ಶಿವಕುಮಾರ್ ಉತ್ತಮ ನಿರ್ಧಾರ ಕೈಗೊಂಡರು ಎಂದು ಹೇಳುತ್ತಾರೆ. ನನಗೆ ಅಷ್ಟೇ ಸಾಕು ಎಂದರು. ಜಿಬಿಎ ಸಂಬಂಧಿಸಿದಂತೆ ವಿರೋಧ ಪಕ್ಷದ ನಾಯಕರು ಅನೇಕ ಚರ್ಚೆ ನಡೆಸಿದ್ದಾರೆ. ಆರ್. ಅಶೋಕ್, ಡಾ.ಅಶ್ವತ್ಥನಾರಾಯಣ ಅವರು ಅನೇಕ ಸಲಹೆಯನ್ನು ನೀಡಿದ್ದಾರೆ. ಇವರ ಸಲಹೆಗಳನ್ನು ನಾನು ಒಪ್ಪುತ್ತೇನೆ. ಜೊತೆಗೆ ಟೀಕೆಯನ್ನೂ ಸಹ ಮಾಡಿದ್ದಾರೆ. ನಾನು ಟೀಕೆಯನ್ನು ಯಾವಾಗಲೂ ಸ್ವೀಕಾರ ಮಾಡುವವನು ಎಂದರು.

ಈ ವರ್ಷ ಬೆಂಗಳೂರು ಅಭಿವೃದ್ಧಿಗೆ 7 ಸಾವಿರ ಕೋಟಿ ರೂ. ಹಾಗೂ ಮುಖ್ಯಮಂತ್ರಿಯವರ ಅನುದಾನದಲ್ಲಿ ಮತ್ತೆ 1,500 ಕೋಟಿ ರೂ.ನೀಡಿದ್ದಾರೆ. 2020ರಲ್ಲಿ ಬಿಜೆಪಿ ಸರ್ಕಾರ ಮಾಡಿದ ತೆರಿಗೆ ಕಾನೂನು ಬದಲಾವಣೆ ಮಾಡಿಲ್ಲ, ನಾವು ಜನರಿಗೆ ಇನ್ನಷ್ಟು ಅನುಕೂಲ ಮಾಡಿಕೊಟ್ಟಿದ್ದೇವೆ. ಒಟಿಎಸ್, ಕಡಿಮೆ ದಂಡ ಸೇರಿದಂತೆ ಅನೇಕ ಅವಕಾಶ ಕೊಡಲಾಗಿದೆ. ಒಟಿಎಸ್ ಜಾರಿ ಮಾಡಿದ ಕಾರಣಕ್ಕೆ 1277 ಕೋಟಿ ರೂ. ಹೆಚ್ಚುವರಿ ಆದಾಯ ಬಂದಿದೆ ಎಂದು ತಿಳಿಸಿದರು.



ಟನಲ್ ರಸ್ತೆ

ಟನಲ್ ರಸ್ತೆಯಲ್ಲಿ ಕೆಲವು ಪಾಯಿಂಟ್‌ಗಳಲ್ಲಿ 2 ರಿಂದ 3 ಸಾವಿರ ಕೋಟಿ ರೂ.ಭೂಸ್ವಾಧೀನಕ್ಕೆ ಬೇಕಾಗುತ್ತದೆ. ಅದರ ಹೊರತಾಗಿ 17 ಸಾವಿರ ಕೋಟಿ ರಸ್ತೆ ನಿರ್ಮಾಣಕ್ಕೆ ಬೇಕಾಗುತ್ತದೆ. ಬೇರೆ ರಾಜ್ಯಗಳಲ್ಲಿ ಟನಲ್ ರಸ್ತೆಗೆ ಆಗಿರುವ ಟೆಂಡರ್‌ಗೂ ನಮ್ಮ ಟೆಂಡರ್‌ಗೂ ಬಹಳ ವ್ಯತ್ಯಾಸವಿದೆ. ನಮ್ಮಲ್ಲಿ 700 ರಿಂದ 800 ಕೋಟಿ ಪ್ರತಿ ಕಿ.ಮೀ.ಗೆ ವೆಚ್ಚವಾಗಲಿದ್ದು, ಬೇರೆ ರಾಜ್ಯಗಳಲ್ಲಿ 1300 ರಿಂದ 1400 ಕೋಟಿ ರೂ. ವೆಚ್ಚವಾಗಿದೆ ಎಂದು ವಿವರಿಸಿದರು.

ಬಿಡದಿ ಟೌನ್ ಶಿಪ್

ಈ ವೇಳೆ ಶಾಸಕ ಸುರೇಶ್ ಕುಮಾರ್ ಅವರು, ಬೆಂಗಳೂರು ಬೆಳವಣಿಗೆ ಉತ್ತುಂಗು ತಲುಪಿದ್ದು, ಈಗ ಬೆಂಗಳೂರಿನ ಹೊರ ವಲಯದಲ್ಲಿ ಪರ್ಯಾಯ ನಗರ ನಿರ್ಮಿಸಿ ಎಂದು ಸಲಹೆ ನೀಡಿದರು. ಇದಕ್ಕೆ ಪ್ರತಿಕ್ರಿಯೆ ನೀಡಿದ ಶಿವಕುಮಾರ್ ಅವರು, ಈ ಹಿಂದೆ ಕುಮಾರಸ್ವಾಮಿ ಅವರು ನಂದಗುಡಿ, ಸೋಲೂರು, ಬಿಡದಿಯಲ್ಲಿ ಟೌನ್‌ಶಿಪ್ ಮಾಡಲು ಹೋಗಿ, ನಂತರ ಬಿಟ್ಟುಬಿಟ್ಟರು. ಈಗ ನಾವು ಅದನ್ನು ಮಾಡಲು ಮುಂದಾಗಿದ್ದೇವೆ ಎಂದರು.

ರಸ್ತೆ ಅಗಲೀಕರಣ ಅಸಾಧ್ಯ

ಬೆಂಗಳೂರಿನಲ್ಲಿ ಇರುವ ರಸ್ತೆ ಪ್ರಮಾಣ ಕೇವಲ ಶೇ.8 ರಷ್ಟು ಮಾತ್ರ. ರಸ್ತೆ ಅಗಲೀಕರಣ ಮಾಡಬೇಕು, 2013ರಲ್ಲಿ ಪರಿಹಾರ ವಿಚಾರವಾಗಿ ಬಂದ ಕಾಯ್ದೆ ಬಂದ ನಂತರ ಪರಿಹಾರ 2 ಪಟ್ಟು ನೀಡಬೇಕು. ಹೀಗಾಗಿ ರಸ್ತೆ ಅಗಲೀಕರಣ ಅಸಾಧ್ಯ. ಹೀಗಾಗಿ ಬೆಂಗಳೂರು ಬಿಸಿನೆಸ್ ಕಾರಿಡಾರ್ ಮಾಡಲು ಮುಂದಾಗಿದ್ದೇವೆ. ಮೊದಲ ಹಂತದ ಯೋಜನೆ ಜಾರಿಗೆ ಶೇ.80 ರಷ್ಟು ಭೂಸ್ವಾಧೀನ ಪ್ರಕ್ರಿಯೆಗೆ ಅನುಮತಿ ನೀಡಲಾಗಿದೆ. ಸದ್ಯದಲ್ಲೇ ಟೆಂಡರ್ ಕರೆಯಲಾಗುವುದು. ಈ ರಸ್ತೆ ಆದರೆ ಬೆಂಗಳೂರಿನಲ್ಲಿ ಅರ್ಧ ಸಂಚಾರ ದಟ್ಟಣೆ ನಿವಾರಣೆಯಾಲಿದೆ ಎಂದರು.



ಮೆಟ್ರೊಗೆ 11 ಸಾವಿರ ಕೋಟಿ ರೂ.

ಕೇಂದ್ರ ಸರ್ಕಾರ ಇದುವರೆಗೂ ಮೆಟ್ರೊ ಯೋಜನೆಗಳಿಗೆ ಕೊಟ್ಟಿರುವುದು ಕೇವಲ 11 ಸಾವಿರ ಕೋಟಿ ರೂ. ಇದುವರೆಗೂ ಮೆಟ್ರೋ ಯೋಜನೆಗೆ ಖರ್ಚಾಗಿರುವುದು 67 ಸಾವಿರ ಕೋಟಿ ರೂ. 56 ಸಾವಿರ ಕೋಟಿ ಹಣ ರಾಜ್ಯ ಸರ್ಕಾರ, ಬೆಂಗಳೂರಿನ ನಾಗರಿಕರ ಹಣವಾಗಿದೆ. 50-50 ರಷ್ಟು ವೆಚ್ಚ ಭರಿಸುವ ಬಗ್ಗೆ ಒಪ್ಪಂದವಾಗಿದ್ದರೂ ನಮಗೆ ಅಷ್ಟು ಹಣ ಬರುತ್ತಿಲ್ಲ. ತುಕ್ಕು ಹಿಡಿದ ಕಬ್ಬಿಣ ಸರಿಪಡಿಸಬಹುದು, ತುಕ್ಕು ಹಿಡಿದ ಆಲೋಚನೆ ಸರಿಪಡಿಸಲು ಆಗುವುದಿಲ್ಲ ಎಂದು ತಿಳಿಸಿದರು.

ಜಲ ಸಂಚಯ ಪೂರ್ಣ



• **ನೆಲಮಂಗಲ/ಬೆಂಗಳೂರು:** ಯುನೈಟೆಡ್ ಬ್ರೀವರೀಸ್ ಲಿಮಿಟೆಡ್ ಸಂಸ್ಥೆಯು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲೂಕಿನ ಮಲ್ಲರಬಾಣವಾಡಿ, ಹಂಚಿಪುರ, ಕೊಡಪ್ಪನಹಳ್ಳಿ, ಬೈರೇಗೌಡನಹಳ್ಳಿ ಮತ್ತು ವರದನಾಯಕನಹಳ್ಳಿ ಎಂಬ ಐದು ಗ್ರಾಮಗಳಲ್ಲಿ ಪ್ರಾಜೆಕ್ಟ್ ಜಲ ಸಂಚಯದ ಮೂರನೇ ಹಂತವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದು, ಈ ಮೂಲಕ ಐದು ಗ್ರಾಮಗಳಿಗೆ ನೀರಿನ ಭದ್ರತೆ ಒದಗಿಸಿದೆ.

ಸಂಸ್ಥೆಯ ಸಾಮಾಜಿಕ ಹೊಣೆಗಾರಿಕೆ ನಿಧಿಯಲ್ಲಿ ಎಸ್.ಎಮ್. ಸೆಹಗಲ್ ಫೌಂಡೇಷನ್ ಸಹಯೋಗದೊಂದಿಗೆ ಈ ಯೋಜನೆ ಹಮ್ಮಿಕೊಳ್ಳಲಾಗಿದೆ. ಯೋಜನೆಯ ಭಾಗವಾಗಿ ಗ್ರಾಮದ ಕೆರೆಯನ್ನು ಪುನಶ್ಚೇತನಗೊಳಿಸಲಾಗಿದೆ. ಮಳೆನೀರು ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಸಲಾಗಿದೆ. ವಿಶೇಷವೆಂದರೆ, ಹೂಳೆತ್ತುವ ಸಂದರ್ಭದಲ್ಲಿ ಸಂಗ್ರಹವಾದ ಮಣ್ಣನ್ನು ವೈಜ್ಞಾನಿಕವಾಗಿ ಪರೀಕ್ಷಿಸಿ, ಮಣ್ಣಿನ ಫಲವತ್ತತೆ ಹೆಚ್ಚಿಸಲು ಸ್ಥಳೀಯ ರೈತರಿಗೆ ಉಚಿತವಾಗಿ ನೀಡಲಾಗಿದೆ. ಇದು ಕೃಷಿ ಇಳುವರಿ ಹೆಚ್ಚಿಸಲು ಸಹಕಾರಿಯಾಗಲಿದೆ.

ಅಂತರ್ಜಲ ಮಟ್ಟವನ್ನು ವೃದ್ಧಿಸುವ ಉದ್ದೇಶದಿಂದ ಈ ಐದು ಗ್ರಾಮಗಳಲ್ಲಿ ಒಟ್ಟು 30ಮಳೆನೀರು ಕೊಯ್ಲು ಗುಂಡಿಯನ್ನು ನಿರ್ಮಿಸಲಾಗಿದೆ. ಇವು ಮಳೆನೀರು ವ್ಯರ್ಥವಾಗದೆ ಭೂಮಿಯೊಳಗೆ ಇಳಿಯುವಂತೆ ಮಾಡುತ್ತವೆ.

ನಾಳೆಯಿಂದ ಅಂತಾರಾಷ್ಟ್ರೀಯ ಚಿತ್ರಕಾರರ ಶಿಬಿರ

• **ಬೆಂಗಳೂರು:** ಕೃಷ್ಣ ನೆಸ್ಸ್ ಫೌಂಡೇಷನ್‌ನಿಂದ ಮಾ.28ರಿಂದ ಏ.1ರವರೆಗೆ ಬೆಳಗ್ಗೆ 10 ಗಂಟೆಗೆ ನೆಚರ್ ನಾಟ್ಸ್‌ನಲ್ಲಿ ಚಿತ್ರಕಾರರ ಶಿಬಿರ ಆಯೋಜಿಸಲಾಗಿದೆ.

ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಜತಿನ್ ದಾಸ್, ಕೆ.ಕೆ.ಗಾಂಧಿ, ಮದನ್ ಲಾಲ್, ಕ್ಲೆಮೆಂಟ್ ಬ್ರ್ಯಾಂಗ್ಯುನ್ ಸೌ, ಸಿಮೋನೆ ನೋಸೆಡಾ, ಲೆಬನಾನ್ ನಾಡಾ ಇಶಾನಿ, ಬಾರ್ಬರಾ ಪೆರ್ರಾ, ಜೂಲಿಯಾ ಚುಬುಕ್ಕಿನಾ, ಪಿ.ಜ್ಞಾನ,ಸುಧಾ ಆಲೇನೇಕರ, ಅಚಲ ಗುಣವರ್ಧನ, ಬಾಂಗ್ಲಾದೇಶದ ನಜ್ಮಾ ಅರ್ ಮುಂತಾದವರು ಭಾಗವಹಿಸಲಿದ್ದಾರೆ. ಈ ಅಂತಾರಾಷ್ಟ್ರೀಯ ಚಿತ್ರಕಾರರ ಶಿಬಿರವು ವಿಭಿನ್ನ ಸಾಂಸ್ಕೃತಿಕ ಹಿನ್ನೆಲೆಯ ಕಲಾವಿದರಿಗೆ ಪರಸ್ಪರ ಸಂವಾದ, ಕಲ್ಪನೆ ವಿನಿಮಯ ಮತ್ತು ಸಹಕಾರಕ್ಕಾಗಿ ಒಂದು ಜೀವಂತ ವೇದಿಕೆಯನ್ನು ಒದಗಿಸುತ್ತದೆ. ಐದು ದಿನಗಳ ಕಾಲ ಕಲಾವಿದರು ತೀವ್ರ ಚಿತ್ರಕಲೆ ಅಧಿವೇಶನಗಳು, ಚರ್ಚೆಗಳು ಮತ್ತು ಅನೌಪಚಾರಿಕ ಸಂವಾದಗಳಲ್ಲಿ ತೊಡಗಿಸಿಕೊಂಡು ಪ್ರಕೃತಿ ಮತ್ತು ಪರಸ್ಪರ ಸೃಜನಶೀಲತೆಯಿಂದ ಪ್ರೇರಣೆಯನ್ನು ಪಡೆಯಲಿದ್ದಾರೆ.

ಈ ಶಿಬಿರದ ಅಂಗವಾಗಿ ಮಾ.29ರಂದು ಕೆಎಸ್‌ಎಫ್ ಚಿತ್ರ ಪರಿಷೆ, ಸಂಜೆ 4.30ಕ್ಕೆ ಲೈವ್ ಆರ್ಟ್ ಪ್ರದರ್ಶನ, ಸಂಜೆ 6ಕ್ಕೆ ಲೈವ್ ಸಂಗೀತ ಕಾರ್ಯಕ್ರಮ ನಡೆಯಲಿದ್ದು ಆಯೋಜಿಸಲಾಗಿದೆ. ಕರ್ನಾಟಕ ಹಾಗೂ ಇತರ ಭಾಗದಿಂದ 120ಕ್ಕೂ ಹೆಚ್ಚು ಕಲಾವಿದರು ಭಾಗವಹಿಸಿ ದಿನಪೂರ್ತಿ ಸ್ಥಳದಲ್ಲೇ ಚಿತ್ರಕಲೆ ಮಾಡುವ ಮೂಲಕ ಸ್ಥಳವನ್ನು ಒಂದು ಓಪನ್-ಏರ್ ಸ್ಟುಡಿಯೋವನ್ನಾಗಿ ಪರಿವರ್ತಿಸಲಿದ್ದಾರೆ.

ವಂದೇ ಮಾತರಂ ಗೀತೆ: ವಿಚಾರಣೆ ಮುಂದೂಡಿಕೆ

• **ಬೆಂಗಳೂರು:** ಶಾಲೆಗಳಲ್ಲಿ ಪ್ರತಿದಿನ ವಂದೇ ಮಾತರಂ ಗೀತೆಯ ಎಲ್ಲಾ ಆರು ಚರಣವನ್ನು ಕಡ್ಡಾಯವಾಗಿ ಹಾಡುವಂತೆ ಕೇಂದ್ರ ಸರ್ಕಾರ ಹೊರಡಿಸಿರುವ ಶಿಷ್ಟಾಚಾರ ಮಾರ್ಗಸೂಚಿ ಪ್ರಶ್ನಿಸಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಯನ್ನು ಹೈಕೋರ್ಟ್ ಏಪ್ರಿಲ್ 9ಕ್ಕೆ ಮುಂದೂಡಿದೆ.

ಬೆಂಗಳೂರಿನ ವಕೀಲ ಸೋಮಶೇಖರ್ ರಾಜವಂಶಿ ಅವರು ಸಲ್ಲಿಸಿದ್ದ ಈ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾ. ಸಿ.ಎಂ. ಪೂಣಚ್ಚ ಅವರಿದ್ದ ವಿಭಾಗೀಯ ಪೀಠವು ಗುರುವಾರ ವಿಚಾರಣೆ ನಡೆಸಿತು. ವಿಚಾರಣೆಯ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ. ಅರವಿಂದ ಕಾಮತ್ ಅವರು ಪೀಠದ ಗಮನಕ್ಕೆ ಮಹತ್ವದ ಅಂಶವೊಂದನ್ನು ತಂದರು. ಇದೇ ರೀತಿಯ ಮನವಿಯುಳ್ಳ ಅರ್ಜಿಯೊಂದನ್ನು ಸುಪ್ರೀಂ ಕೋರ್ಟ್ ಮಾ.25ರಂದು ವಜಾಗೊಳಿಸಿದೆ ಎಂದು ಅವರು ತಿಳಿಸಿದರು.

ಈ ಮಾಹಿತಿಯನ್ನು ಆಲಿಸಿದ ನ್ಯಾಯಾಲಯವು ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನ ಪ್ರತಿ ಲಭ್ಯವಿದೆಯೇ ಎಂದು ಪ್ರಶ್ನಿಸಿತು. ಇದಕ್ಕೆ ಉತ್ತರಿಸಿದ ಎಎಸ್‌ಜಿ ಅವರು, ಆದೇಶದ ಪ್ರತಿ ಇನ್ನೂ ಅಧಿಕೃತವಾಗಿ ಬಿಡುಗಡೆಯಾಗಿಲ್ಲ ಎಂದು ತಿಳಿಸಿ, ವಿಚಾರಣೆಯನ್ನು ಮುಂದೂಡಿದರೆ ಮುಂದಿನ ದಿನಾಂಕದಂದು ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುವುದಾಗಿ ಕೋರಿದರು. ಈ ಮನವಿಯನ್ನು ಪುರಸ್ಕರಿಸಿದ ಪೀಠ ವಿಚಾರಣೆಯನ್ನು ಏ.9ಕ್ಕೆ ನಿಗದಿಪಡಿಸಿತು.

ಎಚ್‌ಎಂಟಿ ಲೇಔಟ್‌ನಲ್ಲಿ ಜೋಡಿ ಕೊಲೆ: ಬಂಧನ

• **ಬೆಂಗಳೂರು:** ಪೀಣ್ಯದ ಎಚ್‌ಎಂಟಿ ಲೇಔಟ್‌ನಲ್ಲಿ ಭೀಕರ ಅವಳಿ ಕೊಲೆ (ಡಬಲ್ ಮರ್ಡರ್) ಸಂಭವಿಸಿದೆ. ಅಕ್ರಮ ಸಂಬಂಧದ ವಿಚಾರವಾಗಿ ನಡೆದ ಗಲಾಟೆಯಲ್ಲಿ 16 ವರ್ಷದ ಅಪ್ರಾಪ್ತ ಬಾಲಕನೊಬ್ಬ ಅಕ್ಕ ಮತ್ತು ತಮ್ಮನನ್ನು





ಚಾಕುವಿನಿಂದ ಇರಿದು ಹತ್ಯೆಗೈದಿದ್ದಾನೆ.ಮೃತರನ್ನು ಯಮುನಾ (36) ಮತ್ತು ಆಕೆಯ ತಮ್ಮ ಸುದೀಪ್ (34) ಎಂದು ಗುರುತಿಸಲಾಗಿದೆ. ಆರೋಪಿ ಬಾಲಕನ ತಾಯಿ ಛಾಯಾ , ಮೃತ ಯಮುನಾ ಅವರ ಪತಿ ನಡುವೆ ಅಕ್ರಮ ಸಂಬಂಧವಿತ್ತು ಎನ್ನಲಾಗಿದೆ. ಈ ವಿಚಾರವಾಗಿ ಮಾತನಾಡಲು ಯಮುನಾ ಮತ್ತು ತಮ್ಮ ಸುದೀಪ್ ಅವರು ಪೀಣ್ಯದಲ್ಲಿರುವ ಛಾಯಾ ಅವರ ಮನೆಗೆ ಬಂದಿದ್ದರು. ಉಭಯ ತಂಡಗಳ ನಡುವೆ ಮಾತಿನ ಚಕಮಕಿ ನಡೆದು ದೊಡ್ಡ ಜಗಳಕ್ಕೆ ಕಾರಣವಾಗಿದೆ. ಆರೋಪಿ ತಾಯಿ ಛಾಯಾ ಜತೆ ಯಮುನಾ ಮತ್ತು ಸುದೀಪ್ ಜಗಳವಾಡುತ್ತಿರುವುದನ್ನು ಕಂಡು ಆಕ್ರೋಶಗೊಂಡ ಛಾಯಾಳ 16 ವರ್ಷದ ಪುತ್ರ, ಏಕಾಏಕಿ ಚಾಕುವಿನಿಂದ ಇಬ್ಬರ ಮೇಲೂ ದಾಳಿ ನಡೆಸಿದ್ದಾನೆ. ತೀವ್ರ ರಕ್ತಸ್ರಾವದಿಂದ ಅಕ್ಕ-ತಮ್ಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಬಾಗಿಲು ಹಾಕಿಕೊಂಡಿದ್ದ ಆರೋಪಿ

ಕೃತ್ಯ ಎಸಗಿದ ಬಳಿಕ ತೀವ್ರ ಆತಂಕಕ್ಕೆ ಒಳಗಾದ ಬಾಲಕ, ಮನೆಯ ಕೋಣೆಯೊಳಗೆ ಹೋಗಿ ಬಾಗಿಲು ಹಾಕಿಕೊಂಡಿದ್ದ. ಮಾಹಿತಿ ತಿಳಿದು ಸ್ಥಳಕ್ಕೆ ಪೊಲೀಸರು ಆಗಮಿಸಿದರೂ ಬಾಲಕ ಬಾಗಿಲು ತೆಗೆಯಲು ನಿರಾಕರಿಸಿದ್ದ. ಅಂತಿಮವಾಗಿ ಆತನ ತಂದೆ ಸ್ಥಳಕ್ಕೆ ಬಂದು ಮನವೊಲಿಸಿದ ನಂತರ ಬಾಲಕ ಬಾಗಿಲು ತೆಗೆದು ಹೊರಬಂದಿದ್ದಾನೆ. ಘಟನಾ ಸ್ಥಳಕ್ಕೆ ವಾಯುವ್ಯ ವಿಭಾಗದ ಡಿಸಿಪಿ ನಾಗೇಶ್ ಮತ್ತು ಎಫ್‌ಎಸ್‌ಎಲ್ ತಜ್ಞರ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದೆ. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದ್ದು, ಪೀಣ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತನಿಖಾಧಿಕಾರಿಗೆ ಬೆದರಿಕೆ ಪ್ರಕರಣ: ಹೈಗೆ ಎಚ್‌ಡಿಕೆ ಹೇಳಿಕೆ

ಮಧ್ಯಸ್ಥಿಕೆದಾರರ ನೇಮಿಸಲು ಸಮ್ಮತಿ

• **ಬೆಂಗಳೂರು:** ಕರ್ನಾಟಕ ಲೋಕಾಯುಕ್ತ ವಿಶೇಷ ಪೊಲೀಸ್ ತನಿಖಾ ದಳದ ಮುಖ್ಯಸ್ಥ ಎಂ.ಚಂದ್ರಶೇಖರ್ ಅವರಿಗೆ ಬೆದರಿಕೆ ಹಾಕಿದ ಸಂಬಂಧ ದಾಖಲಾಗಿರುವ ಪ್ರಕರಣದಲ್ಲಿ ಮಧ್ಯಸ್ಥಿಕೆದಾರರನ್ನು ನೇಮಿಸಲು ಸಮ್ಮತಿ ಇದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಹೈಕೋರ್ಟ್‌ಗೆ ತಿಳಿಸಿದರು.



ಬೆಂಗಳೂರಿನ ಸಂಜಯನಗರ ಠಾಣೆಯಲ್ಲಿ ದಾಖಲಾಗಿರುವ ಬೆದರಿಕೆ ಪ್ರಕರಣ ರದ್ದತಿ ಕೋರಿ ಎಚ್.ಡಿ ಕುಮಾರಸ್ವಾಮಿ, ಅವರ ಪುತ್ರ ನಿಖಿಲ್ ಹಾಗೂ ಜೆಡಿಎಸ್ ಮುಖಂಡ ಸುರೇಶ್ ಬಾಬು ಸಲ್ಲಿಸಿರುವ ಅರ್ಜಿಯನ್ನು ನ್ಯಾ. ಎಸ್.ಸುನೀಲ್ ದತ್ ಯಾದವ್ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು.

ಕುಮಾರಸ್ವಾಮಿ ಪರವಾಗಿ ಹಾಜರಾದ ಹಿರಿಯ ವಕೀಲ ಹಷ್ಮತ್ ಪಾಷಾ ಅವರು ಪ್ರಕರಣದಲ್ಲಿ ಮಧ್ಯಸ್ಥಿಕೆದಾರರನ್ನು ನೇಮಿಸುವುದಕ್ಕೆ ಕುಮಾರಸ್ವಾಮಿ ಒಪ್ಪಿದ್ದಾರೆ. ಆದರೆ, ಮಧ್ಯಸ್ಥಿಕೆದಾರರ ಮುಂದೆ ಚಂದ್ರಶೇಖರ್ ಅವರ ಎದುರು ಬದುರು ಕೂರಲು ಸಿದ್ಧರಿಲ್ಲ. ಮಧ್ಯಸ್ಥಿಕೆದಾರರು ಇಬ್ಬರ ಅಭಿಪ್ರಾಯ ಪಡೆಯಬಹುದು ಎಂದರು. ಐಪಿಎಸ್ ಚಂದ್ರಶೇಖರ್ ಪರ ವಕೀಲರು ಕುಮಾರಸ್ವಾಮಿ ಪ್ರಭಾವಿಯಾಗಿದ್ದಾರೆ. ಚಂದ್ರಶೇಖರ್ ಅಧಿಕಾರಿಯಷ್ಟೆ. ನ್ಯಾಯಾಲಯವು ನಮ್ಮ ಆತಂಕವನ್ನು ಪರಿಗಣಿಸಬೇಕು ಎಂದರು. ಆಗ ಪೀಠವು ಮಧ್ಯಸ್ಥಿಕೆದಾರರು ಯಾರಿರಬೇಕು ಎಂಬುದನ್ನು ನ್ಯಾಯಾಲಯ ನಿರ್ಧರಿಸಲಿದೆ. ಇಬ್ಬರಿಗೂ ಒಪ್ಪಿಗೆಯಾಗುವ ಮಧ್ಯಸ್ಥಿಕೆದಾರರನ್ನು ನೇಮಿಸಲಾಗುವುದು. ಮಧ್ಯಸ್ಥಿಕೆ ದಾರರನ್ನು ನೇಮಿಸುವ ಕೆಲಸವನ್ನು ನ್ಯಾಯಾಲಯಕ್ಕೆ ಬಿಡಿ. ಅಧಿಕಾರಿ ಚಂದ್ರಶೇಖರ್ ಅವರ ಆತಂಕದ ಬಗ್ಗೆ ಅರಿವಿದೆ ಎಂದಿತು.

ಒಂದು ಹಂತದಲ್ಲಿ ಪೀಠವು ಲಘು ದಾಟಿಯಲ್ಲಿ ವಕೀಲರ ಬಳಿಗೆ ಹೋಗುವುದಕ್ಕಿಂತ ಮಧ್ಯಸ್ಥಿಕೆದಾರರ ಬಳಿ ಹೋಗುವುದು ಹೆಚ್ಚು ಸೂಕ್ತ. ಮಧ್ಯಸ್ಥಿಕೆದಾರರ ನಡುವಿನ ಸಂಧಾನವೂ ವಿಫಲವಾದರೆ ನ್ಯಾಯಾಲಯ ಇದ್ದೇ ಇದೆ ಎಂದಿತು. ಅಲ್ಲದೇ, ದೂರುದಾರ ಚಂದ್ರಶೇಖರ್ ಅವರ ವಕೀಲರ ಕೋರಿಕೆಯಂತೆ ರಾಜ್ಯ ಹೆಚ್ಚುವರಿ ಸರ್ಕಾರಿ ಅಭಿಯೋಜಕ ಬಿ.ಎನ್. ಜಗದೀಶ್ ಅವರಿಗೆ ಚಂದ್ರಶೇಖರ್ ಜತೆ ಸಮಾಲೋಚಿಸುವಂತೆ ಸೂಚಿಸಿ, ವಿಚಾರಣೆಯನ್ನು ಏ.2ಕ್ಕೆ ಮುಂದೂಡಿತು.

ಪುಟ್ಟೇನಹಳ್ಳಿ ಠಾಣಾಧಿಕಾರಿ ವರ್ತನೆ ವಿರೋಧಿಸಿ ರಾಜ್ಯಪಾಲರಿಗೆ ಪತ್ರ

ಸಬ್ ಇನ್ಸ್‌ಪೆಕ್ಟರ್ ವಿರುದ್ಧ ಸಿಬ್ಬಂದಿ ಕಿಡಿ

• **ಬೆಂಗಳೂರು:** ಪುಟ್ಟೇನಹಳ್ಳಿ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಎಚ್.ಕೆ. ರವಿಕುಮಾರ್ ಅವರ ವಿರುದ್ಧ ಅದೇ ಠಾಣೆಯ ಸಬ್‌ಇನ್ಸ್‌ಪೆಕ್ಟರ್‌ಗಳು ಹಾಗೂ ಸಿಬ್ಬಂದಿ ರಾಜ್ಯಪಾಲರಿಗೆ ದೂರು ನೀಡಿದ್ದಾರೆ.

ಪಿಐ ರವಿಕುಮಾರ್ ಎಸಗುತ್ತಿದ್ದಾರೆನ್ನಲಾದ ಹತ್ತಾರು ಅಕ್ರಮಗಳು, ಹಫ್ತಾ ವಸೂಲಿ ಮತ್ತು ಸಿಬ್ಬಂದಿಗಳಿಗೆ ನೀಡುತ್ತಿರುವ ಕಿರುಕುಳದ ಬಗ್ಗೆ ಸುದೀರ್ಘ ಪಟ್ಟಿಯನ್ನೇ ಸಿದ್ಧಪಡಿಸಿರುವ ಸಿಬ್ಬಂದಿ, ರಾಜ್ಯಪಾಲರು ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಪತ್ರ ಬರೆದು ತನಿಖೆಗೆ ಒತ್ತಾಯಿಸಿದ್ದಾರೆ.

ಹಫ್ತಾ ದಂಧೆಯ ಆರೋಪ: ರವಿಕುಮಾರ್ ಕಳೆದ ಎರಡೂವರೆ ವರ್ಷಗಳಲ್ಲಿ ಸುಮಾರು 15 ಕೋಟಿ ರೂ.ಗೂ ಅಧಿಕ ಹಣವನ್ನು ಅಕ್ರಮವಾಗಿ ಸಂಪಾದಿಸಿದ್ದಾರೆ. ಪ್ರತಿ ತಿಂಗಳು ಬಾರ್, ಪಬ್, ಸ್ಪಾ, ಮಸಾಜ್ ಪಾರ್ಲರ್ ಹಾಗೂ ಬೀದಿ ಬದಿ ವ್ಯಾಪಾರಿಗಳಿಂದಲೇ ಸುಮಾರು 25 ಲಕ್ಷ ರೂ. ಹಫ್ತಾ ವಸೂಲಿ ಮಾಡುತ್ತಿದ್ದಾರೆ ಎಂಬ



ಗಂಭೀರ ಆರೋಪ ಕೇಳಿಬಂದಿದೆ. ಇದರ ಜತೆಗೆ ರೇಪ್ ಕೇಸ್, ವೀಸಾ ವೆರಿಫಿಕೇಶನ್ ಹಾಗೂ ವಂಚನೆ ಪ್ರಕರಣಗಳಲ್ಲಿ ಆರೋಪಿಗಳಿಂದ ಲಕ್ಷಾಂತರ ರೂಪಾಯಿ ಪಡೆದು ಪ್ರಕರಣಗಳನ್ನು ಮುಚ್ಚಿಹಾಕುತ್ತಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ರೌಡಿ ಶೀಟರ್‌ಗಳಿಗೆ ರಕ್ಷಣೆ: ರೌಡಿ ಪಟ್ಟಿಯಿಂದ ಹೆಸರು ತೆಗೆಯಲು ಒಬ್ಬೊಬ್ಬ ರೌಡಿ ಶೀಟರ್‌ನಿಂದ 20 ರಿಂದ 25 ಲಕ್ಷ ರೂ. ಬೇಡಿಕೆ ಇಟ್ಟಿರುವುದಲ್ಲದೆ, ಈಗಾಗಲೇ ಲಕ್ಷಾಂತರ ರೂಪಾಯಿ ಮುಂಗಡ ಪಡೆದಿದ್ದಾರೆ ಎನ್ನಲಾಗಿದೆ. ಮುಂದಿನ ಪೋಸ್ಟಿಂಗ್‌ಗಾಗಿ ಹಿರಿಯ ರಾಜಕೀಯ ನಾಯಕರ ಹೆಸರನ್ನು ಬಳಸಿಕೊಂಡು ಕೋಟ್ಯಂತರ ರೂಪಾಯಿ ವ್ಯವಹಾರ ನಡೆಸುತ್ತಿದ್ದಾರೆ.

ಸಿಬ್ಬಂದಿಗೆ ಕಿರುಕುಳ, ಲೋಕಾಯುಕ್ತ ತನಿಖೆಗೆ ಆಗ್ರಹ: ತಮ್ಮ ಅಕ್ರಮಗಳಿಗೆ ಸಹಕರಿಸದ ಕೆಳಹಂತದ ಸಿಬ್ಬಂದಿಗಳನ್ನು ಟಾರ್ಗೆಟ್ ಮಾಡಿ, ಅವರಿಗೆ ರಜೆ ನೀಡದೆ ಸತಾಯಿಸುವುದು ಮತ್ತು ಅನಗತ್ಯವಾಗಿ ಮಾನಸಿಕ ಒತ್ತಡ ಹೇರುವುದು ಇನ್ಸ್‌ಪೆಕ್ಟರ್ ಚಾಳಿಯಾಗಿದೆ. ಠಾಣೆಯಲ್ಲಿ ದಾಖಲಾಗುವ ಪ್ರತಿ ಎಫ್‌ಐಆರ್‌ಗೆ ದೂರುದಾರರಿಂದ ಹಣ ವಸೂಲಿ ಮಾಡುವಂತೆ ಪಿಐ ಒತ್ತಡ ಹೇರುತ್ತಿದ್ದಾರೆ ಎಂದು ಸಿಬ್ಬಂದಿ ಅಳಲು ತೋಡಿಕೊಂಡಿದ್ದಾರೆ.

ಈ ಕೂಡಲೇ ಅವರ ವಿರುದ್ಧ ಲೋಕಾಯುಕ್ತ ತನಿಖೆ ನಡೆಸಿ ಶಿಸ್ತುಕ್ರಮ ಕೈಗೊಳ್ಳಬೇಕು ಎಂದು ನೊಂದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಮುಖ್ಯಮಂತ್ರಿಗಳು, ಗೃಹ ಸಚಿವರು ಮತ್ತು ಡಿಜಿ-ಐಜಿಪಿ ಅವರಿಗೆ ಪತ್ರದ ಪ್ರತಿಗಳನ್ನು ರವಾನಿಸಿದ್ದಾರೆ.

ಇಂದು ನಗರದಲ್ಲಿ...

- ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ 2025-26 ನೇ ಸಾಲಿನ ಗೌರವ ಪ್ರಶಸ್ತಿ ಮತ್ತು ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ ಬಂಜಾರ ಸಾಂಸ್ಕೃತಿಕ ಉತ್ಸವ
- ಸ್ಥಳ: ರವೀಂದ್ರ ಕಲಾಕ್ಷೇತ್ರ
- ಮಧ್ಯಾಹ್ನ 2.30

- ಕರಗ ಮಹೋತ್ಸವ ಅಂಗವಾಗಿ ಶ್ರೀ ಮುನೇಶ್ವರ ಸ್ವಾಮಿ ದೇವಸ್ಥಾನ ಬಳಿ ಪೂಜೆ
- ಸ್ಥಳ: ಚಿಕ್ಕಪೇಟೆ ಮಧ್ಯಾಹ್ನ 12:30

- ವಿದ್ವಾನ್ ಕಲ್ಲಾಪುರ ಪವಮಾನಾ ಚಾರ್ಯರಿಂದ ರಾಮಾಯಣದ ಸಾರ ಕುರಿತಾಗಿ ಉಪನ್ಯಾಸ
- ಸ್ಥಳ: ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಿಮಂಡಳಿ
- ಸಂಜೆ 6.30

ವಿವಿಧ ಸಮಸ್ಯೆಗಳ ಪರಿಹರಿಸದ ಸರಕಾರ | ರೈತರ ಹೋರಾಟಕ್ಕೆ ದೊರೆಯದ ಪ್ರತಿಫಲ

ದರ ಏರಿಳಿತಕ್ಕೆ ತಂಬಾಕು ಬೆಳೆಗಾರ ಕಂಗಾಲು

▸ ಶಿವಣ್ಣ ಕೆ ಕೆರಿಕೋಡಿ

• **ಕೊಣನೂರು:** ರಾಮನಾಥಪುರದ ತಂಬಾಕು ಹರಾಜು ಮಾರುಕಟ್ಟೆಯಲ್ಲಿ ಕಳೆದ ವರ್ಷದಿಂದ ತಂಬಾಕಿನ ದರ ಏರಿಳಿತ ಕಾಣುತ್ತಿರುವುದಲ್ಲದೇ ರೈತರ ಹಲವು ಸಮಸ್ಯೆಯನ್ನು ಬಗೆಹರಿಸುವಲ್ಲಿ, ರಾಜಕೀಯ ನಾಯಕರು ವಿಫಲರಾಗಿದ್ದಾರೆ. ಕೊಣನೂರು, ಮತ್ತು ರಾಮನಾಥಪುರ ಹೋಬಳಿಯಲ್ಲಿ ತಂಬಾಕು ಪ್ರಮುಖ ಬೆಳೆಯಾಗಿದೆ. ಶೇ.80ರಷ್ಟು ರೈತರು ತಂಬಾಕು ಬೆಳೆಯುವರು. ತಂಬಾಕಿಗೆ ಉತ್ತಮ ಬೆಲೆ ಸಿಕ್ಕರೆ ಇಲ್ಲಿನ ವಾಣಿಜ್ಯ ಚಟುವಟಿಕೆಯೂ ಚುರುಕಾಗಿರುತ್ತದೆ.

ರಾಮನಾಥಪುರ ತಂಬಾಕು ಮಂಡಳಿ ವ್ಯಾಪ್ತಿಯಲ್ಲಿ ಸುಮಾರು 8000 ಮಂದಿ ಲೈಸೆನ್ಸ್ ಇರುವವರಿದ್ದಾರೆ. ಸುಮಾರು 5500 ಮಂದಿ ಕಾರ್ಡ್ ದಾರರು ಹಲವು ರೈತರು ತಂಬಾಕನ್ನು ಬೆಳೆದು ಲೈಸೆನ್ಸ್ ಬಳಕೆದಾರರಿದ್ದಾರೆ. ಕಾರ್ಡ್ ದಾರರ ಮೂಲಕ ಮಾರಾಟ ಮಾಡುತ್ತಾರೆ. ಪ್ರತಿವರ್ಷ ಮಂಡಳಿಯಲ್ಲಿ ಮಿಲಿಯನ್‌ಗಟ್ಟಲೆ ಸೊಪ್ಪು ಖರೀದಿಯಾಗಿ ಸಾವಿರಾರು ಕೋಟಿ ರೂ. ವ್ಯವಹಾರಿಯಾಗಿ ರೈತರಿಗೆ ಸಂಯಾಪ್ನಿಸೆ ಉಪಯೋಗ ದೊರೆ ಯುತ್ತಿಲ್ಲ ಎಂಬುದು ರೈತರ ವಾದವಾಗಿದೆ.



ಕಳೆದ 40 ವರ್ಷದಿಂದಲೂ ಬೆಲೆಯಲ್ಲಿ ಸ್ಥಿರತೆ ಇಲ್ಲ

ಸುಮಾರು 40ವರ್ಷದಿಂದ ಈ ಭಾಗದ ರೈತರು ತಂಬಾಕು ಬೆಳೆಯುತ್ತಾರೆ. ತಂಬಾಕಿನಿಂದ ತಯಾರಾಗುವ ಉತ್ಪನ್ನಗಳ ಮಾರಾಟದಿಂದ ಕೇಂದ್ರ ಸರಕಾರಕ್ಕೆ ವಿದೇಶಿ ವಿನಿಮಯ ಮತ್ತು ಮಾರಾಟ ತೆರಿಗೆಯಿಂದಲೇ 45 ಸಾವಿರ ಕೋಟಿ ರೂ. ಆದಾಯವಿದ್ದರೂ ಬೆಳೆಗಾರರಿಗೆ ಯಾವುದೇ ಬೆಲೆ ಸ್ಥಿರತೆ ಇಲ್ಲ, ಕರ್ನಾಟಕದಲ್ಲಿ ಕೇವಲ ಗುಣಮಟ್ಟದ ಹೊಗೆಸೊಪ್ಪು ಮಾರಾಟ ಮಾಡಿಸುತ್ತಾ ಕೆಳಮಟ್ಟದ ಹೊಗೆಸೊಪ್ಪು ಖರೀದಿ ಮಾಡದೆ ವರ್ತಕರಿಗೆ ಅನುಕೂಲವಾಗುವಂತೆ ಮಂಡಳಿ ನಡೆದುಕೊಳ್ಳುತ್ತಿದೆ ಎಂಬ ಆರೋಪ ಕೂಡ ಇದೆ.

> ರಾಜಕೀಯಕ್ಕಾಗಿ ಜನಪ್ರತಿನಿಧಿಗಳು ತಂಬಾಕು ಮಂಡಳಿಯನ್ನು, ರೈತರನ್ನು ಬಳಸಿಕೊಳ್ಳದೇ ಪಕ್ಷಾತೀತವಾಗಿ ನ್ಯಾಯ ದೊರಕಿಸಿಕೊಡಬೇಕು. ಹಲವು ವರ್ಷದಿಂದ ತಂಬಾಕು ಬೆಳೆಗಾರರು ತೀವ್ರ ಸಂಕಷ್ಟದಲ್ಲಿದ್ದಾರೆ. ಬೆಳೆಗಾರರ ನೆರವಿಗೆ ಸರಕಾರ ಬರಬೇಕು. ರಾಜಕೀಯ ಪಕ್ಷಗಳ ನಾಯಕರು ಕೇವಲ ಭರವಸೆ ನೀಡಿ ಹೋಗಬಾರದು.
>
> ■ ಗಣೇಶ್ , ತಂಬಾಕು ಬೆಳೆಗಾರ

> ಇಂದಿನ ಮಾರುಕಟ್ಟೆಯಲ್ಲಿನ ಬೆಲೆಯನ್ನು ಕಂಡರೆ ಭಯವಾಗುತ್ತಿದೆ. ಮಂಡಳಿ, ಕೇಂದ್ರ ಸರಕಾರ ನೆರವಿಗೆ ಬಂದಂತೆ ಕಾಣುತ್ತಿಲ್ಲ, ರೈತರ ಶೋಷಣೆ ಪ್ರತಿವರ್ಷವೂ ನಡೆಯುತ್ತಿದೆ. ಹವಾಮಾನ ವೈಪರೀತ್ಯ ಹಾಗೂ ಕೂಲಿ ಕಾರ್ಮಿಕರ ಸಮಸ್ಯೆ ಎದುರಿಸಿ ಬೆಳೆ ಬೆಳೆಯುತ್ತಿದ್ದೇವೆ. ಉತ್ತಮ ದರ ದೊರಕಿದರೆ ಮಾತ್ರ ಲಾಭ ಕಾಣಬಹುದು.
>
> ■ ಸೀಬಳ್ಳಿ ಯೋಗಣ್ಣ, ರೈತ ಮುಖಂಡ

ಕೆಳಹಂತದ ಹೊಗೆಸೊಪ್ಪು

ತಂಬಾಕು ಬೆಳೆ ಖರೀದಿಗಾಗಿ ವಿವಿಧ ಯೋಜನೆಯನ್ನು ಸರಕಾರ ಜಾರಿಗೆತರಬೇಕಿದೆ. ಆಂಧ್ರಪ್ರದೇಶದಂತೆ ಕರ್ನಾಟಕದಲ್ಲೂ ಸರಾಸರಿ ಬೆಲೆ, ಹೊಗೆಸೊಪ್ಪು ಮಾರಾಟಕ್ಕೆ ವಿಧಿಸುವ ಮಾರಾಟ ತೆರಿಗೆ ಮತ್ತು ಜಿಎಸ್‌ಟಿಯಿಂದ ವಿನಾಯಿತಿ. ಮೃತ ತಂಬಾಕು ಬೆಳೆಗಾರರಿಗೆ ಕ್ಷೇಮಾಭಿವೃದ್ಧಿ ನಿಧಿಯಿಂದ 5 ಲಕ್ಷ ರೂ. ಪರಿಹಾರ ನೀಡಬೇಕು. ಪ್ರಧಾನ ಮಂತ್ರಿ ಫಸಲ್ ಭೀಮಾ ಬೆಳೆಗೆ ಹೊಗೆಸೊಪ್ಪು ಜಾರಿಯಾಗಬೇಕು. ಎಲ್ಲಾ ಗ್ರೇಡ್ ಗಳನ್ನು ಏಕಕಾಲದಲ್ಲಿ ಮಾರಾಟಕ್ಕೆ ಅವಕಾಶ ನೀಡಬೇಕು. ಅನಧಿಕೃತ ಬೆಳೆಗಾರರನ್ನು ಅಧಿಕೃತ ಬೆಳೆಗಾರರೆಂದು ಪರಿಗಣಿಸಿ ಅವರಿಗೂ ಬಿಡೆಯಲ್ಲಿಯೇ ತಂಬಾಕು ಮಾರಾಟಕ್ಕೆ ಅವಕಾಶ ಕೊಡಬೇಕು ಎಂದು ರೈತರು ಹಲವು ಬಾರಿ ಪ್ರತಿಭಟನೆ ನಡೆಸಿದ್ದಾರೆ. ಆದರೆ ಈವರೆಗೂ ಬೇಡಿಕೆ ಈಡೇರಿ ಎಂದು ರೈತರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕಿರುಸುದ್ದಿ

ಟಿಪ್ಪರ್ ಡಿಕ್ಕಿ : ಇಬ್ಬರು ಕಾರ್ಮಿಕರ ಸಾವು

• **ವಿಜಯಪುರ:** ಓವರ್ ಟೇಕ್ ಮಾಡಲು ಹೋಗಿ ಚಲಿಸುತ್ತಿದ್ದ ಟಿಪ್ಪರ್ ವಾಹನಕ್ಕೆ ಹಿಂದಿನಿಂದ ಕೋಳಿ ತುಂಬಿದ ಈಚರ್ ವಾಹನ ಡಿಕ್ಕಿಯಾಗಿ ಇಬ್ಬರು ಕಾರ್ಮಿಕರು ಸ್ಥಳದಲ್ಲಿಯೇ ಮೃತಪಟ್ಟಿರುವ ಘಟನೆ ಚಿಕ್ಕಬಳ್ಳಾಪುರ-ದೇವನಹಳ್ಳಿ ರಾಷ್ಟ್ರೀಯ ಹೆದ್ದಾರಿ-44 ಅವತಿ ಗ್ರಾಮದ ಬಳಿ ಬುಧವಾರ ಬೆಳಗಿನ ಜಾವ ನಡೆದಿದೆ. ಮಣಿಪುರ ರಾಜ್ಯದ ಕ್ವಾಕ್ತಾ ಗ್ರಾಮದ ಹಾಲಿ, ಬೆಂಗಳೂರಿನ ವೈಟ್ ಫೀಲ್ಡ್ ನಿವಾಸಿ ಸಾಕಿಬ್ (26) ಮೃತ ಕಾರ್ಮಿಕರು. ಅಪಘಾತದಲ್ಲಿ ಮಣಿಪುರ ರಾಜ್ಯದ ಕ್ವಾಕ್ತಾ ಗ್ರಾಮದ ಕಾರ್ಮಿಕ ಮುಜಾ (26) ಮತ್ತು ಹೊಸಕೋಟೆಯ ಅಂದೇನಹಳ್ಳಿ ಗ್ರಾಮದ ವಾಹನ ಚಾಲಕ ಮಂಜುನಾಥ್ (30) ಗಾಯಗೊಂಡಿದ್ದಾರೆ. ದೇವನಹಳ್ಳಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕೋಳಿ ತುಂಬಿದ ವಾಹನ ಚಲಾಯಿಸುತ್ತಿದ್ದ ಚಾಲಕ ಮಂಜುನಾಥ್ ಅತಿವೇಗ ಹಾಗೂ ಅಜಾಗರೂಕತೆಯಿಂದ ಅಪಘಾತ ಸಂಭವಿಸಿದೆ ಎಂದು ತಿಳಿದು ಬಂದಿದೆ. ಸ್ಥಳಕ್ಕೆ ಎಸ್ಪಿರ ಚಂದ್ರಕಾಂತ್, ಎಎಸ್ಪಿ ವೆಂಕಟೇಶ್ ಪ್ರಸಾದ್, ಡಿವೈಎಸ್ಪಿ ಪಾಂಡುರಂಗ, ವಿಜಯಪುರ ಇನ್ಸ್‌ಪೆಕ್ಟರ್ ಪ್ರಶಾಂತ್ ಎಸ್. ನಾಯಕ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ವಿಜಯಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಾಲಬಾಧೆಗೆ ರೈತ ಆತ್ಮಹತ್ಯೆ

• **ಕೊರಟಗೆರೆ:** ಸಾಲ ಬಾಧೆ ತಾಳಲಾರದೆ ರೈತನೋರ್ವ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕು ಜೋನಿಗರಹಳ್ಳಿಯಲ್ಲಿ ಗುರುವಾರ ನಡೆದಿದೆ. ತಾಲೂಕಿನ ಚನ್ನರಾಯನದುರ್ಗ ಹೋಬಳಿಯ ಕುರಂಕೋಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜೋನಿಗರಹಳ್ಳಿ ಗ್ರಾಮದ ರಮೇಶ್ ಬಿನ್ ನರಸಿಂಹಯ್ಯ (49)ಮೃತಪಟ್ಟ ರೈತ.



ವ್ಯವಸಾಯದ ಜತೆಗೆ ಹೈನುಗಾರಿಕೆ ಮಾಡಲು ಮೈಕ್ರೋ ಫೈನಾನ್ಸ್‌ನಲ್ಲಿ ಸುಮಾರು 8ಲಕ್ಷ ರೂ. ಸಾಲ ಮಾಡಿದ್ದರು ಎಂದು ರಮೇಶ್ ಪತ್ನಿ ರಾಜಮ್ಮ ತಿಳಿಸಿದ್ದಾರೆ. ಮೂರ್ನಾಲ್ಕು ವರ್ಷದಿಂದ ತನ್ನ ಹಾಗೂ ತನ್ನ ಪತ್ನಿಯ ಹೆಸರಿನಲ್ಲಿ ಸ್ಥಳೀಯ ಸಂಘಗಳು ಮತ್ತು ವಿವಿಧ ಖಾಸಗಿ ಫೈನಾನ್ಸ್ ಸಂಸ್ಥೆಗಳಲ್ಲಿ 5.90 ಲಕ್ಷ ರೂ.ನಷ್ಟು ಸಾಲ ಪಡೆದು ಸುಮಾರು 20 ಹಸು ಸಾಕುತ್ತಿದ್ದರು. ಹೈನುಗಾರಿಕೆಯನ್ನೇ ನಂಬಿಕೊಂಡು ಜೀವನ ಸಾಗಿಸುತ್ತಿದ್ದ ರೈತ ರಮೇಶ್ ಆತ್ಮಹತ್ಯೆಗೆ ಶರಣಾಗಿದ್ದಾರೆ. ಸುಮಾರು 15 ಹಸುಗಳು ಮಾರಣಾಂತಿಕ ಕಾಯಿಲೆ ಮತ್ತು ರೋಗದಿಂದ ಸಾವನ್ನಪ್ಪಿದ್ದವು. ಈ ಕಾರಣದಿಂದ ಸಾಲದ ಕಂತು ಕಟ್ಟಲಾಗದೆ ಬಹಳ ತೊಂದರೆಯಾಯಿತು ಎಂದು ತಿಳಿಸಿದ್ದಾರೆ. ಹೆಚ್ಚು ಸಾಲ ಮಾಡಿಕೊಂಡು ಬಡ್ಡಿ ಮತ್ತು ಅಸಲು ತೀರಿಸಲಾಗದೇ ಮನನೊಂದಿದ್ದ ರೈತ ರಮೇಶ್ ಹುಣಸೆ ಹಣ್ಣು ವ್ಯಾಪಾರಕ್ಕೆ ಹೋಗಿ ಬರುತ್ತೇನೆಂದು ಹೇಳಿ ಹೋಗಿದ್ದ ರಮೇಶ್ ಮರಳಿ ಮನೆಗೆ ಬಂದಿರಲಿಲ್ಲ, ದೂರವಾಣಿ ಕರೆ ಮಾಡಿದಾಗ ಮೊಬೈಲ್ ಸ್ವಿಚ್ ಆಫ್ ಆಗಿರುವುದು ತಿಳಿದುಬಂದಿದೆ. ವಿಪರೀತ ಸಾಲ ಮಾಡಿಕೊಂಡು ಜೀವನದಲ್ಲಿ ಜಿಗುಪ್ಸೆ ಹೊಂದಿದ್ದ ರೈತ ರಮೇಶ್ ಜೋನಿಗರಹಳ್ಳಿ ಗ್ರಾಮದ ಬಳಿ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ವಿಷಯ ಗುರುವಾರ ಬೆಳಗ್ಗೆ ಕುಟುಂಬಸ್ಥರಿಗೆ ತಿಳಿದಿದೆ. ವಿಷಯ ತಿಳಿದ ತಕ್ಷಣವೇ ಕೊರಟಗೆರೆ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ಮಾಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ನಂತರ ಮರಣೋತ್ತರ ಪರೀಕ್ಷೆಗೆ ಮೃತ ದೇಹವನ್ನು ಕೊರಟಗೆರೆ ಸಾರ್ವಜನಿಕ ಆಸ್ಪತ್ರೆಗೆ ರವಾನೆ ಮಾಡಲಾಗಿದೆ.

ಬಾಗಿಲು ಮುರಿದು ಕಳವು: ಚಿನ್ನಾಭರಣ ವಶ

• **ಬೆಂಗಳೂರು:** ಮನೆಯ ಕಿಟಕಿ ಬಾಗಿಲು ಮುರಿದು ಒಳನುಗ್ಗಿ ಹಣ ಮತ್ತು ಚಿನ್ನಾಭರಣ ಕಳವು ಮಾಡಿದ್ದ ಕಾರ್ಪೆಂಟರ್‌ನನ್ನು ಸಂಪಿಗೆಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಬಂಧಿತನಿಂದ 3.20 ಲಕ್ಷ ರೂ. ಮೌಲ್ಯದ 23 ಗ್ರಾಂ ಚಿನ್ನಾಭರಣವನ್ನು ವಶಪಡಿಸಿಕೊಂಡಿದ್ದಾರೆ. ಥಣಿಸಂದ್ರದ ರಾಚೇನಹಳ್ಳಿ ನಿವಾಸಿಯೊಬ್ಬರು ಕಳೆದ ಮಾ.25 ರಂದು ಮಧ್ಯಾಹ್ನ ಮನೆಗೆ ಬೀಗ ಹಾಕಿಕೊಂಡು ಹೊರಗೆ ಹೋಗಿದ್ದರು. ರಾತ್ರಿ ವಾಪಸ್ ಬಂದಾಗ ಮನೆಯ ಕಿಟಕಿ ಬಾಗಿಲು ಮುರಿದಿರುವುದು ಕಂಡುಬಂದಿದೆ. ಒಳಗೆ ಹೋಗಿ ನೋಡಿದಾಗ ಬೀರುವಿನಲ್ಲಿದ್ದ ಚಿನ್ನಾಭರಣಗಳು ಹಾಗೂ 1.60 ಲಕ್ಷ ರೂ. ನಗದು ಕಳುವಾಗಿರುವುದು ಬೆಳಕಿಗೆ ಬಂದಿದೆ. ಈ ಬಗ್ಗೆ ಸಂಪಿಗೆಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಮನೆಯ ಮಾಲೀಕರು ತಮ್ಮ ಮನೆಯಲ್ಲಿ ಕಾರ್ಪೆಂಟರ್ ಕೆಲಸ ಮಾಡಿಕೊಂಡಿದ್ದ ವ್ಯಕ್ತಿಯ ಮೇಲೆ ಅನುಮಾನ ವ್ಯಕ್ತಪಡಿಸಿದ್ದರು. ಈ ಸುಳಿವಿನ ಆಧಾರದ ಮೇಲೆ ತನಿಖೆ ಕೈಗೊಂಡ ಇನ್ಸ್‌ಪೆಕ್ಟರ್ ವೆಂಕಟೇಶ್ ಮತ್ತು ಅವರ ತಂಡವು ಥಣಿಸಂದ್ರ ಸರ್ಕಾರಿ ಶಾಲೆ ಬಳಿ ಆರೋಪಿಯನ್ನು ವಶಕ್ಕೆ ಪಡೆದರು. ವಿಚಾರಣೆಯ ವೇಳೆ ಆರೋಪಿಯು ತಾನೇ ಮನೆಗಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ. ಪೊಲೀಸರು ಸಾರಾಯಿಪಾಳ್ಯದಲ್ಲಿರುವ ಆತನ ಮನೆಯಲ್ಲಿ ಬಚ್ಚಿಟ್ಟಿದ್ದ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

ಎಂಪಿಸಿಎಸ್‌ಗೆ ಅವಿರೋಧ ಆಯ್ಕೆ



• **ತಾವರೆಕೆರೆ:** ಹೊಸಕೋಟೆ ತಾಲೂಕಿನ ನಂದಗುಡಿ ಹೋಬಳಿಯ ಚೊಕ್ಕಸಂದ್ರ ಎಂಪಿಸಿಎಸ್‌ಗೆ ಕಾಂಗ್ರೆಸ್ ಬೆಂಬಲಿತ ನೂತನ ಅಧ್ಯಕ್ಷರಾಗಿ ಅಪ್ಪಣ್ಣ, ಉಪಾಧ್ಯಕ್ಷರಾಗಿ ಎಂ.ರಮೇಶ್ ಅವಿರೋಧ ಆಯ್ಕೆಯಾಗಿದ್ದಾರೆ.

ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಬಿ.ವಿ. ರಾಜಶೇಖರಗೌಡ ಮಾತನಾಡಿ, ಎಲ್ಲ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಂಘವನ್ನು ಪ್ರಗತಿಯತ್ತಕೊಂಡಯ್ಯಬೇಕು. ಬಮೂಲ್‌ಗೆ ಪೌಷ್ಟಿಕಾಂಶ ಭರಿತ ಹಾಲು ಪೂರೈಸುವಲ್ಲಿ ಹೆಚ್ಚಿನ ಕಾಳಜಿ ವಹಿಸಬೇಕು ಎಂದರು. ನೂತನ ನಿರ್ದೇಶಕರಾದ ಎನ್. ಮುನೇಗೌಡ, ಚಿನ್ನಪ್ಪ, ನಾಗರಾಜ್, ಸೀನಪ್ಪ, ವೆಂಕಟೇಶ್, ವೆಂಕಟಾಚಲಯ್ಯ, ರತ್ನಮ್ಮ, ಆಶಾ, ಸರಸ್ವತಮ್ಮ, ಕಾರ್ಯದರ್ಶಿ ಚನ್ನರಾಯಪ್ಪ, ಮುಖಂಡರಾದ ಮೋಹನ್ಮ ಮುನಿಸ್ವಾಮಯ್ಯ, ದೇವರಾಜ್, ಮೋಹನ್, ಮುನಿತಿಪ್ಪಯ್ಯ, ಹಾಲು ಪರೀಕ್ಷಕ ಮುನಿಯಪ್ಪ, ಸಿಬ್ಬಂದಿ ಹಾಗೂ ಗ್ರಾಮಸ್ಥರಿದ್ದರು.

ಶ್ರೀಕ್ಷೇತ್ರ ಘಾಟಿ ಸುಬ್ರಹ್ಮಣ್ಯ: ₹39.49,549 ಕಾಣಿಕೆ ಸಂಗ್ರಹ

• **ದೊಡ್ಡಬಳ್ಳಾಪುರ:** ತಾಲೂಕಿನ ಇತಿಹಾಸ ಪ್ರಸಿದ್ಧ ಶ್ರೀ ಕ್ಷೇತ್ರ ಘಾಟಿ ಸುಬ್ರಹ್ಮಣ್ಯ ದೇವಸ್ಥಾನದ ಹುಂಡಿಯಲ್ಲಿ 39.49,549 ರೂಪಾಯಿ ಕಾಣಿಕೆ ಸಂಗ್ರಹವಾಗಿದೆ. ಗುರುವಾರ ನಡೆದ ಹುಂಡಿಯಲ್ಲಿ ಸಂಗ್ರಹವಾಗಿದ್ದ ಕಾಣಿಕೆ ಹಣವನ್ನು ಎಣಿಕೆ ಮಾಡಲಾಯಿತು. ಹುಂಡಿ 39.49,549 ನಗದು, 04 ಗ್ರಾಂ ಚಿನ್ನ, 830 ಗ್ರಾಂ ಬೆಳ್ಳಿ ಸಂಗ್ರಹ ಆಗಿದೆ. ಹುಂಡಿ ಎಣಿಕೆ ಕಾರ್ಯದಲ್ಲಿ ದೇವಾಲಯದ ಕಾರ್ಯದರ್ಶಿ ಹಾಗೂ ಉಪ ಆಯುಕ್ತ ಪಿ. ದಿನೇಶ್, ದೇವಾಲಯದ ಉಪ ಕಾರ್ಯದರ್ಶಿ ಜಿ.ಜೆ .ಹೇಮಾವತಿ, ಪ್ರಧಾನ ಅರ್ಚಕ ಗುರುರಾಜ್ ಶರ್ಮ, ಸೂಪರ್ ಡೆಂಟ್ ಪ್ರಮೋದ್ ಇದ್ದರು.



ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಕೌಶಲಾಧಾರಿತ ತರಬೇತಿ ಪೂರಕ



• **ಕೋಲಾರ:** ಎಸ್ಸೆಸ್ಸೆಲ್ಸಿ ಮುಗಿದ ನಂತರ ನಿಮ್ಮ ಶೈಕ್ಷಣಿಕ ಭವಿಷ್ಯದ ಜತೆಗೆ ಬದುಕು ಕಟ್ಟಿಕೊಳ್ಳುವ ಕೌಶಲ್ಯಾಧಾರಿತ ಜಿಟಿಟಿಸಿ, ಐಟಿಐ, ಡಿಪ್ಲೊಮಾ, ಅರೆ ವೈದ್ಯಕೀಯ ಕೋರ್ಸ್‌ಗಳ ಕಲಿಕೆ ಮೂಲಕ ಬದುಕು ಕಟ್ಟಿಕೊಳ್ಳಲು ಮುಂದಾಗಿ ಎಂದು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಪ್ರಾಂಶುಪಾಲ ಹಾಗೂ ಶಾಲಾ ಶಿಕ್ಷಣ ಇಲಾಖೆ ಅಭಿವೃದ್ಧಿ ಉಪನಿರ್ದೇಶಕ ಕೃಷ್ಣಮೂರ್ತಿ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ನಗರದ ಟಿ.ಚನ್ನಯ್ಯ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಪಂ, ಕೋಲಾರ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಡಯಟ್, ಜಿಲ್ಲಾ ವೃತ್ತಿಪರ ಮತ್ತು ವೃತ್ತಿ ಮಾರ್ಗದರ್ಶನ ಘಟಕ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ವೃತ್ತಿಶಿಕ್ಷಣ ವಸ್ತುಪ್ರದರ್ಶನ ಮತ್ತು ಕೆರಿಯರ್ ಮೇಳ-2026ಕ್ಕೆ ಚಾಲನೆ ನೀಡಿ ಅವರು ಮಾತನಾಡಿ, ಎಸ್ಸೆಸ್ಸೆಲ್ಸಿ ಮುಗಿದ ನಂತರ ಮುಂದೇನು ಎಂಬ ಪ್ರಶ್ನೆ ಕಾಡುವುದು ಸಹಜ, ವೈದ್ಯಕೀಯ, ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ಮಾತ್ರ ಪ್ರಾಧಾನ್ಯತೆಯಲ್ಲ ಮತ್ತು ಅದು ಕಲಿಕಾ ಸಾಧನೆಯಲ್ಲಿನ ಎಲ್ಲಾ ಹಂತದ ವಿದ್ಯಾರ್ಥಿಗಳಿಗೂ ಎಟುಕುವುದು ಇಲ್ಲ ಎಂಬುದು ಸತ್ಯವಾಗಿದ್ದು, ವಿದ್ಯಾರ್ಥಿಗಳು ಕೌಶಲ್ಯಾಭಿವೃದ್ಧಿ ಶಿಕ್ಷಣದ ಜತೆಗೆ ಬದುಕು ಕಟ್ಟಿಕೊಳ್ಳುವ ಕಡೆ ಆಲೋಚಿಸುವುದು ಸೂಕ್ತ ಎಂದರು.

ಎಸ್ಸೆಸ್ಸೆಲ್ಸಿ ಶೇ.95ಕ್ಕೂ ಹೆಚ್ಚಿನ ಫಲಿತಾಂಶದ ನಿರೀಕ್ಷೆ ಇದೆ. ಎಸ್ಸೆಸ್ಸೆಲ್ಸಿ ನಂತರ ಮುಂದೇನು ಎಂಬುದರ ಕುರಿತು ಇರುವ ಗೊಂದಲ ನಿವಾರಣೆಗೆ ಇಂತಹ ವಸ್ತುಪ್ರದರ್ಶನಗಳು ಮತ್ತು ಕೆರಿಯರ್ ಮೇಳಗಳು ಸಹಕಾರಿಯಾಗಿವೆ ಎಂದರು. ಜಿಲ್ಲಾ ಕೌಶಲಾಭಿವೃದ್ಧಿ ಅಧಿಕಾರಿ ಕೆ.ಶ್ರೀನಿವಾಸ್ ಮಾತನಾಡಿ, ರಾಜ್ಯ ಸರ್ಕಾರ ಜಿಲ್ಲೆಯ ಹಲವು ಐಟಿಐಗಳಲ್ಲಿ 'ಟಾಟಾ ಉದ್ಯೋಗ' ಯೋಜನೆ ಜಾರಿಗೆ ತಂದಿದೆ. ಇದರಲ್ಲಿ ಪ್ರಸ್ತುತ ಉದ್ಯೋಗಕ್ಕೆ ಅಗತ್ಯವಿರುವ ಕೌಶಲ ಪಡೆಯಲು ಅಗತ್ಯ ಕೋರ್ಸ್ ಆರಂಭಿಸಲಾಗಿದೆ ಎಂದರು. ಕೆರಿಯರ್ ಗೈಡೆನ್ಸ್‌ನ ಡಾ.ಶ್ರೀನಿವಾಸ್ ಮಾತನಾಡಿ, ಕೋಲಾರ ಜಿಲ್ಲೆಯಲ್ಲಿ 07 ಸರ್ಕಾರಿ ಐಟಿಐಗಳು, 06 ಅನುದಾನಿತ ಸೇರಿ 37 ಐಟಿಐ ಹಾಗೂ ಜಿಲ್ಲಾ ಕೇಂದ್ರದಲ್ಲಿ ಜಿಟಿಟಿಸಿ ತರಬೇತಿ ಸಂಸ್ಥೆಯಿದ್ದು ಹಲವಾರು ವೃತ್ತಿ ಕೌಶಲವನ್ನು ಬೋಧಿಸಲಾಗುತ್ತಿದೆ. ತರಬೇತಿ ಮುಗಿದ ನಂತರ ಎಲ್ಲಾ ಅಭ್ಯರ್ಥಿಗಳಿಗೂ ಉದ್ಯೋಗ ಅವಕಾಶ ಲಭ್ಯವಿದೆಂದರು. ಡಯಟ್ ಉಪನ್ಯಾಸಕ ಡಾ.ನಾರಾಯಣಸ್ವಾಮಿ, ಹಿರಿಯ ಉಪನಿರ್ದೇಶಕ ರಾಜಶೇಖರ್ ಪಟ್ಟಣಶೆಟ್ಟಿ, ಶಿಕ್ಷಣಾಧಿಕಾರಿ ಡಾ.ಎಸ್.ಆರ್.ವೀಣಾ, ಡಿವೈಪಿಸಿಗಳಾದ ರಾಜೇಶ್ವರಿ, ನಸೀದ್‌ಫಾತಿಮಾ, ಜಿಲ್ಲಾ ಗ್ರಂಥಾಲಯಾಧಿಕಾರಿ ಗಣೇಶ್, ಐಟಿಐ ಪ್ರಾಂಶುಪಾಲ ಗೋಪಾಲ್,ವೆಂಕಟೇಶ್, ಪ್ರಾಂಶುಪಾಲ ಸುಬ್ರಮಣಿ, ಡಯಟ್ ಉಪ ಪ್ರಾಂಶುಪಾಲ ನಂಜುಂಡಯ್ಯ, ನಾಗರಾಜ್, ಬಿಆರ್‌ಪಿ ರಶ್ಮಿ ಮತ್ತಿತರರು ಉಪಸ್ಥಿತರಿದ್ದು,ಸಿಆರ್‌ಪಿ ಸುರೇಶ್ ನಿರೂಪಿಸಿ ನಡೆಸಿಕೊಟ್ಟರು.

ವಿಜೃಂಭಣೆಯ ತಿಮ್ಮರಾಯಸ್ವಾಮಿ ರಥೋತ್ಸವ

• **ಆನೇಕಲ್:** ಪಟ್ಟಣದ ಶ್ರೀ ತಿಮ್ಮರಾಯಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು. ಉರಿಬಿಸಿಲಿನಲ್ಲಿಯೂ ಭಕ್ತರು ಉತ್ಸಾಹದಿಂದ ರಥವನ್ನು ಎಳೆದು ಭಕ್ತಿ, ಭಾವ ಮೆರೆದರು. ಸುತ್ತಮುತ್ತಲಿನ ಗ್ರಾಮಗಳ ಭಕ್ತರು ವೈಭವದ ಜಾತ್ರೆಗೆ ಸಾಕ್ಷಿಯಾದರು.

ತಿಮ್ಮರಾಯಸ್ವಾಮಿ ಉತ್ಸವ ಮೂರ್ತಿಗೆ ದೇವಾಲಯದ ಪ್ರಧಾನ ಅರ್ಚಕ ಕೆ.ರಾಮಚಂದ್ರ ಭಟ್ಟ ಅವರು ಪೂಜೆ ಸಲ್ಲಿಸಿದ ನಂತರ ರಥದಲ್ಲಿ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು. ಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪಿಸುತ್ತಿದ್ದಂತೆ ನೆರೆದಿದ್ದ ಅಪಾರ ಸಂಖ್ಯೆಯ ಭಕ್ತ ಜನಸಾಗರ ಗೋವಿಂದ..ಗೋವಿಂದ ಎಂದು ಜಯಘೋಷ ಮಾಡಿ ದವನ ಚುಚ್ಚಿದ ಬಾಳೆಹಣ್ಣನ್ನು ತೇರಿಗೆ ಅರ್ಪಿಸಿ ಇಷ್ಟಾರ್ಥ ಸಿದ್ದಿಗೆ ಪ್ರಾರ್ಥಿಸಿದರು.

ಸುಮಾರು 200 ವರ್ಷದ ಹಳೆಯದು ಅಂದರೆ 1896 ರಲ್ಲಿ ಕೆತ್ತನೆಗೊಂಡಿರುವ ಆರು ಅಡಿ ಎತ್ತರದ ಕಲ್ಲಿನ ಚಿತ್ರದ ತೇರನ್ನು ಭಕ್ತರು ಕಬ್ಬಿಣದ ಸರಪಳಿ ಮತ್ತು ಹಗ್ಗಗಳಿಂದ ಎಳೆದು ದೇವಾಲಯದ ಮುಂಭಾಗಕ್ಕೆ ತಂದರು. ರಥೋತ್ಸವದ ಅಂಗವಾಗಿ ತಿಮ್ಮರಾಯಸ್ವಾಮಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು. ದೇವಾಲಯ ವಿಶೇಷ ಹೂವುಗಳಿಂದ ಕಂಗೊಳಿಸುತ್ತಿತ್ತು. ದೇವಾಲಯದ ಆವರಣದಲ್ಲಿ ಭಕ್ತರ ದಂಡು ಜಮಾಯಿಸಿತ್ತು. ತಾಲೂಕು, ತಮಿಳುನಾಡಿನ ಹೊಸೂರು, ಥಳಿ, ಬಾಗಲೂರು ಸೇರಿದಂತೆ ವಿವಿಧೆಡೆಯಿಂದ ಸಾವಿರಾರು ಭಕ್ತರು ಉತ್ಸವದಲ್ಲಿ ಪಾಲ್ಗೊಂಡಿದ್ದರು.

ವಿಶೇಷವಾಗಿ ಒಡಿಶಾದ ಪುರಿ ಜಗನ್ನಾಥ ಸ್ವಾಮಿಯ ವಿಶ್ವ ವಿಖ್ಯಾತ ರಥೋತ್ಸವ ನಡೆಯುತ್ತೆ. ಆ ದೇವಾಲಯದ ಮೇಲೆ ಪ್ರತಿದಿನ ಹಾರುತ್ತಿದಂತಹ ಬಾವುಟವನ್ನು, ಆನೇಕಲ್ ಶ್ರೀ ತಿಮ್ಮರಾಯಸ್ವಾಮಿ ಬ್ರಹ್ಮರಥೋತ್ಸವದ ಅಂಗವಾಗಿ ಅಲ್ಲಿಂದ ತರಿಸಿ.

ಆ ಬಾವುಟವನ್ನು ದೇವಾಲಯದ ರಾಜಗೋಪುರದ ಮೇಲೆ ಹಾಗೂ ತೇರಿನ ಮೇಲೆ ಕಟ್ಟಲಾಗಿದೆ. ದೇವಾಲಯದ ಗೋಪುರದ ಮೇಲೆ ಹಾರುತ್ತಿದ್ದ ಬಾವುಟವನ್ನು ಭಕ್ತಾದಿಗಳು ಕಣ್ಣು ತುಂಬಿಕೊಂಡರು. ಆನೇಕಲ್-ಹೊಸೂರು ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಾಗಿತ್ತು. ರಥೋತ್ಸವದ ಪ್ರಯುಕ್ತ ಪೊಲೀಸರು ಬಿಗಿ ಬಂದೋಬಸ್ತ್ ಏರ್ಪಡಿಸಿದ್ದರು.



▸▸ ಅಪಾರ ಸಂಖ್ಯೆಯಲ್ಲಿ ಭಕ್ತರು ಭಾಗಿ, ಪೊಲೀಸ್ ಬಂದೋಬಸ್ತ್

ಕೈವಾರ ತಾತಯ್ಯರ ಆದರ್ಶ ಮಾದರಿ

• **ದೇವನಹಳ್ಳಿ:** ಸತ್ಯದ ಮಾರ್ಗದರ್ಶಕರಾಗಿ ನಡೆದ ಕೈವಾರ ಯೋಗಿ ನಾರೇಯಣ ಯತೀಂದ್ರರು, ಜನಮಾನಸದಲ್ಲಿ ನೆಲೆಯೂರಿದ್ದಾರೆಂದು ವಿದ್ವಾನ್ ಟಿ.ಎಲ್.ಆನಂದ್ ಹೇಳಿದರು.

ತಾಲೂಕಿನ ವಿಜಯಪುರ ಪಟ್ಟಣದ ಚನ್ನಕೇಶವಸ್ವಾಮಿ ದೇವಾಲಯ ಆವರಣದಲ್ಲಿ ಶ್ರೀ ಕೃಷ್ಣ ಯತೀಂದ್ರ ಸೇವಾ ಟ್ರಸ್ಟ್ ನಿಂದ ಶ್ರೀಮದ್ ಭಾಗವದ್ಗೀತಾ ಪಾರಾಯಣ, ಕೈವಾರ ಯೋಗಿನಾರೇಯಣ ಯತೀಂದ್ರರ ಹಾಗೂ ಕನಕ, ಪುರಂದರ ಗೀತಾ ತತ್ವಾಮೃತ ರಸ ಧಾರೆಯ 249ನೇ ಕಾರ್ಯಕ್ರಮ ಹಾಗೂ ಶ್ರೀಕೃಷ್ಣ ಮಾಸಿಕ ದ್ವಾದಶಿ ವಿಚಾರಧಾರೆಯ ಗೋಷ್ಠಿಯ 200 ನೇ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಮಾನವರಲ್ಲಿ ಅಹಂಕಾರ ದೊಡ್ಡ ಶತ್ರು. ಅಹಂಕಾರ ಎಂಬುದನ್ನು ಕಳೆದುಕೊಳ್ಳಬೇಕಾದರೆ ಗುರುವಿಗೆ ಶರಣು ಹೋಗಬೇಕೆಂದರು. ಬದುಕಿನ ಸೂಕ್ಷ್ಮವನ್ನು ಕೈವಾರ ತಾತಯ್ಯನವರು ತಮ್ಮ ಬೋಧನೆಯಲ್ಲಿ ತಿಳಿಸಿದ್ದಾರೆ. ಧರ್ಮದ ಜಾಗೃತಿಯನ್ನು ಮೂಡಿಸುವ ಕಾಲಜ್ಞಾನ ರಚನೆ ಮಾಡಿ ಎಚ್ಚರಿಕೆಯನ್ನು ನೀಡಿದ್ದಾರೆ. ಅವರ ಮಾರ್ಗದರ್ಶನದಲ್ಲಿ ನಾವೆಲ್ಲರೂ ಸಾಗಬೇಕು ಎಂದರು. ದೇಶ ಪರ್ಯಟನೆ ಮಾಡಿದ್ದ ಎಸ್.ಕುಮಾರ್ ಅವರನ್ನು ಸನ್ಮಾನಿಸಿದರು. ಸಂಗೀತ ನಿರ್ದೇಶಕ ಎಂ.ವಿ.ನಾಯ್ಡು, ಮುನಿರಾಜು, ಅನಿಲ್ ಕುಮಾರ್ ಅವರಿಂದ ಭಕ್ತಿಗೀತೆ ಗಾಯನ ನಡೆಯಿತು. ಗಾಯಕರಾದ ಟಿ.ಮಹಾತ್ಮಾಂಜನೇಯ, ನರಸಿಂಹಪ್ಪ ಕೀರ್ತನೆಯನ್ನು ಹಾಡಿದರು.



ಜಾನಪದ ಕಲೆ ಸಾಮಾಜಿಕ ಮೌಲ್ಯದ ಗಣಿ

• **ಪಾವಗಡ:** ಗ್ರಾಮೀಣ ಜನರ ಜಾನಪದ ಕಲೆಗಳು ಮಾನವೀಯ ಮೌಲ್ಯಗಳ ಗಣಿಯಾಗಿದೆ ಎಂದು ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ಇಲಾಖೆ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷ ಆರ್.ಎಂ.ನರಸಿಂಹ ಅಭಿಪ್ರಾಯಪಟ್ಟರು.

ರೊಪ್ಪ ಗ್ರಾಮದ ಸರ್ಕಾರಿ ಹಿರಿಯ ಮಾದರಿ ಪ್ರಾಥ ಶಾಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಮತ್ತು ದುರ್ಗಾ ಪರಮೇಶ್ವರಿ ಗ್ರಾಮೀಣ ಸಮಗ್ರ ವಿದ್ಯಾ ಕಲಾ ಯುವ ಅಭಿವೃದ್ಧಿ ಸಂಸ್ಥೆ ವೀರ್ಲಗೊಂದಿರವರ ಸಂಯುಕ್ತಾಶ್ರಯದಲ್ಲಿ ನಡೆದ ಜಾನಪದ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಜಾನಪದ ಕಲೆಗಳು ಪುರಾತನ ಕಾಲದಿಂದಲೂ ಶಿಕ್ಷಣ, ಸಂಸ್ಕೃತಿ ಮತ್ತು ಮಾನವೀಯ ಮೌಲ್ಯ ಕಲಿಸುವ ಪಾಠ ಶಾಲೆಗಳಂತೆ ಸಮಾಜದ ಅವಿಭಾಜ್ಯ ಅಂಗಗಳಾಗಿವೆಂದರು. ಹಿರಿಯ ಶಿಕ್ಷಕರಾದ ದವಡಬೆಟ್ಟ ನರಸಪ್ಪ ಮಾತನಾಡಿ, ವಿವಿಧ ಸಂಘ ಸಂಸ್ಥೆಗಳು ಏರ್ಪಡಿಸುವ ಜಾನಪದ ಕಾರ್ಯಕ್ರಮ ಪುರಾತನ ಕಲೆಗಳ ಉಳಿವಿಗೆ ಸಹಕಾರಿಯಾಗಿವೆ ಎಂದರು. ತಾಲೂಕು ಜಾನಪದ ಮತ್ತು ಯಕ್ಷಗಾನ ಕಲಾವಿದ ಸಂಘದ ಅಧ್ಯಕ್ಷ ಟಿ.ಗಂಗಯ್ಯ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಜಾನಪದ ಕಲೆಗಳ ಉಳಿವಿಗಾಗಿ ಸರ್ಕಾರ ವಿಶೇಷ ಕಾರ್ಯಕ್ರಮ ಜಾರಿಗೊಳಿಸಿ ಯುವ ಪೀಳಿಗೆಗೆ ಜಾಗೃತಿ ಮೂಡಿಸಬೇಕು ಎಂದು ಆಗ್ರಹಿಸಿದರು. ವೀರಗಾಸೆ, ನಾಟಕ', ಜಾನಪದ ಸಂಗೀತ ಮನಸೆಳೆದವು. ಮುಖ್ಯಶಿಕ್ಷಕ ರಾಮಯ್ಯ, ಗಾಣಕೋಗಿಲೆ ಹನುಮಂತರಾಯಪ್ಪ, ನಾಗೇಂದ್ರಪ್ಪ, ವೀರ್ಲಗೊಂದಿ ಇ.ಹರೀಶ್ ಇತರರಿದ್ದರು.

ಸೂಲಿಬೆಲೆಯಲ್ಲಿ ಜೇನುಗೂಡು ಟ್ರಸ್ಟ್‌ನಿಂದ ವಿಶ್ವ ಜಲ ದಿನಾಚರಣೆ: ಗಣ್ಯರಿಗೆ ಸನ್ಮಾನ

ಅಮೂಲ್ಯ ಸಂಪತ್ತು ನೀರನ್ನು ವ್ಯರ್ಥ ಮಾಡಬೇಡಿ

• **ಸೂಲಿಬೆಲೆ:** ನೀರು ಅಮೂಲ್ಯವಾದ ಸಂಪನ್ಮೂಲವಾಗಿದೆ. ಯಾರು ಸಹ ನೀರನ್ನು ವ್ಯರ್ಥ ಮಾಡಬೇಡಿ ಎಂದು ಸೂಲಿಬೆಲೆ ಗ್ರಾಮಪಂಚಾಯತ್ ಅಭಿವೃದ್ಧಿ ಅಧಿಕಾರಿ ಸುಬ್ರಮಣಿ ಹೇಳಿದರು.

ಸೂಲಿಬೆಲೆ ಗ್ರಾಮ ಪಂಚಾಯತ್‌ನಲ್ಲಿ ಮೇರಾ ಯುವ ಭಾರತ್, ಜೇನುಗೂಡು ರೂರಲ್ ಡೆವಲಪ್‌ಮೆಂಟ್ ಅಂಡ್ ಕಲ್ಚರಲ್ ಟ್ರಸ್ಟ್ ಹಾಗೂ ವಾಟರ್ ಏಡ್ ಸಂಸ್ಥೆಯ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಜಲ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಅಂತರ್ಜಲ ದಿನೇ ದಿನೇ ಕುಸಿಯುತಿರುವುದು ಕಳವಳ ವಿಚಾರ ಇದು ಕುಸಿದಷ್ಟು ನೀರಿನ ಗುಣಮಟ್ಟ ಕುಸಿಯುತ್ತದೆ. ನೀರು ಮಲೀನವಾಗುತ್ತದೆ. ಕುಡಿಯಲು ಯೋಗ್ಯವಲ್ಲದ ನೀರಾಗಿರುತ್ತದೆ ಎಂದು ಎಚ್ಚರಿಕೆ ನೀಡಿದರು.

ಜೇನುಗೂಡು ರೂರಲ್ ಡೆವಲಪ್‌ಮೆಂಟ್ ಅಂಡ್ ಕಲ್ಚರಲ್ ಟ್ರಸ್ಟಿನ ಉಪಾಧ್ಯಕ್ಷ ಕೆ.ಎಂ.ಚೌಡೇಗೌಡ ಮಾತನಾಡಿ, ನೀರನ್ನು ಉಳಿಸಿ ಭವಿಷ್ಯವನ್ನು ಕಾಪಾಡಿ ಎಂಬ ಮಾತಿನಂತೆ ನಾವು ನಮ್ಮ ಸುತ್ತಮುತ್ತಲಿನ ವಾತಾವರಣದಲ್ಲಿ ನಲ್ಲಿ ಆಫ್ ಮಾಡುವುದು, ಬಕೆಟ್ ಬಳಕೆ ಮಾಡಿ ನೀರು ಬಳಸುವುದು, ಮಳೆ ನೀರು ಕೊಯ್ಲು ಅಳವಡಿಸುವುದು ಮತ್ತು ಪ್ರೋತ್ಸಾಹಿಸುವ ಕೆಲಸ ಮಾಡಬೇಕು ನೀರಿನ ಸಂರಕ್ಷಣೆ ಮತ್ತು ಸ್ವಚ್ಛತೆ ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಹೇಳಿದರು. ವಾಟರ್ ಏಡ್ ಸಂಸ್ಥೆಯ ಬೆಂಗಳೂರು ಗ್ರಾಮಾಂತರ ಜಿಲ್ಲೆ ಯೋಜನಾಧಿಕಾರಿ ಮಧು ಮಾತನಾಡಿ, 1993 ರಲ್ಲಿ ಮಾರ್ಚ್ 22 ರಂದು ಪ್ರಥಮವಾಗಿ ವಿಶ್ವ ಜಲ ದಿನಾಚರಣೆ ಕಾರ್ಯಕ್ರಮ ಜಾರಿ ಮಾಡಲಾಯಿತು, ಯುನೈಟೆಡ್ ನೇಷನ್ ದೇಶವು ಪ್ರಥಮವಾಗಿ ಅನುಷ್ಠಾನಿಸಿ ವಿಶ್ವ ವ್ಯಾಪ್ತಿ ಈ ದಿನ ಆಚರಣೆ ಮಾಡುತ್ತಾರೆ ನೀರು ಅತ್ಯಮೂಲ್ಯವಾದ ಪ್ರತಿ ಜೀವರಾಶಿಗೆ ಅಗತ್ಯವಾದ ಸಂಪನ್ಮೂಲವಾಗಿದೆ ಎಂದರು.

ನಮ್ಮ ವಾಟರ್ ಏಡ್ ಸಂಸ್ಥೆ 10 ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದೆ ದೇಶದಲ್ಲಿ 11 ರಾಜ್ಯಗಳಲ್ಲಿ ಕರ್ನಾಟಕದಲ್ಲಿ 5 ಜಿಲ್ಲೆಗಳಲ್ಲಿ ಸೇವೆ ಮಾಡುತ್ತಾ ಇದ್ದೇವೆ 8 ಗ್ರಾಮಪಂಚಾಯತ್ ನಲ್ಲಿ 72 ಗ್ರಾಮಗಳಲ್ಲಿ ಕೆರೆ,ಕುಂಟೆ ಕಲ್ಯಾಣಿ ಅಭಿವೃದ್ಧಿ ಮೂಲಕ ಅಂತರ್ಜಲ ವೃದ್ಧಿಗೆ ಮುಂದಾಗಿದ್ದೇವೆ. ಸೂಲಿಬೆಲೆ ಗ್ರಾಮಪಂಚಾಯತ್ ವ್ಯಾಪ್ತಿಯಲ್ಲಿ ಮಂಗಳದಾಮ ಕುಂಟೆ, ಗಿಂಡ್ಲುಬಾವಿ ಕುಂಟೆ, ರಾಂಪುರ ಕುಂಟೆ ಅಭಿವೃದ್ಧಿ ಮಾಡಿದ್ದೇವೆ ಎಂದರು.

ಇದೇ ಸಂಧರ್ಭದಲ್ಲಿ ಸೂಲಿಬೆಲೆ ಗ್ರಾಮ ಪಂಚಾಯತ್‌ನಲ್ಲಿ ವಾಟರ್ ಮೇನ್ ಸೇವೆ ಸಲ್ಲಿಸುತ್ತಿರುವ ಲೋಕೇಶ್, ಮೂರ್ತಿ, ನರಸಿಂಹ, ಅರುಣ್ ಅವರಿಗೆ ಗೌರವ ಸನ್ಮಾನ ನೆರವೇರಿಸಲಾಯಿತು. ಜೇನುಗೂಡು ಟ್ರಸ್ಟ್ ಉಪಾಧ್ಯಕ್ಷ ಕೆ.ಎಂ.ಚೌಡೇಗೌಡ, ವಾಟರ್ ಏಡ್ ಸಂಸ್ಥೆಯ ಮಧು, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಸುಬ್ರಮಣಿ, ಪತ್ರಕರ್ತ ಎಂ.ಆರ್.ಉಮೇಶ್,ಜೇನುಗೂಡು ಟ್ರಸ್ಟ್ ಸಂಘಟನಾ ಕಾರ್ಯದರ್ಶಿ ವಸಂತಕುಮಾರ್, ಜಿಯಾವುಲ್ಲಾ, ಸೈಯದ್ ಮಹಬೂಬ್, ನವಾಜ್ ಖಾನ್, ಅತ್ತಿಬೆಲೆ ಮಂಜುನಾಥ್, ಕಾರ್ಯದರ್ಶಿ ಚಂದ್ರಪ್ಪ, ಪ್ರಧಾನ ಕಾರ್ಯದರ್ಶಿ ಬೆಟ್ಟಹಳ್ಳಿ ಗೋಪಿನಾಥ್, ಲಕ್ಕಿಗ ರಂಗಸ್ವಾಮಿ , ವಾಣಿ, ಪಿಳ್ಳಣ್ಣ ಇತರರು ಇದ್ದರು.



ಜಪ್ತಿ ಮಾಡಿದ್ದ ಮಾದಕವಸ್ತು ನಾಶ



• **ಹೊಸಕೋಟೆ:** ಗ್ರಾಮಾಂತರ ವಿಭಾಗದ ವ್ಯಾಪ್ತಿಗೆ ಒಳಪಡುವ ನಾಲ್ಕು ಜಿಲ್ಲೆಯಲ್ಲಿ ಎನ್‌ಡಿಪಿಎಸ್ ಕಾಯಿದೆಯಲ್ಲಿ 119ವಿವಿಧ ಪ್ರಕರಣದಲ್ಲಿ ಜಪ್ತಿ ಮಾಡಲಾದ 189.008 ಕೆ.ಜಿ. ಗಾಂಜಾ ಸೇರಿದಂತೆ ಇತರೆ ಅಲ್ಪಪ್ರಮಾಣದ ಮಾದಕ ವಸ್ತುವನ್ನು ನಾಶಪಡಿಸಲಾಯಿತು.

ನ್ಯಾಯಾಲಯದ ಅನುಮತಿಯಂತೆ ಪರಿಸರಕ್ಕೆ ಹಾನಿಯಾಗದಂತೆ ನಿಯಮಾನುಸಾರ ತಾಲೂಕಿನ ಚೊಕ್ಕಹಳ್ಳಿ ಕೈಗಾರಿಕಾ ಪ್ರದೇಶದ ಲ್ಲಿರುವ ಸೆಂಚುರಿ ರಿಸೈಕಲೀಸ್ ಆವರಣದಲ್ಲಿ ನಾಶಪಡಿಸಲಾಗಿದೆ. ನಾಶಪಡಿಸಿದ ಮಾದಕ ವಸ್ತು ಒಟ್ಟಾರೆ ಮೌಲ್ಯ ಸುಮಾರು ರೂ. 95 ಲಕ್ಷಗಳಾಗಿರುತ್ತದೆ. ಗ್ರಾಮಾಂತರ ವಿಭಾಗದ ಅಬಕಾರಿ ಜಂಟಿ ಆಯುಕ್ತ ಡಾ. ಸಿ.ಎಚ್. ಬಾಲಕೃಷ್ಣ, ಗ್ರಾಮಾಂತರ ಜಿಲ್ಲೆಯ ಅಬಕಾರಿ ಉಪಆಯುಕ್ತ ಎಂ. ರವೀಂದ್ರ, ಚಿಕ್ಕಬಳ್ಳಾಪುರ ಜಿಲ್ಲೆಯ ಅಬಕಾರಿ ಉಪ ಆಯುಕ್ತ ಜಿ.ಪಿ. ನರೇಂದ್ರಕುಮಾರ್, ಬೆಂಗಳೂರು ದಕ್ಷಿಣ ಜಿಲ್ಲೆ ಅಬಕಾರಿ ಉಪ ಆಯುಕ್ತ ಎಸ್.ಬಸವರಾಜ್, ತುಮಕೂರು ಜಿಲ್ಲೆ ಅಬಕಾರಿ ಉಪ ಆಯುಕ್ತ ವೈ.ಭರತೇಶ್, ಇದಕ್ಕೆ ಸಂಬಂಧಪಟ್ಟ ಅಬಕಾರಿ ಅಧಿಕಾರಿ ಮತ್ತು ಸಿಬ್ಬಂದಿ ನಾಶಪಡಿಸುವ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು.

ಕಿರುಸುದ್ದಿ

ಉದ್ಯೋಗ ಆಮಿಷ: ವಂಚಕರ ಬಂಧನ

ತುಮಕೂರು: ಅರಣ್ಯ ಇಲಾಖೆಯಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ ಯುವಕರಿಂದ ಲಕ್ಷಾಂತರ ರೂಪಾಯಿ ಹಣ ಪಡೆದು, ನಕಲಿ ನೇಮಕಾತಿ ಪತ್ರ ನೀಡಿ ವಂಚಿಸುತ್ತಿದ್ದ ಜಾಲವನ್ನು ಅರಣ್ಯ ಇಲಾಖೆ ಅಧಿಕಾರಿಗಳು ಭೇದಿಸಿದ್ದು, ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಾಗಿದೆ. ತಾಲೂಕಿನ ವಡ್ಡರಹಳ್ಳಿಯ ತೋಟದಲ್ಲಿ ಶೆಡ್ ನಿರ್ಮಿಸಿ ಮಾಹಿತಿ ಮತ್ತು ತರಬೇತಿ ಕೇಂದ್ರದ ಹೆಸರಿನಲ್ಲಿ ಅಕಾಡೆಮಿ ತೆರೆದಿದ್ದ ನೆಲಮಂಗಲದ ಕಿರಣ್ ಹಾಗೂ ಬೆಳಗುಂಬದ ಪವನ್ ಮತ್ತು ಉದಯ್ ಎಂಬುವವರು ಸೇರಿಕೊಂಡು ಸುಮಾರು 15ಕ್ಕೂ ಹೆಚ್ಚು ಯುವಕರಿಗೆ ಅರಣ್ಯ ಇಲಾಖೆಯ ನೇಮಕಾತಿಗಾಗಿ ತರಬೇತಿ ನೀಡಿ ಮೈಸೂರು ವಿಭಾಗದ ಅರಣ್ಯ ಪ್ರದೇಶದಲ್ಲಿ ಕಾಯಂ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ ಎಂದು ನಂಬಿಸಿ, ಪ್ರತಿ ಯುವಕನಿಂದ 3ರಿಂದ 5ಲಕ್ಷ ರೂಪಾಯಿ ಹಣವನ್ನು ವಸೂಲಿ ಮಾಡಲಾಗಿದೆ. ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ ಮೀನಾಕ್ಷಿ ನೇಗಿ (ಐಎಫ್‌ಎಸ್) ಅವರ ಆದೇಶದಂತೆ ನೇಮಕಾತಿ ನಡೆಯುತ್ತಿದೆ ಎಂಬ ನಕಲಿ ದೃಢೀಕರಣ ಪತ್ರವನ್ನು ಸೃಷ್ಟಿಸಿ, ಅರಣ್ಯ ಇಲಾಖೆ ಪ್ರಧಾನ ಕಾರ್ಯದರ್ಶಿಗಳ ಸಹಿ ಇರುವ ನಕಲಿ ನೇಮಕಾತಿ ಪತ್ರವನ್ನು ನೀಡಿ ಯುವಕರನ್ನು ನಂಬಿಸಲಾಗಿತ್ತು. ಈ ಪತ್ರಗಳು ಅಸಲಿ ಎಂಬಂತೆ ಬಿಂಬಿಸಿ ಯುವಕರಿಂದ ಭಾರಿ ಮೊತ್ತದ ಹಣವನ್ನು ಲೂಟಿ ಮಾಡಲಾಗಿತ್ತು. ಖಚಿತ ಮಾಹಿತಿ ಮೇರೆಗೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಪವಿತ್ರಾ ಅವರ ನೇತೃತ್ವದಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ವಡ್ಡರಹಳ್ಳಿಯ ನಕಲಿ ಕೇಂದ್ರದ ಮೇಲೆ ದಾಳಿ ನಡೆಸಿ, ವಂಚಕರ ಜಾಲಭೇದಿಸಿ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ. ಅರಣ್ಯ ಇಲಾಖೆ ದೂರಿನನ್ವಯ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದೆ. ತರಬೇತಿ ಕೇಂದ್ರದಲ್ಲಿದ್ದ ಯುವಕರನ್ನು ಹೆಚ್ಚಿನ ವಿಚಾರಣೆಗಾಗಿ ವಶಕ್ಕೆ ಪಡೆದಿದ್ದಾರೆ. ಪ್ರಮುಖ ಆರೋಪಿಗಳಿಗಾಗಿ ಶೋಧ ಕಾರ್ಯ ಮುಂದುವರಿದಿದೆ. ಸರಕಾರಿ ಕೆಲಸದ ಆಸೆ ತೋರಿಸಿ ನಕಲಿ ದಾಖಲೆ ಸೃಷ್ಟಿಸಿ ವಂಚಿಸುವ ಜಾಲದ ಬಗ್ಗೆ ಸಾರ್ವಜನಿಕರು ಎಚ್ಚರದಿಂದಿರಬೇಕು ಎಂದು ಅಧಿಕಾರಿಗಳು ಮನವಿ ಮಾಡಿದ್ದಾರೆ.

ಬಾಣಸಂದ್ರದಲ್ಲಿ ರೈಲು ನಿಲುಗಡೆಗೆ ಆಗ್ರಹ

ಚಿಕ್ಕನಾಯಕನಹಳ್ಳಿ: ಬಾಣಸಂದ್ರ ರೈಲು ನಿಲ್ದಾಣದಲ್ಲಿ ಈಚೆಗೆ ಕೆಲವು ರೈಲುಗಳಿಗೆ ನಿಲುಗಡೆ ಮಾಡದಿರುವುದರಿಂದ ತಾಲೂಕಿನ ಹಲವು ರೈಲುಪ್ರಯಾಣಿಕರಿಗೆ ತೀವ್ರ ತೊಂದರೆಯುಂಟಾಗಿದೆ. ತಾಲೂಕಿನಲ್ಲಿ ರೈಲು ಮಾರ್ಗವಿಲ್ಲ. ಆದರೆ ತುರುವೇಕೆರೆ ತಾಲೂಕಿನ ಬಾಣಸಂದ್ರ ರೈಲ್ವೆ ನಿಲ್ದಾಣಕ್ಕೆ ಕೇವಲ 16ಕಿ.ಮೀ.ದೂರವಿದೆ. ಈ ಕಾರಣದಿಂದ ಚಿಕ್ಕನಾಯಕನಹಳ್ಳಿ ತಾಲೂಕಿನ ಪ್ರಯಾಣಿಕರೂ ಸೇರಿದಂತೆ ತಿಪಟೂರು ತಾಲೂಕಿಗೆ ಸೇರಿದ ಕಿಬ್ಬನಹಳ್ಳಿ ಕ್ರಾಸ್‌ನಿಂದ ನಾಲ್ಕು ಕಿಮೀ ದೂರದಲ್ಲಿರುವ ಈ ನಿಲ್ದಾಣಕ್ಕೆ ಪ್ರತಿನಿತ್ಯ ನೌಕರರು, ವಿದ್ಯಾರ್ಥಿಗಳು, ವ್ಯಾಪಾರಸ್ಥರು ಮುಂತಾದ ಸಾವಿರಾರು ಮಂದಿ ಪ್ರಯಾಣಿಸಲು ಬಾಣಸಂದ್ರ ರೈಲು ನಿಲ್ದಾಣವನ್ನೆ ಅವಲಂಬಿಸುತ್ತಿದ್ದರು. ಇದೊಂದು ಗ್ರಾಮ್ಯಸ್ನೇಹಿ ಮಾರ್ಗವೂ ಆಗಿದೆ. ಅರಸೀಕೆರೆ ಕಡೆಗೆ ಸಂಚರಿಸುವ 06243 ಹೊಸಪೇಟೆ ಪ್ಯಾಸೆಂಜರ್ ರೈಲು ಕಳೆದ ಒಂದು ವರ್ಷದಿಂದ ನಿಲ್ಲುತ್ತಿಲ್ಲ. ಇದರ ಜೊತೆಗೆ ಹೊಸದಾಗಿ ಆರಂಭಿಸಿರುವ 17326 ವಿಶ್ವಮಾನವ ಎಕ್ಸ್‌ಪ್ರೆಸ್, 12725 ರೈಲು ಹಾಗೂ ಬೆಂಗಳೂರು ಕಡೆಗೆ ಸಂಚರಿಸುವ 16588 ಶಿವಮೊಗ್ಗ, 18580 ಶಿವಮೊಗ್ಗ, 20652 ತಾಳಗುಪ್ಪ ಎಕ್ಸ್‌ಪ್ರೆಸ್, 17325 ಬೆಳಗಾವಿ ಹಾಗೂ 06244 ಹೊಸಪೇಟೆ ರೈಲುಗಳು ಬಾಣಸಂದ್ರ ನಿಲ್ದಾಣದಲಿ ನಿಲುಗಡೆಯಾದರೆ ಸಾವಿರಾರು ಪ್ರಯಾಣಿಕರಿಗೆ ಅನುಕೂಲವಾಗಲಿದೆ. ಈ ನಿಲ್ದಾಣದಲ್ಲಿ ರೈಲು ನಿಲುಗಡೆಗಾಗಿ ಬಾಣಸಂದ್ರ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರ ಆಗ್ರಹವಾಗಿದೆ.

ವಿವಿಧ ರಾಜ್ಯದಿಂದ ಲಕ್ಷಾಂತರ ಭಕ್ತರ ಆಗಮನ ನಿರೀಕ್ಷೆ| ಜಿಲ್ಲಾಡಳಿತದಿಂದ ಸಕಲ ಸೌಲಭ್ಯ, ಬಂದೋಬಸ್ತ್

ವೈರಮುಡಿ ಸಂಭ್ರಮಕ್ಕೆ ಮೇಲುಕೋಟೆ ಸಜ್ಜು

ಮೇಲುಕೋಟೆ: ಚೆಲುವನಾರಾಯಣ ಸ್ವಾಮಿಯ ವೈರಮುಡಿ ಕಿರೀಟ ಧಾರಣೆಗಾಗಿ ಶ್ರೀವೈಷ್ಣವ ಕ್ಷೇತ್ರ ಮೇಲುಕೋಟೆ ಸಜ್ಜುಗೊಂಡಿದೆ. ಜಿಲ್ಲಾಡಳಿತ ಸಕಲ ವ್ಯವಸ್ಥೆಯನ್ನು ಮಾಡುತ್ತಿದ್ದು ವಿವಿಧ ರಾಜ್ಯದಿಂದ ತಂಡೋಪತಂಡವಾಗಿ ಮೇಲುಕೋಟೆಗೆ ಬಂದಿಳಿಯುತ್ತಿದ್ದಾರೆ.

ಜಿಲ್ಲಾಡಳಿತ ಹಲವು ಸಭೆಗಳನ್ನು ಮಾಡಿ ಜಿಲ್ಲಾಮಟ್ಟದ ಅಧಿಕಾರಿಗಳಿಗೆ ವಿವಿಧ ಜವಾಬ್ದಾರಿಯನ್ನು ವಹಿಸಿದೆ. ಮೇಲುಕೋಟೆಯ ಕಲ್ಯಾಣಿ ರಾಜಬೀದಿ ದೇವಾಲಯ ಉತ್ಸವ ಬೀದಿಗಳಿಗೆ ದೀಪಾಲಂಕಾರ ಮಾಡಲಾಗಿದ್ದು, ಮತ್ತಷ್ಟು ಅಚ್ಚುಕಟ್ಟು ಮಾಡುವ ಕೆಲಸ ಭರದಿಂದ ಸಾಗಿದೆ. ಮಹೋತ್ಸವದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ವ್ಯವಸ್ಥೆ ಹಾಗೂ ಪೊಲೀಸ್ ಭದ್ರತೆ ಹಾಗೂ ವೈರಮುಡಿ ಉತ್ಸವವನ್ನು ನಿರ್ವಹಿಸುವ ದೇವಾಲಯದ ಸಿಬ್ಬಂದಿಯ ಮೇಲೆ ಹೆಚ್ಚಿನ ಜವಾಬ್ದಾರಿಯಿದೆ

ಮಹಾವಿಷ್ಣುವಿನ ಅನುಗ್ರಹಕ್ಕೆ ಪ್ರಶಸ್ತವಾದ ಮೀನ-ಚೈತ್ರಮಾಸದ ಪುಷ್ಯ ನಕ್ಷತ್ರದ ಶುಭದಿನವಾದ ಶನಿವಾರ ಮಾ 28ನ ರಂದು ಶನಿವಾರ ರಾತ್ರಿ ಚೆಲುವನಾರಾಯಣಸ್ವಾಮಿಯವರ ವಿಶ್ವವಿಖ್ಯಾತ ವೈರಮುಡಿ ಉತ್ಸವ ನಡೆಯಲಿದೆ. ವೈರಮುಡಿ ಉತ್ಸವ ರಾತ್ರಿ 8ರಿಂದ ಆರಂಭವಾಗಿ ತಡರಾತ್ರಿ 4 ಗಂಟೆಯವರೆಗೆ ನಡೆಯಲಿದೆ. ವೈರಮುಡಿ ಕಿರೀಟಧಾರಣ ಮಹೋತ್ಸವಕ್ಕೆ ಕ್ಷಣಗಣನೆ ಆರಂಭವಾಗಿದೆ. ಭವ್ಯಕ್ಷಣವನ್ನು ಕಣ್ತುಂಬಿಕೊಳ್ಳಲು ಲಕ್ಷಾಂತರ ಭಕ್ತರು ಕಾತರರಾಗಿದ್ದಾರೆ ವೈರಮುಡಿ, ರಾಜಮುಡಿ ತಿರುವಾಭರಣಪೆಟ್ಟಿಗೆಗಳನ್ನು ಜಿಲ್ಲಾಖಜಾನೆಯಿಂದ ಶನಿವಾರ ಬೆಳಗ್ಗೆ 7ಕ್ಕೆ ಹೊರತಂದು ಮಂಡ್ಯದ ಲಕ್ಷ್ಮೀಜನಾರ್ಧನಸ್ವಾಮಿ ದೇವಾಲಯದಲ್ಲಿ ಪ್ರಥಮಪೂಜೆ ನೆರವೇರಿಸಲಾಗುತ್ತದೆ ಶ್ರೀರಂಗಪಟ್ಟಣ ಮಾರ್ಗವಾಗಿ ಬರುವ ತಿರುವಾಭರಣಪೆಟ್ಟಿಗೆಗೆ ದಾರಿಯುದ್ದಕ್ಕೂ ವಿವಿಧ ಗ್ರಾಮಗಳಲ್ಲಿ ಪೂಜೆ ನೆರವೇರಿಸಲಾಗುತ್ತದೆ. ಮೇಲುಕೋಟೆಗೆ ಬಂದ ನಂತರ ಕಿರೀಟಗಳಿಗೆ ಯತಿರಾಜದಾಸರ್ ಗುರುಪೀಠದಲ್ಲಿ ಕೊನೆಯ ಪೂಜೆ ನಡೆದ ನಂತರ ದೇವಾಲಯ ಪ್ರವೇಶಿಸುತ್ತವೆ.



ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್ ಚೆಲುವರಾಯಸ್ವಾಮಿ ಮಾರ್ಗದರ್ಶನದಲ್ಲಿ ವೈರಮುಡಿ ಉತ್ಸವಕ್ಕೆ ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ನೇತೃತ್ವದಲ್ಲಿ ಸಿದ್ಧತೆಗಳು ನಡೆಯುತ್ತಿವೆ. ಮಂಡ್ಯ ಜಿಲ್ಲಾಧಿಕಾರಿ ಕುಮಾರ ಪೊಲೀಸ್ ವರಿಷ್ಠಾಧಿಕಾರಿ ಶೋಭಾರಾಣಿ ಜಿಲ್ಲಾ ಪಂಚಾಯಿತಿ ಸಿಇಒ ನಂದಿನಿ ಸೂಚನೆಯಂತೆ ಜಿಲ್ಲಾಡಳಿತದ ಅಧಿಕಾರಿಗಳ ತಂಡ ವೈರಮುಡಿ ಕಿರೀಟಧಾರಣ ಮಹೋತ್ಸವ ವ್ಯವಸ್ಥಿತವಾಗಿ ನಡೆಸಲು ಶ್ರಮಿಸುತ್ತಿದ್ದಾರೆ.

- ಅನ್ನದ ದಾನ ಭವನದಲ್ಲಿ 24 ಗಂಟೆ ಪ್ರಸಾದ ವಿತರಣೆ
- 10 ಬೃಹತ್ ಪರದೆ ಮೂಲಕ ಉತ್ಸವ ಪ್ರಸಾರ
- ಜಕ್ಕನಹಳ್ಳಿಯಿಂದ 7ಕಿ.ಮಿ.ಯಿಂದಲೇ ದೀಪಾಲಂಕಾರ ತೋರಣ
- ಭಕ್ತರ ಸುರಕ್ಷತೆಗಾಗಿ 1500 ಮಂದಿ ಪೊಲೀಸರಿಂದ ಭದ್ರತೆ, 64 ಸಿಸಿ ಕ್ಯಾಮರಾದ ಕಣ್ಗಾವಲು
- ಶುದ್ಧ ಕುಡಿಯುವ ನೀರು, ನಿರಂತರ ಸ್ವಚ್ಛತೆ, ಬ್ಯಾರಿಕೇಡ್ ನಿರ್ಮಾಣ
- ಮಂಡ್ಯ, ನಾಗಮಂಗಲ, ಕೆ.ಆರ್.ಪೇಟೆ ಮೈಸೂರು ಹಾಸನದಿಂದ 150 ವಿಶೇಷ ಬಸ್ ಸೌಕರ್ಯ
- ಭಕ್ತರ ವಾಹನಗಳಿಗೆ 26 ಕಡೆ ವ್ಯವಸ್ಥಿತ ಪಾರ್ಕಿಂಗ್
- ಮಹಾರಾಜರು ವೀಕ್ಷಿಸುತ್ತಿದ್ದ ಸ್ಥಳದಲ್ಲಿ ಪುಷ್ಪ ಮಂಟಪ ನಿರ್ಮಾಣ
- ವಿಶೇಷ ತೋಮಾಲೆ ಸೇವೆ. ವಿಶೇಷ ಮಂಗಳವಾದ್ಯ ತಂಡ ನಿಯೋಜನೆ
- ಆಂಬುಲೆನ್ಸ್‌ನೊಂದಿಗೆ ವೈದ್ಯಕೀಯ ತಂಡ ಸಜ್ಜು
- ಎರಡನೇ ತೆಪ್ಪೋತ್ಸವದಂದು ಲೇಸರ್ ಪ್ರದರ್ಶನ, ತೆಪ್ಪೋತ್ಸವ
- ಭರತನಾಟ್ಯ, ಚಂಡೆವಾದನ ನಾದಸ್ವರ ವಾದನ ನಡೆಯಲಿದೆ



ಗಮನಸೆಳೆದ ಪ್ರವೇಶದ್ವಾರ

ಇದೇ ಪ್ರಥಮಭಾರಿಗೆ ಚೆಲುವನಾರಾಯಣಸ್ವಾಮಿ ದೇವಾಲಯ ಯೋಗನರಸಿಂಹಸ್ವಾಮಿ ಬೆಟ್ಟ ಭುವನೇಶ್ವರಿ ಮಂಟಪಗಳಿರುವ ಮಾದರಿಯಲ್ಲಿ ಲೈಟಿಂಗ್ ಸಮೇತವಾದ ಸ್ವಾಗತಕಮಾನುಗಳನ್ನು ಹಾಕುತ್ತಿರುವುದು ಹೊಸತನಕ್ಕೆ ಕಾರಣವಾಗಿದ್ದು ಭಕ್ತರ ಆಕರ್ಷಣೆಯ ಕೇಂದ್ರಬಿಂದುವಾಗಿದೆ.

ಇಂದು ನಾಗವಲ್ಲಿ ಮಹೋತ್ಸವ ಶ್ರೀರಾಮನವಮಿ

ಪರಾಭವನಾಮ ಸಂವತ್ಸರದ ವೈರಮುಡಿ ಬ್ರಹ್ಮೋತ್ಸವದ ಮೂರನೇ ತಿರುನಾಳ್ ದಿನವಾದ ಶುಕ್ರವಾರ ಮಧ್ಯಾಹ್ನ 3ಗಂಟೆಗೆ ನಾಗವಲ್ಲೀ ಉತ್ಸವ ಆರಂಭವಾಗಲಿದೆ ಕಲ್ಯಾಣನಾಯಕಿ ಅಮ್ಮನವರೊಂದಿಗೆ ಪುಷ್ಪಾಲಂಕೃತ ಬಂಗಾರದ ಪಲ್ಲಕ್ಕಿಯಲ್ಲಿ ವಿರಾಜಮಾನರಾದ ಚೆಲುವನಾರಾಯಣಸ್ವಾಮಿ ಉತ್ಸವ ಮೊದಲು ರಾಮಚಂದ್ರನ ಸಾನ್ನಿಧ್ಯವಿರುವ ಸೀತಾರಣ್ಯಕ್ಕೆ ನೆರವೇರಿ ನಂತರ ಕಲ್ಯಾಣಿಗೆ ಬಿಜಯಮಾಡಿದ ನಂತರ ನಾಗವಲ್ಲೀ ನರಂದಾಳಿಕಾರೋಹಣ ನಡೆಯಲಿದೆ 8 ಗಂಟೆಯ ವೇಳೆಗೆ ದೇವಾಲಯ ತಲುಪಲಿದೆ ರಾತ್ರಿ 9ರ ನಂತರ ಚಂದ್ರಮಂಡಲವಾಹನೋತ್ಸವ ನಡೆಯಲಿದೆ.

ಶಿವಗಂಗೆಯಲ್ಲಿ ಹೊನ್ನಾದೇವಿ ಕಂಬ ಪೂಜೆ

- ಮಾ.7ರಂದು ಆರತಿಮಡೆ ಪೂಜೆ, ಬ್ರಹ್ಮರಥೋತ್ಸವ

ಡಾಬಸ್ ಪೇಟೆ: ದಕ್ಷಿಣಕಾಶಿ ಶಿವಗಂಗೆಯಲ್ಲಿ ಮಂಗಳವಾರ ರಾತ್ರಿ ಹೊನ್ನದೇವಿ ಅಮ್ಮನವರ ಕಂಬ ಪೂಜಾ ಕಾರ್ಯಕ್ರಮ ವಿವಿಧ ಪೂಜೆ ಆರತಿ ನಡೆಮುಡಿಯ ಮೂಲಕ ಬೆಟ್ಟದ ಮುಖ್ಯದ್ವಾರದ ಬಳಿಯ ಗಣೇಶ ದೇವಾಲಯದಲ್ಲಿ ಪ್ರಥಮ ಪೂಜೆ ಸಲ್ಲಿಸಿ ನಂತರ ಮುಂಭಾಗದಲ್ಲಿ ಬಸವಣ್ಣನ ಕೊಂಬೆಗೆ ಪೂಜೆ ಮತ್ತು ಅಲಂಕಾರ ಮಾಡಿ ಶಾಸ್ತ್ರೋಕ್ತವಾಗಿ ಕಂಬ ನಡೆಲಾಯಿತು.

ದೇವಿ ನೆಲೆಗೊಂಡ ವಿಶೇಷ: ಉಗ್ರಸ್ವರೂಪಿಯಾದ ಹೊನ್ನಾದೇವಿಯೂ ಬಸುರಿ (ಗರ್ಭಿಣಿ) ಮಹಿಳೆಯನ್ನು ನರಬಲಿಯಾಗಿ ಪಡೆಯುತ್ತಿದ್ದು ಒಮ್ಮೆ ಬಲಿಯಾಗಬೇಕಿದ್ದ ಒಬ್ಬಮಹಿಳೆಗೆ ಆಹುತಿಯಾಗುವುದು ಇಷ್ಟ ಇರಲಿಲ್ಲ, ಆಗ ಕಣ್ಣೀರು ಸುರಿಸುತ್ತಾ ನನಗೆ ಏಕ ಮಾತ್ರ ಮಗುವಿದೆ ನಾನು ಬಲಿಯಾಗಲಾರೆ ಎಂದು ಕಣ್ಣೀರು ಸುರಿಸಿ ಪ್ರಾರ್ಥನೆ ಸಲ್ಲಿಸಿದರು.

ಕಂಬದ ದಿನದಲ್ಲಿ ಹೊನ್ನಾದೇವಿ ಮೂರ್ತಿಯಲ್ಲಿಯೂ ನೀರು ಬರುತ್ತದೆ ಎನ್ನುತ್ತಾರೆ ಹಿರಿಯ ಭಕ್ತರಾದ ಎಡೇಹಳ್ಳಿ ಭಾರತಮ್ಮ, ಆಗ ಮಹಾತಪಸ್ವಿಯಾದ ಶ್ರೀ ಮರಳಸಿದ್ದೇಶ್ವರರು ಉಗ್ರಸ್ವರೂಪಿ ಹೊನ್ನಾದೇವಿಗೆ ದರ್ಶನ ನೀಡಿ ಆಶೀರ್ವದಿಸಿ 64 ಶೀಲವನ್ನು ಆಚರಿಸುವಂತೆ ಉಪದೇಶಿಸುತ್ತಾರೆ. ಅಂದಿನಿಂದ ಮಹಾಶರಣೆಯಾಗಿ ಪರಿವರ್ತಿಸಿದರು. ಅಂದಿನಿಂದ ಭಕ್ತರು ನರಬಲಿಯ ಹೆಸರಿನಲ್ಲಿ ಬಸುರಿ ಕಂಬವನ್ನು ನಿರ್ಮಿಸಿ 12 ದಿನದ ನಂತರ ಹೊನ್ನದೇವಿ ಅಮ್ಮನವರ ದೇವಾಲಯದಲ್ಲಿ, ಕಂಬವನ್ನು ಕಡಿಯುವ (ವಿಸರ್ಜಿಸುವ) ಸಂಪ್ರದಾಯವನ್ನು ನಡೆಸುತ್ತಾ ಬಂದಿದ್ದಾರೆ.



ಹಬ್ಬದ ವಿಶೇಷ ಆಚರಣೆ

ಕಂಬ ಹಾಕಿದ ದಿನದಿಂದ ಶಿವಗಂಗೆ ಗ್ರಾಮದಲ್ಲಿ ಯಾರೂ ಸಹ ಮಾಂಸಹಾರ ಮಾಡುವಂತಿಲ್ಲ . ಹೊನ್ನಾದೇವಿಯ ಕುಲಭಕ್ತರು ಅಮ್ಮನವರ ರಥೋತ್ಸವದವರೆಗೆ ಬೇರೆ ದೇವರಿಗೆ ಪೂಜೆ ಮಾಡುವುದಾಗಲಿ ದೇವಾಲಯಗಳಿಗೆ ಭೇಟಿ ನೀಡುವುದಾಗಲಿ ತೀರ್ಥಪ್ರಸಾದ ಸ್ವೀಕರಿಸುವಂತಿಲ್ಲ, ಮನೆಯಲ್ಲಿ ಖಾರದ ಊಟ ಮಾಡುವಂತಿಲ್ಲ, ಶುಭಕಾರ್ಯ ಮಾಡುವಂತಿಲ್ಲ, ಸೂತಕವಾದರೆ ಅಂದೇ ಸೂತಕವನ್ನು ಕಳೆದುಕೊಂಡು ಮತ್ತೆ ಪೂಜಾ ಕಾರ್ಯದಲ್ಲಿ ತೊಡಗಬೇಕು. ಬೆಟ್ಟದ ಮೇಲಿನಲ್ಲಿ ದೇವಾಲಯಕ್ಕೂ ಭೇಟಿ ನೀಡುವಂತಿಲ್ಲ, ಕಾರಣ ಮೂಲ ದೇವರು ಕಂಬದ ಬಳಿಯೇ ನೆಲೆಸಿರುತ್ತಾರೆ ಎಂಬುದು ಭಕ್ತರ ನಂಬಿಕೆಯಾಗಿದೆ. ದೇವರ ಪೂಜೆಗೆ ಹೂ ಬೆಳೆದು ಪೂಜೆಗೆ ನೀಡಬೇಕು ಎಂದು ಒಂದು ಎಕ್ಕರೆ ಜಮೀನು ನೀಡಲಾಗಿದೆ. ಈ ಭೂಮಿಯನ್ನು ಮಾಡುವವರು ಜಾತ್ರೆಯ ದಿನ ಭಕ್ತರಿಗೆ ಊಟ ಹಾಕಬೇಕು. ಮಾ.7ರಂದು ಆರತಿಮಡೆ ಪೂಜಾ ಕಾರ್ಯಕ್ರಮವಿದೆ ನಂತರ 9ರಂದು ಹೊನ್ನಾದೇವಿ ಬ್ರಹ್ಮರಥೋತ್ಸವ ನಡೆಯಲಿದೆ ರಥೋತ್ಸವದ ಬಳಿಕ ಭಕ್ತರು ಮತ್ತು ಸರಕಾರದ ವತಿಯಿಂದ ಹಲವು ಉತ್ಸವಗಳು ನಡೆಯುತ್ತವೆ.

ಪಾಠಶಾಲಾ-ಜೀವನ್ ಯಾತ್ರಾ ಸಮರ್ಪಣೆ

ಮೈಸೂರು: ನಗರದ ಎಚ್.ಡಿ. ಕೋಟೆ ರಸ್ತೆಯಲ್ಲಿರುವ ಪೂರ್ಣ ಚೇತನ ಶಾಲೆಯ ವಿದ್ಯಾರ್ಥಿಗಳು ಗುರುವಾರ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ಭೇಟಿ ಮಾಡಿ, ತಾವೇ ಬರೆದು ಪ್ರಕಟಿಸಿರುವ ಪಾಠಶಾಲಾ- ಜೀವನ್ ಯಾತ್ರಾ ಪುಸ್ತಕದ ಪ್ರತಿಯನ್ನು ಪ್ರದಾನ ಮಾಡಿದರು.

ಶಾಲೆಯ ಐದನೇ ತರಗತಿಯ ವಿದ್ಯಾರ್ಥಿ ತೋಶನ್, ಎಂಟನೇ ತರಗತಿ ವಿದ್ಯಾರ್ಥಿ ಮಹೇಶ್, 10ನೇ ತರಗತಿ ವಿದ್ಯಾರ್ಥಿಗಳಾದ ಸುಹಾಸ್ ಹಾಗು ಸುದಿತಿ ಸಚಿವರನ್ನು ಭೇಟಿ ಮಾಡಿ ಪುಸ್ತಕ ಪ್ರದಾನ ಮಾಡಿದರು. ಶಾಲಾ ಮಕ್ಕಳೇ ಬರೆದಿರುವ 189 ಲೇಖನಗಳ ಗುಚ್ಛವಾದ ಈ ಪುಸ್ತಕವನ್ನು ಖ್ಯಾತ ಸಾಹಿತಿ ದಿ. ಎಸ್ ಎಲ್ ಭೈರಪ್ಪ ಅವರು ಬಿಡುಗಡೆ ಮಾಡಿದ್ದರು. ಶಾಲಾ ಮಕ್ಕಳು ತಮ್ಮ ಅನುಭವನ್ನು ಇಲ್ಲಿ ಅಕ್ಷರ ರೂಪಕ್ಕೆ ಇಳಿಸಿದ್ದಾರೆ. ಈ ಹಿಂದೆ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಸೇರಿದಂತೆ ಹಲವಾರು ಗಣ್ಯರು ಈ ಪುಸ್ತಕದ ಬಗ್ಗೆ ಮೆಚ್ಚುಗೆಯ ನುಡಿಗಳನ್ನಾಡಿದ್ದರು. ಈ ಸಂದರ್ಭದಲ್ಲಿ ಮಕ್ಕಳು, ಸಚಿವರಿಗೆ ತಮ್ಮ ಶಾಲೆ,ಶಾಲೆಯಲ್ಲಿ 21ನೇ ಶತಮಾನದ ಭಾರತೀಯ ಕೌಶಲ ಕಲಿಕೆ, ತಾವು ಪ್ರಕಟಿಸಿರುವ ಪುಸ್ತಕದ ಬಗ್ಗೆ ಮಾಹಿತಿ ನೀಡಿದರು.



ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ಧರ್ಮೇಂದ್ರ ಪ್ರಧಾನ್, ಶಾಲೆಯ ಚಟುವಟಿಕೆಗಳು, ರಾಷ್ಟ್ರೀಯ ಶಿಕ್ಷಣ ನೀತಿ 2022ಕ್ಕೆ ಪೂರಕವಾಗಿರುವುದು ಸ್ಫೂರ್ತಿದಾಯಕ ಎಂದು ತಿಳಿಸಿ, ಮಕ್ಕಳ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದರು.

ಕ್ರೀಡಾಪಟು ಎಚ್.ಎಸ್. ಗಣಪತಿ ನಿಧನ

ಮಂಡ್ಯ: ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಕ್ರೀಡಾಪಟು ಎಚ್.ಎಸ್. ಗಣಪತಿ (65) ಅವರು ತೀವ್ರ ಹೃದಯಾಘಾತದಿಂದ ಗುರುವಾರ ತಮ್ಮ ನಿವಾಸದಲ್ಲಿ ನಿಧನರಾದರು. ರಾತ್ರಿ ಅಶೋಕ ನಗರದಲ್ಲಿರುವ ತಮ್ಮ ನಿವಾಸಕ್ಕೆ ಧಾವಿಸಿದ ಗಣಪತಿ ಅವರು, ಕುಸಿದುಬಿದ್ದು ಮೃತಪಟ್ಟಿದ್ದಾರೆ. ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿದ್ದರು. ಕರ್ನಾಟಕ ಕಲಾಶ್ರೀ ಪ್ರಶಸ್ತಿ ಪುರಸ್ಕೃತ ಖ್ಯಾತ ಗಮಕಿ ಎಚ್.ಎಸ್. ಶೇಷಗಿರಿರಾವ್ ಅವರ ಪುತ್ರರಾಗಿದ್ದ ಗಣಪತಿ ಅವರು, ಸಂಗೀತ ನಿರ್ದೇಶಕ, ಮೃದಂಗ ಬಹುಮುಖ ಪ್ರತಿಭೆಯಾಗಿದ್ದರು.

:: ಓದುಗರ ಗಮನಕ್ಕೆ ::
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



ಮಿತ್ರರಿಗೆ ಮಾತ್ರ ಜಲಸಂಧಿ ಮೂಲಕ ಸಂಚಾರಕ್ಕೆ ಇರಾನ್ ಅನುಮತಿ

ಶತ್ರುರಾಷ್ಟ್ರಗಳಿಗೆ ನಿರ್ಬಂಧ

ಭಾರತ ಸೇರಿ 5 ದೇಶಕ್ಕೆ ಹಾರ್ಮುಜ್ ಮುಕ್ತ

• ಟೆಹ್ರಾನ್: ಆಯಕಟ್ಟಿನ ಹಾರ್ಮುಜ್ ಜಲಸಂಧಿಯ ಮೂಲಕ ವಾಣಿಜ್ಯ ಹಡಗುಗಳ ಸಂಚಾರ ನಡೆಸಲು ಭಾರತ ಸೇರಿದಂತೆ ಐದು ರಾಷ್ಟ್ರಗಳಿಗೆ ಇರಾನ್ ಸರ್ಕಾರ ಅನುಮತಿ ನೀಡಿದೆ.

ಚೀನಾ, ರಷ್ಯಾ, ಭಾರತ, ಇರಾಕ್ ಮತ್ತು ಪಾಕಿಸ್ತಾನ ದೇಶಗಳಿಗೆ ಈ ಜಲಸಂಧಿಯ ಮೂಲಕ ಸಂಚರಿಸಲು ಅವಕಾಶ ನೀಡಲಾಗಿದೆ ಎಂದು ವಿದೇಶಾಂಗ ಸಚಿವ ಸೈಯದ್ ಅಬ್ಬಾಸ್ ಅರಾಘ್ಚಿ ಘೋಷಿಸಿದ್ದಾರೆ. ಇರಾನ್ ಸರ್ಕಾರ ಈ ರಾಷ್ಟ್ರಗಳನ್ನು 'ಸ್ನೇಹಿ ರಾಷ್ಟ್ರಗಳು' ಎಂದು ವರ್ಗೀಕರಿಸಿದೆ. ಪರ್ಷಿಯನ್ ಗಲ್ಫ್ ಮತ್ತು ಒಮಾನ್ ಗಲ್ಫ್ ನಡುವಿನ ಈ ಕಿರಿದಾದ ಸಮುದ್ರ ಮಾರ್ಗವನ್ನು ಇರಾನ್ ನಿರ್ಬಂಧಿಸಿದ ಬೆನ್ನಲ್ಲೇ ಜಾಗತಿಕ ತೈಲ ಮತ್ತು ಅನಿಲ ಬೆಲೆಗಳಲ್ಲಿ ತೀವ್ರ ಏರಿಕೆ ಕಂಡುಬಂದಿದೆ. ಜಾಗತಿಕ ತೈಲ ಮತ್ತು ದ್ರವೀಕೃತ ನೈಸರ್ಗಿಕ ಅನಿಲದ (ಎಲ್‌ಎನ್‌ಜಿ) ಶೇ.20 ರಷ್ಟು ಪೂರೈಕೆ ಈ ಮಾರ್ಗದ ಮೂಲಕವೇ ನಡೆಯುತ್ತದೆ.

ಸಂಚಾರ ನಿರ್ಬಂಧಗಳು: ಇರಾನ್‌ನ ವಿರೋಧಿ ರಾಷ್ಟ್ರಗಳು ಅಥವಾ ಅವುಗಳ ಮಿತ್ರರಾಷ್ಟ್ರಗಳಿಗೆ ಸೇರಿದ ಹಡಗುಗಳ ಸಂಚಾರವನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಪ್ರಸ್ತುತ ಈ ಪ್ರದೇಶವನ್ನು ಯುದ್ಧ ವಲಯವೆಂದು ಘೋಷಿಸಲಾಗಿದ್ದು, ಯುದ್ಧದ ಸಂದರ್ಭದಲ್ಲಿ ಶತ್ರು ಹಡಗುಗಳಿಗೆ ಸಂಚಾರಕ್ಕೆ ಅವಕಾಶ ನೀಡಲು ಯಾವುದೇ ಕಾರಣವಿಲ್ಲ ,ಎಂದು ಸ್ಪಷ್ಟಪಡಿಸಲಾಗಿದೆ.

ರಾಜತಾಂತ್ರಿಕ ಹಿನ್ನೆಲೆ: ವಾಣಿಜ್ಯ ಹಡಗುಗಳ ಸಂಚಾರಕ್ಕೆ ಅಡ್ಡಿಯುಂಟಾಗಿರುವುದು ಜಾಗತಿಕ ಕಳವಳಕ್ಕೆ ಕಾರಣವಾಗಿದೆ. ಈ ಜಲಸಂಧಿಯನ್ನು ಪೂರ್ಣವಾಗಿ ಮುಕ್ತಗೊಳಿಸದಿದ್ದರೆ ತೀವ್ರ ಪರಿಣಾಮ ಎದುರಿಸಬೇಕಾಗುತ್ತದೆ, ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್‌ಗೆ ಎಚ್ಚರಿಕೆ ನೀಡಿದ್ದಾರೆ. ಪಶ್ಚಿಮ ಏಷ್ಯಾದ ಸಂಘರ್ಷವನ್ನು ಶೀಘ್ರವಾಗಿ ಅಂತ್ಯಗೊಳಿಸಲು ಮತ್ತು ಇಂಧನ ಪೂರೈಕೆಗೆ ಅಡ್ಡಿಯಾಗದಂತೆ ನೋಡಿಕೊಳ್ಳಲು ಭಾರತ ರಾಜತಾಂತ್ರಿಕ ಪ್ರಯತ್ನಗಳನ್ನು ನಡೆಸುತ್ತಿದೆ.

ಆರ್ಥಿಕ ಪರಿಣಾಮ: ದಕ್ಷಿಣ ಏಷ್ಯಾದ ಮಾರುಕಟ್ಟೆಗಳ ಮೇಲೆ ಈ ಬೆಳವಣಿಗೆ ಮಿಶ್ರ ಪರಿಣಾಮ ಬೀರಲಿದೆ. ಭಾರತ ಮತ್ತು ಪಾಕಿಸ್ತಾನಕ್ಕೆ ಇಂಧನ ಪೂರೈಕೆ ಸುಗಮವಾಗುವುದರಿಂದ ಮಾರುಕಟ್ಟೆಯಲ್ಲಿ ಸ್ಥಿರತೆ ನಿರೀಕ್ಷಿಸಬಹುದು. ಆದರೆ, ಇತರ ರಾಷ್ಟ್ರಗಳಿಗೆ ನಿರ್ಬಂಧ ಮುಂದುವರಿದಿರುವುದರಿಂದ ಜಾಗತಿಕ ತೈಲ ಬೆಲೆ ಏರಿಕೆ ಮತ್ತು ಪೂರೈಕೆ ಸರಪಳಿಯ ವ್ಯತ್ಯಯ ಈ ವಲಯದ ಆಮದು ವೆಚ್ಚವನ್ನು ಹೆಚ್ಚಿಸಿ, ಹಣದುಬ್ಬರಕ್ಕೆ ಕಾರಣವಾಗುವ ಭೀತಿ ಇದೆ.

ಯುದ್ಧ ತೀವ್ರಗೊಳಿಸಿದರೆ ಬಾಬ್ ಜಲಸಂಧಿ ಬಂದ್!

ಅಮೆರಿಕ ಮತ್ತು ಇಸ್ರೇಲ್ ಪಡೆಗಳು ಇರಾನ್‌ನ ಖರ್ಗ್ ಸೇರಿದಂತೆ ವಿವಿಧ ದ್ವೀಪಗಳ ಮೇಲೆ ದಾಳಿ ನಡೆಸಿ ಯುದ್ಧವನ್ನು ತೀವ್ರಗೊಳಿಸಿದರೆ ಸೂಯೆಜ್ ಕಾಲುವೆಗೆ ಸಂಪರ್ಕ ಕಲ್ಪಿಸುವ ಬಾಬ್ ಅಲ್-ಮಾಂಡೆಬ್ ಜಲಸಂಧಿಯನ್ನು ಬಂದ್ ಮಾಡುವುದಾಗಿ ಇರಾನ್ ಎಚ್ಚರಿಸಿದೆ.

ವಿಶ್ವದ ನಾಲ್ಕನೇ ಅತಿದೊಡ್ಡ ಹಡಗು ಮಾರ್ಗವೆಂದು ಗುರುತಿಸಲ್ಪಟ್ಟಿರುವ ಬಾಬ್ ಅಲ್-ಮಾಂಡೆಬ್ ಮೂಲಕ ಜಾಗತಿಕ ಸಮುದ್ರಯಾನದ ಶೇ.12 ರಷ್ಟು ತೈಲ ಸರಬರಾಜು ನಡೆಯುತ್ತದೆ. ಕೆಂಪು ಸಮುದ್ರ ಮತ್ತು ಏಡನ್ ಕೊಲ್ಲಿಯನ್ನು ಸಂಪರ್ಕಿಸುವ ಈ ಮಾರ್ಗದಲ್ಲಿ ಅಡಚಣೆಯುಂಟಾದರೆ ಜಾಗತಿಕ ಆರ್ಥಿಕತೆಯ ಮೇಲೆ ಗಂಭೀರ ಪರಿಣಾಮ ಬೀರಲಿದೆ, ಎಂದು ಅಂದಾಜಿಸಲಾಗಿದೆ.

ಹೌತಿ ಬಂಡುಕೋರರ ಬೆಂಬಲ : ಅರೇಬಿಯನ್ ಪರ್ಯಾಯ ದ್ವೀಪದ ದಕ್ಷಿಣ ತುದಿಯಲ್ಲಿರುವ ಬಾಬ್ ಅಲ್-ಮಾಂಡೆಬ್ ಜಲಸಂಧಿಯನ್ನು ನಿಯಂತ್ರಿಸಲು ಯೆಮೆನ್ ಮೂಲದ ಇರಾನ್ ಬೆಂಬಲಿತ ಹೌತಿ ಬಂಡುಕೋರರು ಸಂಪೂರ್ಣ ಸಿದ್ಧತೆ ನಡೆಸಿದ್ದಾರೆ. 2023 ರ ಅಕ್ಟೋಬರ್‌ನಲ್ಲಿ ಇಸ್ರೇಲ್ ಮತ್ತು

ಅಮೆರಿಕ ಇಸ್ರೇಲ್‌ಗೆ ಇರಾನ್ ಎಚ್ಚರಿಕೆ



ಗಾಜಾ ಸಂಘರ್ಷದ ಸಮಯದಲ್ಲಿ ಹೌತಿ ಪಡೆಗಳು ಹಡಗುಗಳ ಮೇಲೆ ದಾಳಿ ನಡೆಸುವ ಮೂಲಕ ಕೆಂಪು ಸಮುದ್ರದ ಸಂಚಾರ ನಿಯಂತ್ರಿಸಿದ್ದವು. ಇರಾನ್‌ನ ಖರ್ಗ್ ದ್ವೀಪವನ್ನು ವಶಪಡಿಸಿಕೊಳ್ಳಲು ಶತ್ರು ರಾಷ್ಟ್ರಗಳು ಪ್ರಯತ್ನಿಸಿದರೆ ಆ ದೇಶದ ಪ್ರಮುಖ ಮೂಲಸೌಕರ್ಯಗಳ ಮೇಲೆ ನಿರಂತರ ದಾಳಿ ನಡೆಸಲಾಗುವುದು, ಎಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘೇರ್ ಘಾಲಿಬಾಫ್ ತಿಳಿಸಿದ್ದಾರೆ.

2 ತಿಂಗಳಿಗಾಗುವಷ್ಟು ಇಂಧನ ಇದೆ

• ಹೊಸದಿಲ್ಲಿ : 60 ದಿನಗಳಿಗೆ ಬೇಕಾಗುವಷ್ಟು ಇಂಧನ ದಾಸ್ತಾನು ಭಾರತದ ಬಳಿ ಇದೆ. ದೇಶದಲ್ಲಿ ಪೆಟ್ರೋಲ್, ಡೀಸೆಲ್ ಅಥವಾ ಎಲ್‌ಪಿಜಿ ಕೊರತೆಯೇ ಇಲ್ಲ ಎಂದು ಘೋಷಿಸಿರುವ ಕೇಂದ್ರ ಸರ್ಕಾರ, ಜನರು ಆತಂಕದಿಂದ ಖರೀದಿಗೆ ಮುಗಿಬೀಳುವಂತೆ ಮಾಡಲು, ಉದ್ದೇಶಪೂರ್ವಕವಾಗಿ ಕೊರತೆಯ ತಪ್ಪು ಮಾಹಿತಿಯನ್ನು ಹರಡಲಾಗುತ್ತಿದೆ ಎಂದು ವಿಷಾದಿಸಿದೆ. ಅಂತೆಯೇ 8 ಲಕ್ಷ ಟನ್ ಎಲ್‌ಪಿಜಿ ಸಂಗ್ರಹವಿದೆ ಎಂದು ಕೇಂದ್ರ ಹೇಳಿದೆ.

ದೇಶದ ಎಲ್ಲಾ ಪೆಟ್ರೋಲ್ ಪಂಪ್‌ಗಳಲ್ಲೂ ಪೆಟ್ರೋಲ್ ,ಡೀಸೆಲ್ ದಾಸ್ತಾನು ಸಾಕಷ್ಟಿದ್ದು, ಇವು ಎಂದಿನಂತೆ ಸಹಜವಾಗಿ ಕಾರ್ಯನಿರ್ವಹಿಸುತ್ತಿವೆ. ಪೆಟ್ರೋಲ್‌ಗಾಗಿ ಕ್ಯೂ ನಿಲ್ಲುವ ಅಗತ್ಯವೇ ಇಲ್ಲ. ಜಗತ್ತಿನ ಚತುರ್ಥ ಬೃಹತ್ ರಿಫೈನರಿಯಾಗಿರುವ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಪಂಚಮ ಬೃಹತ್ ರಫ್ತುಗಾರ ರಾಷ್ಟ್ರವಾಗಿರುವ ಭಾರತ , ದೇಶೀಯವಾಗಿ ಇಂಧನಗಳ ಸಾಕಷ್ಟು ಲಭ್ಯತೆ ಬಗ್ಗೆ ಕ್ರಮಬದ್ಧ ಆಶ್ವಾಸನೆ ನೀಡಿದೆ. ಸಂಸ್ಕರಿತ ಇಂಧನಗಳನ್ನು ಮುಂದೆಯೂ 150ಕ್ಕೂ ಅಧಿಕ ರಾಷ್ಟ್ರಗಳಿಗೆ ಪೂರೈಸಲಿದೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ಹೇಳಿಕೆಯಲ್ಲಿ ತಿಳಿಸಿದೆ. ಕಚ್ಚಾತೈಲವನ್ನು ಪೆಟ್ರೋಲ್, ಡೀಸೆಲ್‌ಗಳಾಗಿ ಪರಿವರ್ತಿಸುವ ಪ್ರತಿಯೊಂದು ಭಾರತೀಯ ರಿಫೈನರಿಗಳು ಶೇ.100 ಮೀರಿ ಬಳಕೆ ಸಾಮರ್ಥ್ಯದೊಂದಿಗೆ ಕಾರ್ಯ ನಿರ್ವಹಿಸುತ್ತಿವೆ. ಮುಂದಿನ 60ದಿನಗಳವರೆಗೂ ಕಚ್ಚಾತೈಲ ಪೂರೈಕೆಗೆ ಭಾರತೀಯ ತೈಲ ಕಂಪೆನಿಗಳು ಸಮ್ಮತಿಸಿವೆ. ಹಾಗಾಗಿ ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಿಲ್ಲ . ಭಾರತವು 74ದಿನಗಳಿಗೆ ಸಾಕಾಗುವಷ್ಟು ಒಟ್ಟು ಕಚ್ಚಾತೈಲ ಮತ್ತು ಇಂಧನ ದಾಸ್ತಾನು ಸಾಮರ್ಥ್ಯ ಹೊಂದಿದೆ.

ಕಚ್ಚಾತೈಲ ಪೂರೈಕೆಗೆ ಯಾವುದೇ ಸಮಸ್ಯೆಯಿಲ್ಲ ; ಮಧ್ಯಪ್ರಾಚ್ಯ ಬಿಕ್ಕಟ್ಟಿಗೀಗ 27ನೇ ದಿನ ತುಂಬಿದರೂ, ಭಾರತದಲ್ಲಿ ಕಚ್ಚಾತೈಲ ದಾಸ್ತಾನು, ಉತ್ಪನ್ನಗಳ ದಾಸ್ತಾನು ಸಹಿತ 60ದಿನಗಳಿಗೆ ಬೇಕಾಗುವಷ್ಟು ದಾಸ್ತಾನಿದೆ. ಜಾಗತಿಕವಾಗಿ ಏನೇ ಸಂಭವಿಸಿದರೂ ದೇಶದ ಪ್ರತಿಯೋರ್ವ ನಾಗರಿಕನಿಗೂ ಸತತ ಎರಡು ತಿಂಗಳ ಕಾಲ ನಿರಂತರ ಇಂಧನ ಪೂರೈಸಲು ದೇಶ ಶಕ್ತವಿದೆ. ಎರಡು ತಿಂಗಳಿಗೆ ಅಗತ್ಯ ಕಚ್ಚಾತೈಲ ದಾಸ್ತಾನು ಬಗ್ಗೆ ತುಂಬು ಖಾತರಿಯಿರುವಂತೆ, ಮುಂದಿನ ಹಲವು ತಿಂಗಳ ಕಾಲವೂ ಕಚ್ಚಾತೈಲ ಪೂರೈಕೆ ವಿಚಾರದಲ್ಲಿ ದೇಶವು ಸಂಪೂರ್ಣ ಸುಸ್ಥಿರ ಸ್ಥಿತಿಯಲ್ಲಿದೆ.



ಎಲ್‌ಪಿಜಿ ಪೂರೈಕೆ ಕೂಡ ಅಬಾಧಿತ: ಹೋರ್ಮುಜ್ ಜಲಸಂಧಿಯಲ್ಲಿನ ಉದ್ವಿಗ್ನತೆಗಳ ಹೊರತೂ, ಕಚ್ಚಾತೈಲ ಪೂರೈಕೆ ಸ್ಥಿರವಾಗಿದೆ. ಬದಲಿ ಮೂಲಗಳಿಂದ ಅತ್ಯಧಿಕ ಪ್ರಮಾಣದಲ್ಲಿ ಸರಬರಾಜಾಗುತ್ತಿರುವ ಕಚ್ಚಾತೈಲಗಳಿಂದಾಗಿ ಸಮಸ್ಯೆಯಾಗಿಲ್ಲ, ಭಾರತದ ರಿಫೈನರಿಗಳು ತಮ್ಮ ಸಂಪೂರ್ಣ ಸಾಮರ್ಥ್ಯ ಮೀರಿ ಕಾರ್ಯತತ್ಪರವಾಗಿವೆ. ಮುಂದಿನ 60ದಿನಗಳಿಗೆ ಅಗತ್ಯ ಕಚ್ಚಾತೈಲ ಪೂರೈಕೆಗೆ ಯಾವುದೇ ತೊಂದರೆಯಿಲ್ಲ, ದೇಶದಲ್ಲಿ ಎಲ್‌ಪಿಜಿ ಪೂರೈಕೆ ಕೂಡ ಧಾರಾಳ ಸ್ಥಿತಿಯಲ್ಲಿದೆ. ದೇಶೀಯವಾಗಿ ಅನಿಲೋತ್ಪಾದನೆ ಹೆಚ್ಚಿರುವ ಕಾರಣ ಆಮದು ಅನಿವಾರ್ಯತೆ ಕುಗ್ಗಿದೆ. ಬೇರೆ ಬೇರೆ ದೇಶಗಳಿಂದ ಹೆಚ್ಚುವರಿ ಅನಿಲ ಸರಕುಗಳನ್ನು ಸರಕಾರ ತರಿಸಿಕೊಂಡಿದ್ದು, ಜನರಿಗೆ ನಿರಂತರವಾಗಿ ಎಲ್‌ಪಿಜಿ ಲಭಿಸಲಿದೆ.

ಜನರನ್ನು ಅನಗತ್ಯವಾಗಿ ಆತಂಕಕ್ಕೀಡಿಸಲು ಕಚ್ಚಾತೈಲ, ಇಂಧನ ,ಅನಿಲ ಕೊರತೆಯ ತಪ್ಪು ಮಾಹಿತಿ ಮತ್ತು ತಿರುಚಿದ ಮಾಹಿತಿಗಳನ್ನು ಜಾಲತಾಣಗಳಲ್ಲಿ ಹರಿಯಬಿಡಲಾಗುತ್ತಿದೆ. ಇದರ ಹಿಂದಿರುವವರನ್ನು ಪತ್ತೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಸರಕಾರ ಎಚ್ಚರಿಸಿದೆ.

ಇರಾನ್ ನೌಕಾಪಡೆ ಮುಖ್ಯಸ್ಥನ ಹತ್ಯೆ

ಹಾರ್ಮುಜ್ ಜಲಸಂಧಿ ಮುಚ್ಚಿಸಿದ್ದ ಪ್ರಮುಖ ಅಧಿಕಾರಿಯಾಗಿದ್ದ ಇರಾನಿನ ರೆವಲ್ಯೂಷನರಿ ಗಾರ್ಡ್‌ನ ನೌಕಾಪಡೆ ಮುಖ್ಯಸ್ಥ ಕಮೋಡರ್ ಅಲಿರೇಜಾ ಟ್ಯಾಂಗ್ಸಿರಿಯನ್ನು ಕೊಂದಿರುವುದಾಗಿ ಇಸ್ರೇಲ್ ಗುರುವಾರ ಹೇಳಿದೆ. ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಅವರು ಇತರ ಹಿರಿಯ ನೌಕಾ ಕಮಾಂಡರ್‌ಗಳೊಂದಿಗೆ ರಾತ್ರೋರಾತ್ರಿ ದಾಳಿಯಲ್ಲಿ ಹತ್ಯೆ ಮಾಡಲಾಗಿದೆ ಎಂದು ಇಸ್ರೇಲ್ ಸೇನೆ ಹೇಳಿದೆ. ಟ್ಯಾಂಗ್ಸಿರಿಯ ಹತ್ಯೆ ಬಗ್ಗೆ ಇನ್ನೂ ಇರಾನ್ ಕಡೆಯಿಂದ ಯಾವುದೇ ಸ್ಪಷ್ಟನೆ ಇಲ್ಲ.

ಅಬುಧಾಬಿಯಲ್ಲಿ ಭಾರತೀಯ ಸಾವು

ಕ್ಷಿಪಣಿಯ ಅವಶೇಷಗಳು ಬಿದ್ದ ಪರಿಣಾಮ ಇರಾನ್ ದಾಳಿ ನಡುವೆ ಯುಎಇ ರಾಜಧಾನಿ ಅಬುಧಾಬಿಯ ರಸ್ತೆಯೊಂದರಲ್ಲಿ ಭಾರತೀಯ ಪ್ರಜೆ ಸೇರಿದಂತೆ ಇಬ್ಬರು ಮೃತಪಟ್ಟಿದ್ದು, ಘಟನೆಯಲ್ಲಿ ಮೂವರು ಗಾಯಗೊಂಡಿದ್ದಾರೆ. ಯುನೈಟೆಡ್ ಅರಬ್ ಎಮಿರೇಟ್ಸ್ ರಕ್ಷಣಾ ಸಚಿವಾಲಯವು ಇರಾನ್‌ನಿಂದ ನಿರಂತರ ವೈಮಾನಿಕ ಬೆದರಿಕೆಗಳಿಗೆ ಪ್ರತಿಕ್ರಿಯಿಸುವುದನ್ನು ಮುಂದುವರಿಸಿದೆ. ಹೀಗಾಗಿ ಕ್ಷಿಪಣಿ ಅವಶೇಷಗಳು ಬಿದ್ದು ಈ ದುರಂತ ಸಂಭವಿಸಿದೆ. ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷದಲ್ಲಿ ಭಾರತೀಯ ಪ್ರಜೆಗಳ ಸಾವಿನ ಸಂಖ್ಯೆ ಈಗ ಏಳಕ್ಕೆ ಏರಿದೆ.

ಕಿರುಸುದ್ದಿ

ಜಿ7 ಶೃಂಗಸಭೆ: ಮೋದಿ ಭಾಗಿ

• ಹೊಸದಿಲ್ಲಿ: ಜೂ.15ರಿಂದ 17ರವರೆಗೆ ಫ್ರಾನ್ಸ್ ಆತಿಥ್ಯ ವಹಿಸಲಿರುವ ಮುಂಬರುವ ಜಿ7 ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ. ಯುರೋಪ್ ಮತ್ತು ವಿದೇಶಾಂಗ ವ್ಯವಹಾರಗಳ ಫ್ರೆಂಚ್ ಸಚಿವ ಜೀನ್-ನೋಯೆಲ್ ಬ್ಯಾರೋಟ್ ಅವರು ಅಬ್ಬಾಯೆ ಡೆಸ್ ವಾಕ್-ಡಿ-ಸೆರ್ನೇಯಲ್ಲಿ ನಡೆದ ಜಿ7 ವಿದೇಶಾಂಗ ಸಚಿವರ ಸಭೆಯ ಸಂದರ್ಭದಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರೊಂದಿಗೆ ಮಾತುಕತೆ ನಡೆಸಿದ ಬೆನ್ನಲ್ಲೇ ಈ ಮಾಹಿತಿ ಬಹಿರಂಗಗೊಂಡಿದೆ.

6 ನಕ್ಸಲರ ಶರಣಾಗತಿ

• ಕಾಂಕೇರ್: ಛತ್ತೀಸ್‌ಗಢದ ಕಾಂಕೇರ್ ಜಿಲ್ಲೆಯಲ್ಲಿ ಆರು ನಕ್ಸಲರು ಪೊಲೀಸರ ಮುಂದೆ ಶರಣಾಗಿದ್ದಾರೆ. ಇತ್ತೀಚೆಗೆ ಈ ನಕ್ಸಲರು ಮುಖ್ಯವಾಹಿನಿಗೆ ಸೇರುವುದಾಗಿ ಶರಣಾಗುವುದಾಗಿ ಹೇಳಿಕೊಂಡಿದ್ದರು ಎಂದು ಕಾಂಕೇರ್ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ರಾಖೇಚಾ ತಿಳಿಸಿದ್ದಾರೆ. ಸೆಲ್ಫ್ ಲೋಡೆಡ್ ರೈಫಲ್ ಮತ್ತು ಎರಡು 3.3 ರೈಫಲ್‌ಗಳನ್ನು ಶರಣಾದ ನಕ್ಸಲರು ಪೊಲೀಸರ ಮುಂದೆ ಒಪ್ಪಿಸಿದ್ದಾರೆ. ಈ ಪ್ರದೇಶದ ಇತರ ಸಕ್ರಿಯ ಕಾರ್ಯಕರ್ತರೊಂದಿಗೆ ಸಂಪರ್ಕವನ್ನು ಸ್ಥಾಪಿಸಲು ಮತ್ತು ಹಿಂಸಾಚಾರವನ್ನು ತ್ಯಜಿಸಲು ಮತ್ತು ಮುಖ್ಯವಾಹಿನಿಗೆ ಸೇರಲು ಅವರನ್ನು ಪ್ರೋತ್ಸಾಹಿಸಲು ಪ್ರಯತ್ನಗಳು ನಡೆಯುತ್ತಿವೆ.

ಗಣತಿ: ಕರ್ತವ್ಯ ಲೋಪಕ್ಕೆ ಮೂರು ವರ್ಷ ಜೈಲು ಶಿಕ್ಷೆ

• ಹೊಸದಿಲ್ಲಿ: ದೇಶದ ಬಹು ಮಹತ್ವದ ಜನಗಣತಿ 2027 ಶೀಘ್ರ ಆರಂಭವಾಗಲಿದ್ದು, ಇದಕ್ಕೂ ಮುನ್ನ ಗಣತಿದಾರರು ಪಾಲಿಸಬೇಕಾದ ಕಟ್ಟುನಿಟ್ಟಿನ ಕ್ರಮಗಳ ಬಗ್ಗೆ ಕೇಂದ್ರ ಸರ್ಕಾರ ಘೋಷಣೆ ಮಾಡಿದೆ. ಕರ್ತವ್ಯ ಲೋಪ, ಅಸಭ್ಯ ವರ್ತನೆ ಅಥವಾ ದಾಖಲೆಗಳ ದುರುಪಯೋಗ ಕಂಡುಬಂದರೆ ಗರಿಷ್ಠ ಮೂರು ವರ್ಷಗಳ ಜೈಲು ಶಿಕ್ಷೆ ಹಾಗೂ 1,000 ರೂ. ದಂಡ ವಿಧಿಸಲಾಗುವುದಾಗಿ ಎಚ್ಚರಿಕೆ ನೀಡಲಾಗಿದೆ. ಭಾರತದ ರಿಜಿಸ್ಟ್ರಾರ್ ಜನರಲ್ ಮೃತ್ಯುಂಜಯ ಕುಮಾರ್ ನಾರಾಯಣ್ ಅವರು ಎಲ್ಲಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ನೀಡಿರುವ ನಿರ್ದೇಶನದಲ್ಲಿ ಗಣತಿದಾರರ ಕರ್ತವ್ಯಗಳನ್ನು ವಿವರವಾಗಿ ಸೂಚಿಸಲಾಗಿದೆ. ಮನೆಗಳು ಬೀಗ ಹಾಕಿದ್ದರೂ ಒಂದೇ ಸಲ ಭೇಟಿ ನೀಡಿ ಹಿಂತಿರುಗದೆ, ಅಗತ್ಯವಿದ್ದರೆ ಹಲವು ಬಾರಿ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬೇಕು ಎಂದು ಸ್ಪಷ್ಟಪಡಿಸಲಾಗಿದೆ. ಜತೆಗೆ, ಮನೆಮನೆಗೆ ಭೇಟಿ ನೀಡುವ ವೇಳೆ ಸೌಜನ್ಯಪೂರ್ಣ ವರ್ತನೆ ಕಡ್ಡಾಯ ಎಂದು ಒತ್ತಿ ಹೇಳಲಾಗಿದೆ. ನಿರ್ದೇಶನದ ಪ್ರಕಾರ, ಪ್ರತಿಯೊಂದು ಕಟ್ಟಡಕ್ಕೂ ಸಂಖ್ಯೆ ನೀಡುವುದು, ಪ್ರತಿಯೊಂದು ಮನೆಗೂ ಗಣತಿ ಸಂಖ್ಯೆ ಗುರುತಿಸುವುದು, ಲೇಔಟ್ ನಕ್ಷೆಯಲ್ಲಿ ಪ್ರಮುಖ ಗುರುತುಗಳನ್ನು ದಾಖಲಿಸುವುದು, ಹಾಗೂ ಗುರುತಿನ ಚೀಟಿ ಮತ್ತು ನೇಮಕಾತಿ ಪತ್ರವನ್ನು ಜೊತೆಗಿರಬೇಕು ಎಂಬ ನಿಯಮಗಳಿವೆ. ಮನೆಮನೆಗೆ ತೆರಳಿ ಮಾಹಿತಿ ಸಂಗ್ರಹಿಸುವಾಗ ಮೊಬೈಲ್ ಆ್ಯಪ್‌ನಲ್ಲಿ ಸರಿಯಾದ ರೀತಿಯಲ್ಲಿ ಮಾಹಿತಿಯನ್ನು ದಾಖಲಿಸುವುದು ಕಡ್ಡಾಯವಾಗಿದೆ. ಜನಗಣತಿ ಕಾಯ್ದೆ, 1948ರ ಸೆಕ್ಷನ್ 11 ಅನ್ವಯದಲ್ಲಿ, ಕರ್ತವ್ಯ ನಿರಾಕರಣೆ, ಅಸಭ್ಯ ಪ್ರಶ್ನೆಗಳು, ಅಥವಾ ಗಣತಿ ದಾಖಲೆಗಳನ್ನು ಹಾನಿಗೊಳಿಸುವುದು, ಅಡಗಿಸುವುದು ಅಥವಾ ತಿದ್ದುಪಡಿ ಮಾಡುವಂತಹ ಕೃತ್ಯಗಳಿಗೆ ಶಿಕ್ಷೆ ವಿಧಿಸಲಾಗುತ್ತದೆ.

ಐಸಿಸ್, ಅಲ್-ಖೈದಾ ನಂಟು: 12 ಮಂದಿ ಸೆರೆ

• ವಿಜಯವಾಡ: ಆಂಧ್ರಪ್ರದೇಶ ಪೊಲೀಸರು ನಡೆಸಿದ ಸಂಘಟಿತ ಕಾರ್ಯಾಚರಣೆಯಲ್ಲಿ ಐಸಿಸ್ ಮತ್ತು ಅಲ್-ಖೈದಾ ಸೇರಿದಂತೆ ನಿಷೇಧಿತ ಉಗ್ರಗಾಮಿ ಸಂಘಟನೆಗಳೊಂದಿಗೆ ಸಂಪರ್ಕ ಹೊಂದಿದ್ದ ಶಂಕೆಯ ಮೇಲೆ 12 ಮಂದಿಯನ್ನು ಬಂಧಿಸಲಾಗಿದೆ. ಬಿಹಾರ, ದಿಲ್ಲಿ, ಕರ್ನಾಟಕ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ತೆಲಂಗಾಣ ಮತ್ತು ರಾಜಸ್ಥಾನಗಳಲ್ಲಿ ವಿಶೇಷ ತಂಡಗಳನ್ನು ನಿಯೋಜಿಸಿ ಈ ಬಂಧನ ಪ್ರಕ್ರಿಯೆ ನಡೆಸಲಾಗಿದೆ. ಆಂಧ್ರಪ್ರದೇಶದ ವಿಜಯವಾಡದ ನಿವಾಸಿಗಳಾದ ಮೊಹಮ್ಮದ್ ರಹಮತುಲ್ಲಾ ಷರೀಫ್, ಮಿರ್ಜಾ ಸೊಹೈಲ್ ಬೇಗ್ ಮತ್ತು ಮೊಹಮ್ಮದ್ ದ್ಯಾನಿಶ್ ಎಂಬುವವರನ್ನು ಬಂಧಿಸಲಾಗಿದೆ. ಬಂಧಿತರು ಉಗ್ರಗಾಮಿ ಸಿದ್ಧಾಂತಗಳನ್ನು ಪ್ರಚಾರ ಮಾಡುವ ಮತ್ತು ನಿಷೇಧಿತ ಸಂಘಟನೆಗಳ ಚಟುವಟಿಕೆಗಳನ್ನು ಸಂಯೋಜಿಸುವ ಆರೋಪ ಎದುರಿಸುತ್ತಿದ್ದಾರೆ. ಆರೋಪಿಗಳು 'ಅಲ್ ಮಲಿಕ್ ಇಸ್ಲಾಮಿಕ್ ಯೂತ್' ಎಂಬ ಗುಂಪನ್ನು ರಚಿಸಿಕೊಂಡು ಯುವಕರನ್ನು ಉಗ್ರಗಾಮಿ ಸಿದ್ಧಾಂತಕ್ಕೆ ಪ್ರೇರೇಪಿಸುತ್ತಿದ್ದರು ಎಂದು ತನಿಖೆಯಿಂದ ತಿಳಿದುಬಂದಿದೆ. ಬಂಧಿತರು ಅಲ್-ಖೈದಾ (ಎಕ್ಯೂಐಎಸ್) ಮತ್ತು ಐಸಿಸ್ ಸಂಘಟನೆಗಳ ವಿದೇಶಿ ಹ್ಯಾಂಡ್ಲರ್‌ಗಳ ಸೂಚನೆಯಂತೆ ಕಾರ್ಯನಿರ್ವಹಿಸುತ್ತಿದ್ದರು. ಸಾಮಾಜಿಕ ಜಾಲತಾಣಗಳಲ್ಲಿ ರಾಷ್ಟ್ರಧ್ವಜವನ್ನು ಅವಮಾನಿಸುವುದು ಮತ್ತು ಉಗ್ರಗಾಮಿ ಪರ ವಿಡಿಯೋಗಳನ್ನು ಹಂಚಿಕೊಳ್ಳುವ ಮೂಲಕ ಯುವಕರನ್ನು ನೇಮಕಾತಿ ಮಾಡಿಕೊಳ್ಳುತ್ತಿದ್ದರು. ಶಂಕಿತರು ಮುಂದಿನ ಒಂದು ತಿಂಗಳೊಳಗೆ ತರಬೇತಿಗಾಗಿ ಪಾಕಿಸ್ತಾನಕ್ಕೆ ಪ್ರಯಾಣಿಸಲು ಸಿದ್ಧತೆ ನಡೆಸಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಪಾರ ಮೌಲ್ಯದ ಅಕ್ರಮ ವಸ್ತು ವಶ

• ಹೊಸದಿಲ್ಲಿ: ಕಳೆದ ಒಂದು ತಿಂಗಳ ಅವಧಿಯಲ್ಲಿ, ನಾಲ್ಕು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ ಮತದಾರರ ಮೇಲೆ ಪ್ರಭಾವ ಬೀರಲು ಸಂಗ್ರಹಿಸಲಾಗಿದ್ದ 408 ಕೋಟಿ ರೂ.ಗೂ ಅಧಿಕ ಮೌಲ್ಯದ ಅಕ್ರಮ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಚುನಾವಣಾ ಆಯೋಗ ಗುರುವಾರ ತಿಳಿಸಿದೆ. ವಶಪಡಿಸಿಕೊಂಡ ವಸ್ತುಗಳಲ್ಲಿ 17.44 ಕೋಟಿ ರೂ. ನಗದು, 37.68 ಕೋಟಿ ರೂ. ಮೌಲ್ಯದ ಮದ್ಯ ಮತ್ತು 167.38 ಕೋಟಿ ರೂ. ಮೌಲ್ಯದ ಡ್ರಗ್ಸ್ ಸೇರಿವೆ. ಫೆ.26ರಂದು ಎಲೆಕ್ಟ್ರಾನಿಕ್ ಸೀಜರ್ ಮ್ಯಾನೇಜ್‌ಮೆಂಟ್ ಸಿಸ್ಟಮ್ ಸಕ್ರಿಯಗೊಳಿಸಿದ ನಂತರ ಜಾರಿ ಸಂಸ್ಥೆಗಳು 23 ಕೋಟಿ ರೂ. ಮೌಲ್ಯದ ಬೆಲೆಬಾಳುವ ಲೋಹಗಳು ಮತ್ತು 163.30 ಕೋಟಿ ರೂ. ಮೌಲ್ಯದ ಉಚಿತ ಉಡುಗೊರೆಗಳನ್ನು ಜಪ್ತಿ ಮಾಡಿವೆ. ಸಿವಿಜಿಲ್ ಅಪ್ಲಿಕೇಶನ್ ಮೂಲಕ ಮಾರ್ಚ್ 15 ರಿಂದ 25 ರ ನಡುವೆ 70,944 ದೂರುಗಳು ದಾಖಲಾಗಿವೆ. ಈ ಪೈಕಿ ಶೇ.95.8ರಷ್ಟು ದೂರುಗಳನ್ನು ಅಧಿಕಾರಿಗಳು 100 ನಿಮಿಷಗಳ ಒಳಗಾಗಿ ಪರಿಹರಿಸಿದ್ದಾರೆ. ಸಾರ್ವಜನಿಕರು 1950 ಸಹಾಯವಾಣಿ ಸಂಖ್ಯೆಯ ಮೂಲಕವೂ ದೂರುಗಳನ್ನು ಸಲ್ಲಿಸಬಹುದಾಗಿದೆ ಎಂದು ಆಯೋಗ ತಿಳಿಸಿದೆ.

ತಪಾಸಣೆಯ ವೇಳೆ ಸಾಮಾನ್ಯ ನಾಗರಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು ಜಿಲ್ಲಾ ಕುಂದುಕೊರತೆ ಸಮಿತಿಗಳನ್ನು ಸ್ಥಾಪಿಸಲಾಗಿದೆ. ಪಶ್ಚಿಮ ಬಂಗಾಳ, ಅಸ್ಸಾಂ, ತಮಿಳುನಾಡು, ಪುದುಚೇರಿ ಮತ್ತು ಕೇರಳದಲ್ಲಿ ಮುಂದಿನ ತಿಂಗಳು ವಿಧಾನಸಭಾ ಚುನಾವಣೆಗಳು ನಡೆಯಲಿದ್ದು, ಮಾರ್ಚ್ 15 ರಂದು ಅಧಿಕೃತವಾಗಿ ಘೋಷಣೆಯಾಗಿದೆ.

ಸೂರ್ಯ ಮಂದಿರದ ಮೇಲೆ ಧ್ವಜಾರೋಹಣ



• ಅಯೋಧ್ಯೆ : ಚೈತ್ರ ನವರಾತ್ರಿಯ ಅಷ್ಟಮಿಯ ದಿನದಂದು ಶ್ರೀ ರಾಮ ಜನ್ಮಭೂಮಿ ಮಂದಿರದ ಆವರಣದಲ್ಲಿರುವ ಸೂರ್ಯ ಮಂದಿರದ ಮೇಲೆ ವೈದಿಕ ವಿಧಿ ವಿಧಾನಗಳ ಮೂಲಕ ಧ್ವಜಾರೋಹಣ ಮಾಡಲಾಯಿತು. ಈ ಸಂದರ್ಭದಲ್ಲಿ ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರದ ಖಜಾಂಚಿಗಳಾದ ಗೋವಿಂದ ದೇವ ಗಿರಿ ಮಹಾರಾಜ, ವಿಶ್ವ ಹಿಂದೂ ಪರಿಷತ್ತಿನ ಕೇಂದ್ರೀಯ ಕಾರ್ಯದರ್ಶಿಗಳಾದ ಗೋಪಾಲ ಜಿ, ಪೊಲೀಸ್ ವರಿಷ್ಠಾಧಿಕಾರಿ ಬಲರಾಮಚಾರಿ ದುಬೆ ಭಾಗವಹಿಸಿದ್ದರು. ಶ್ರೀ ರಾಮ ನವಮಿಯ ನಿಮಿತ್ತವಾಗಿ ಶುಕ್ರವಾರ ಬೆಳಗ್ಗೆ 5:30 ರಿಂದ ರಾತ್ರಿ 11:00 ಗಂಟೆಯವರೆಗೆ ಸಾಮಾನ್ಯ ದರ್ಶನಕ್ಕೆ ಅವಕಾಶವಿದೆ ಎಂದು ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರದ ಟ್ರಸ್ಟಿಗಳಾದ ಅನಿಲ ಮಿಶ್ರಾ ತಿಳಿಸಿದ್ದಾರೆ.

ಆಂಧ್ರದಲ್ಲಿ ಅಪಘಾತ: ಹೊತ್ತಿ ಉರಿದ ಬಸ್, ಟಿಪ್ಪರ್ ಲಾರಿ

14 ಪ್ರಯಾಣಿಕರ ಸಜೀವ ದಹನ

• ಮಾರ್ಕಾಪುರಂ: ಆಂಧ್ರಪ್ರದೇಶದ ಮಾರ್ಕಾಪುರಂ ಜಿಲ್ಲೆಯಲ್ಲಿ ಗುರುವಾರ ಮುಂಜಾನೆ ಖಾಸಗಿ ಪ್ರಯಾಣಿಕ ಬಸ್ ಟಿಪ್ಪರ್ ಲಾರಿಗೆ ಡಿಕ್ಕಿ ಹೊಡೆದು ಬೆಂಕಿಗೆ ಆಹುತಿಯಾಗಿ 14 ಮಂದಿ ಮೃತಪಟ್ಟಿದ್ದು, 25 ಮಂದಿ ಗಾಯಗೊಂಡಿದ್ದಾರೆ. ಬಸ್ ಮತ್ತು ಟಿಪ್ಪರ್ ಎರಡೂ ಸಂಪೂರ್ಣ ಸುಟ್ಟು ಕರಕಲಾಗಿವೆ. ಗಾಯಾಳುಗಳನ್ನು ಮಾರ್ಕಾಪುರಂನ ಖಾಸಗಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಸಾವಿನ ಸಂಖ್ಯೆ ಹೆಚ್ಚುವ ಸಾಧ್ಯತೆ ಇದೆ. ಹೈದರಾಬಾದ್‌ನಿಂದ ಪಾಮೂರು ಕಡೆಗೆ ಸಂಚರಿಸುತ್ತಿದ್ದ ಬಸ್ ಪಲಕಲಾ ಕ್ರಾಸ್‌ಗಳ ಬಳಿ ಟಿಪ್ಪರ್ ಲಾರಿಗೆ ಡಿಕ್ಕಿ ಹೊಡೆದಿದೆ.

ಅಪಘಾತದ ವೇಳೆ ಬಸ್‌ನಲ್ಲಿ 41 ಜನರಿದ್ದರು. ಘಟನೆ ಬಗ್ಗೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಮತ್ತು ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು ಘಟನೆಗೆ ಸಂತಾಪ ಸೂಚಿಸಿದ್ದಾರೆ.

ಮೃತರ ಕುಟುಂಬಸ್ಥರಿಗೆ ಪಿಎಂಎನ್‌ಆರ್‌ಎಫ್‌ನಿಂದ 2 ಲಕ್ಷ ರೂ. ಪರಿಹಾರ ಗಾಯಾಳುಗಳಿಗೆ 50,000 ರೂ.ಗಳನ್ನು ಪ್ರಧಾನಿ ಮೋದಿ ಘೋಷಿಸಿದರು.

ಪುತ್ರನ ಜೀವ ಉಳಿಸಿದ ತಾಯಿ: ಹೃದಯ ವಿದ್ರಾವಕ ಘಟನೆಯಲ್ಲಿ ತಾಯಿಯೊಬ್ಬಳು ತನ್ನ ಪುತ್ರನನ್ನು ರಕ್ಷಿಸಿ ತಾನು ಜೀವ ಬಿಟ್ಟ ಘಟನೆ ಸಂಭವಿಸಿದೆ. ಬಸ್‌ಗೆ ಬೆಂಕಿ ತಗುಲುತ್ತಿದೆ ಎಂಬ ಸೂಚನೆ ದೊರಕಿದ ಕೂಡಲೇ ತಾಯಿ ತನ್ನ ಪುತ್ರನನ್ನು ಬಸ್ ಕಿಟಕಿಯಿಂದ ಹೊರ ಹಾಕಿ ಪುತ್ರನ ಜೀವ ಉಳಿಸಿ ಮರುಜನ್ಮ ನೀಡಿದ್ದಾಳೆ. ಆದರೇ ತಾಯಿ ರಮಾದೇವಿ ಬೆಂಕಿಗೆ ಆಹುತಿಯಾಗಿದ್ದಾರೆ.



ನದಿಗೆ ಉರುಳಿದ ಬಸ್ 24 ಮಂದಿ ಸಾವು

• ಢಾಕಾ: ಪ್ರಯಾಣಿಕರನ್ನು ಹೊತ್ತೊಯ್ಯುವ ಸಾಗಿಗೆ ದೋಣಿಗೆ ಏರುವ ವೇಳೆ ಬಾಂಗ್ಲಾದೇಶದಲ್ಲಿ ಸಾಗಿಗೆ ಬಸ್ ನದಿಗೆ ಉರುಳಿ ಕನಿಷ್ಠ 24 ಮಂದಿ ಮೃತಪಟ್ಟಿದ್ದು, ಹಲವರು ನಾಪತ್ತೆಯಾಗಿದ್ದಾರೆ. ನೈಋತ್ಯ ಜಿಲ್ಲೆ ರಾಜ್‌ಬರಿ ದೌಲತ್ದಿಯಾ ಟರ್ಮಿನಲ್‌ನಲ್ಲಿ ಬುಧವಾರ ಸಂಜೆ 5.15ರ ಸುಮಾರಿಗೆ ಬಸ್ ಪದ್ಮಾ ನದಿಗೆ ಉರುಳಿದೆ. ಢಾಕಾಕ್ಕೆ ತೆರಳುತ್ತಿದ್ದ ಬಸ್‌ನಲ್ಲಿ ಹಲವಾರು ಮಕ್ಕಳು ಸೇರಿದಂತೆ ಸುಮಾರು 40 ಪ್ರಯಾಣಿಕರಿದ್ದರು, ಅವರಲ್ಲಿ ಹೆಚ್ಚಿನವರು ತಮ್ಮ ಈದ್ ರಜಾದಿನಗಳ ನಂತರ ರಾಜಧಾನಿಗೆ ಮರಳುತ್ತಿದ್ದರು. 11 ಪ್ರಯಾಣಿಕರು ಈಜಿ ಕೊಂಡು ಹಾಗೂ ಸ್ಥಳೀಯರ ನೆರವಿನಿಂದ ದಡಕ್ಕೆ ಬಂದು ಜೀವ ಉಳಿಸಿಕೊಂಡಿದ್ದಾರೆ. ಬಸ್ ಇದ್ದಂತಹ ಬಾಂಟ್‌ಗೆ ಬೇರೊಂದು ಸಣ್ಣ ಬಾಂಟ್ ಡಿಕ್ಕಿಯಾಗಿದ್ದು, ಈ ವೇಳೆ ಬಸ್ ಚಾಲಕ ನಿಯಂತ್ರಣ ಕಳೆದುಕೊಂಡಿದ್ದರಿಂದ ಈ ಘಟನೆ ಸಂಭವಿಸಿದೆ.

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಪ್ರತೀ ವರ್ಷದಂತೆ ಸಂಭ್ರಮಾಚರಣೆ

ಮತಕ್ಕಾಗಿ ಟಿಎಂಸಿ ರಾಮನವಮಿ ಆಚರಣೆ!

• ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಪ್ರತೀ ವರ್ಷದಂತೆ ಈ ಬಾರಿಯೂ ರಾಮ ನವಮಿ ಆಚರಿಸಿತು. ವಿಚಿತ್ರವೆಂದರೆ ಹಿಂದು-ಹಿಂದುತ್ವ ವಿರೋಧಿ ಟಿಎಂಸಿ, ಮುಂಬರುವ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ತಾನೂ ರಾಮನವಮಿ ಆಚರಿಸುವ ಮುಖೇನ ಅಚ್ಚರಿ ಮೂಡಿಸಿದೆ.

ಕೋಲ್ಕತ್ತಾದಾದ್ಯಂತ ಮತ್ತು ಹಲವಾರು ಜಿಲ್ಲೆಗಳಲ್ಲೂ, ಗುರುವಾರ ಎಲ್ಲಾ ಬೀದಿ ಬೀದಿಗಳು, ಓಣಿಕೇರಿಗಳು ಸಾವಿರಾರು ಕೇಸರಿ ಧ್ವಜಗಳ ರಂಗಿನಿಂದ ಶೋಭಾಯಮಾನವಾಗಿತ್ತು. ನೆರೆ ಜಿಲ್ಲೆಗಳಿಂದಲೂ ಸಾಗಿಬಂದ ನೂರಾರು ಶೋಭಾಯಾತ್ರೆಗಳಲ್ಲಿ ಪಾಲ್ಗೊಂಡಿದ್ದ ಪ್ರವಾಹೋಪಾದಿ ಜನರ ಜೈಶ್ರೀರಾಮ್ ಘೋಷಣೆ ಪರಿಸರವಿಡೀ ಅನುರಣಿಸಿತ್ತು. ಬಂಗಾಳದಲ್ಲಿ ಹಿಂದೆಂದೂ ಇಷ್ಟೊಂದು ಗೌಜಿಗದ್ದಲದೊಂದಿಗೆ ಶ್ರೀರಾಮ ನವಮಿ ಆಚರಣೆಯಾದ್ದಿಲ್ಲ ಅಥವಾ ತೀರಾ ಸರಳವಾಗಿ ಆಚರಣೆಯಾಗುತ್ತಿತ್ತು. ಈ ಬಾರಿ ಟಿಎಂಸಿ ಕೂಡ ಶ್ರೀರಾಮ ಭಕ್ತಿ ಮೆರೆದದ್ದು ವಿಪರ್ಯಾಸವೆಂದು ವಿಶ್ಲೇಷಿಸಲಾಗಿದೆ.

ಬಿಜೆಪಿ ಆಯೋಜಿಸಿರುವ ಎರಡು ದಿನಗಳ ಶ್ರೀರಾಮ ನವಮಿ ಕಾರ್ಯಕ್ರಮಗಳಲ್ಲಿ ಒಟ್ಟೂ 2ಕೋಟಿ ಜನರು ಸೇರುವ ನಿರೀಕ್ಷೆಯಿದೆ. ಇದು ಭಕ್ತಿ-ಶ್ರದ್ಧೆಯ ವಿಚಾರವಾದರೂ ರಾಜಕೀಯ ವಿಶ್ಲೇಷಕರು ಇದನ್ನು ಬೇರೇ ರೀತಿ ವಿಶ್ಲೇಷಿಸಿದ್ದಾರೆ. 2016ರಿಂದೀಚೆಗೆ ರಾಜ್ಯ ರಾಜಕೀಯ ರಂಗದಲ್ಲಿ ಬಿಜೆಪಿ ಬಲ ನಿರಂತರವಾಗಿ ವರ್ಧಿಸುತ್ತಿದೆ. ಈ ನಿಟ್ಟಿನಲ್ಲಿ ಹಿಂದು ಅಸ್ಮಿತೆಯನ್ನು ಬಿಂಬಿಸಲು ಮತ್ತು ಜನಬೆಂಬಲವನ್ನು ಮತ್ತಷ್ಟು ಗಟ್ಟಿಗೊಳಿಸಲು ಉತ್ಸವವನ್ನು ಗೌಜಿಯಿಂದ ಆಯೋಜಿಸಲಾಗಿದೆ ಎಂಬುದು ವಿಶ್ಲೇಷಕರ ಟೀಕಾಸ್ತ್ರ.

ಇನ್ನು, ಕಳೆದ ಕೆಲವು ವರ್ಷಗಳಿಂದ ಟಿಎಂಸಿಯ ಹಲವು ನಾಯಕರು ರಾಮನವಮಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಶುರುವಿಟ್ಟಿದ್ದಾರೆ ಅಥವಾ ಸ್ಥಳೀಯವಾಗಿ ಮೆರವಣಿಗೆಗಳನ್ನು ಆಯೋಜಿಸಲು ತೊಡಗಿದ್ದಾರೆ. ಬಿಜೆಪಿಯ ಹಿಂದುತ್ವ ಸಿದ್ಧಾಂತವನ್ನು ಮಟ್ಟಹಾಕುವುದು ಟಿಎಂಸಿಯ ಹೊಸ ರಾಮಭಕ್ತಿ ಹಿಂದಿನ ಉದ್ದೇಶವೆಂಬುದು ರಾಜಕೀಯ ವಿಶ್ಲೇಷಕರ ವ್ಯಾಖ್ಯಾನ. ಶ್ರೀರಾಮ ಯಾವುದೇ ರಾಜಕೀಯ ಪಕ್ಷಕ್ಕೆ ಸೀಮಿತನಲ್ಲ, ಪ್ರತಿಯೋರ್ವರಿಗೂ ಸೇರಿದವನು ಎಂದು ಮುಖ್ಯಮಂತ್ರಿ ಮಮತಾಬ್ಯಾನರ್ಜಿ ಈಚೆಗೆ ವ್ಯಂಗ್ಯ ನುಡಿಯಾಡಿದ್ದು ಉಲ್ಲೇಖಾರ್ಹ. ಶ್ರೀರಾಮ ನವಮಿ ಉತ್ಸವಕ್ಕೆ ಬಿಜೆಪಿ ಭರದ ಸಿದ್ಧತೆ ನಡೆಸುತ್ತಿದ್ದಾಗ ಮಮತಾ ಈ ಕಿರ ಹೇಳಿದ್ದರು.

ಬಿಜೆಪಿ ಉತ್ತರ ಭಾರತದ ಹಿಂದುತ್ವ ರಾಜನೀತಿಯನ್ನು ಬಂಗಾಳಕ್ಕೆ ಆಮದು ಮಾಡಿಕೊಳ್ಳಲು ಶ್ರಮಿಸುತ್ತಿದೆ ಎಂದು ವಾಮಪಂಥೀಯರು ಮತ್ತು ಕಾಂಗ್ರೆಸ್ ನಾಯಕರು ಆರೋಪಿಸಿದ್ದಾರೆ.



DOCUMENT LOST

(Lost of Gift Deed)

I, MOHAMED AMZAD PASHA, S/o M. Sheq Mahaboob, Aged about 52 years, Residing at Ward No. 27 Fort, Sidlaghatta Town, Sidlaghatta Taluk, Chikkaballapura-562105, do hereby inform to the General Public that I am the absolute owner of a property bearing Site No (Assessment No.) 386/253 + 387/254 PID No.12-540-148, Form No.-III Sl.No.343 Fort, 1st Division, Siddlaghatta Town, Chikkaballapura District, measuring East to West 45 feet and North to South 29½ feet out of East to West 73 feet and North to South 29½ feet, along with building bounded on East by Same Number belongs to M.Amzad Pasha and passage left to M.Afsar Pasha West by Kandaka, North by Nandi Munnas House South by J.M.Imtiyaz's House., And Mr.M.Afsar Pasha have acquired the same through a registered Gift Deed vide registered Document No.SDG-1-03330-2013-14, of Book-I, CD.No.SDGD87, Dated 30.11.2013, in the office of the Sub-Registrar, Sidlaghatta, executed by Smt.Shahanaz Begum. I, further declare that, I have lost the above said original Gift Deed at Sidlaghatta Bus Stop, Bangalore on 22.03.2026, after that, inspite of my best search I could not traced out the same in this regard the complaint was lodged by me vide complaint No. 2125615/2026, dated 26.03.2026 in concerned Police Station Authorities, of Bangalore City Crime branch Police Station Limits Bangalore. If anybody finds the above said document please inform to

J.K. MANJUNATH, Advocate
Hebbal, Bangalore (Mob: 8050111770) my client has lost the document.

ಸಾರ್ವಜನಿಕ ಪ್ರಕಟಣೆ

BEFORE THE MOTOR ACCIDENT CLAIMS TRIBUNAL SCCH-11 AT BANGALORE

Misc 253/ 2025
In
M.V.C.7179/2019.

BETWEEN
Kamurthi
Thimmarajulu Kamurthi & Other's. ...Petitioner
AND
Girisha & Another. ...Respondents

Notice to Respondent No-1
Gireesha.K, S/o. Kamurthi Thimmarajulu., No. 98, R.No.402, Chandrashekar Nilayam, 5th Cross, Lakeview Bommanahalli, Bangalore

NOTICE - PAPER PUBLICATION

WHEREAS, take notice that the above-named ...

By Order of the Court
Assistant Registrar
Court of Small Causes
Bangalore -
Advocate Name & Address:
Krishnamurthy S G
Advocates, Office At No. 145, 1st Floor, 2nd Cross, 2nd Main, Opp ASB Developers, Sunkadakatte, Bangalore - 560 091 M: 9964096376

...

To, Defendant Address: Mr. Thejeshwar, A S/o B. Ashoka, Aged about 28 years, R/at No.2071, Benson Road, Benson Town, Bangalore 560046

WHEREAS, the above named plaintiff instituted a suit against you for recovery of money of Rs. 4,00,000/- (Rupees Four Lakhs only) with interest at 18% per annum from the date of the suit till realization from the defendant.

You are hereby summoned to appear before the Hon'ble Court of Addl. City Civil and Sessions Judge (CCH45) on 23.04.2026 at 11.00 am in person or through advocate / pleader to answer the questions to the same, failing which the suit will be heard and determined as Ex Parte.

Given under my hand & seal of the Court, this 24th day of March 2026

By order of the Court, Senior Sheristadar
City Civil court, Bangalore.

Advocate for plaintiff : Ganesh Nag, J 8/1, First Floor, Ali Askar Cross Road (Cunningham Cross Road), Bangalore-52.

IN THE COURT OF THE 3rd ADDITIONAL CIVIL JUDGE AND JMFC AT ANEKAL

C.Misc. No. 1970/2025

Petitioners: 1. Sri. Muniswamachari @ Nagaraja. S/o Late Munivappachari, aged about 59 years R/at Mayasandra Village, Attibele Hobli, Anekal Taluk, Bangalore - 562106. Now R/at Karpur Village, Kasaba Hobli, Anekal Taluk, Bangalore - 562106 2. Smt. Susheelamma, D/o Late Munivappachari, W/o Subramani, aged about 57 years R/At Avalahalli Village, Hosur Taluk, Krishnagiri District, Tamilnadu

-Vs-

Respondent: The Tahasildar, Anekal Town

NOTICE

Whereas the petitioners have filed the above petition for seeking the death certificate of Grand Mother of petitioners namely Smt. Nanjamma W/o Late Muniswamachari who was died on 17/09/1992 at His house Mayasandra Village, Attibele Hobli, Anekal Taluk, Bengaluru District before the 3rd Additional Civil Judge and JMFC at Anekal, whereas the above petition is fixed for hearing date on 11/06/2026 at 11.00 AM if anybody interest in this matter regard to appear in this court in person or by a pleader to file objections the same of you failing which the petition will be disposed on enquiry.

Given under my hand and seal of the Court on this 18/03/2026

By order of the Court, Sheristadar, Civil Judge (Jr.dvn) and JMFC Court, Anekal

Advocate for Petitioner: Sri. C. Suresha
Office at C. Muniyappa Building, 1st Floor, Near Dr. Mohan Clinic, Attibele Main Road, Anekal Town, Bengaluru Urban District.

IN THE COURT OF THE III ADDITIONAL CIVIL JUDGE & JMFC AT: ANEKAL

C.MIS. No. 1998/2025

1. Sri. Anneyappa S/o late Chinnappa & late Chinnamma Aged about 55 years. 2. Smt. Venkatalakshmi W/o late Krishnappa Aged about 33 years. 3. Kumari. Rakshitha D/o late Krishnappa Aged about 19 years, All are R/at: Yallammanadoddi Village, Jigani Hobli, Anekal Taluk, Bangalore Urban District. ...Petitioners

-V/s- The Thasildar, Anekal Taluk, Bangalore Urban Dist. ...Respondent

PUBLIC NOTICE

Whereas the petitioners have filed the above petition for seeking the death certificate of their mother of the petitioner namely Chinnamma W/o late Chinnappa, she was died on 27.10.2011 at Yallammanadoddi Village, Jigani Hobli, Anekal Taluk Bangalore Urban Dist, before the 3rd Additional Civil Judge and JMFC at Anekal, whereas the above petition is fixed for hearing date on 06-05-2026. Anybody interest in third matter regard to appear in this court in personally or by a pleader to file objections the same of you failing which the petition will be disposed on enquiry ...

PUBLIC NOTICE

DOCUMENT LOST

I, LOKAMBA R W/o Dhanaprakash, Age 59 years, R/at Harshith Apartment, A/2 IV Main, 7th Sector, HSR Layout, Bangalore-560102, do hereby solemnly affirm on oath as follows;

1. I state that, I have obtained original Registered Sale deed Document No. 1225/2020, book I, pages 16 dated 20-02-2020 in the Denkanikotai Sub Registrar, and Document No. TPB7265799/2020 and patta No. 5056 schedule property under old Sy.No. 730/7A dry extent Hectare 0.25.5 Asst. 1.26 NP out of this an extent of AC 16.41 cents Ind a per patta No.5055, new sub division, Sy.No. 730/7A2, dry extent 0.06.65 Asst. 0.33 NP out of this extent a 1230 sqft vacant site in this land, Ward No. 16, Lachugura Palayam, Denkanikottai, Kalemangalam Union Council, Krishnagiri District. I have lost the above said sale deed while at the time of painting my home, on 07-03-2026. I have lodged jurisdictional police compliant on 17-03-2026. If any body found kindly report to the nearest police station.

B.A. VANAMALA, Advocate (536/94)
High Court Advocate
LOKAMBA .R.
Phone No. 88610 72843

BEFORE THE MOTOR ACCIDENT CLAIMS TRIBUNAL SCCH 23 AT BANGALORE

M.V.C. 3641/2025

BETWEEN
Jhansi & Other's. ...Petitioner
AND
Raja & Others
Notice to Respondent No-1
G Raja, S/o L...

NOTICE PAPER PUBLICATION

...

IN THE COURT OF THE SENIOR CIVIL JUDGE AND JMFC AT HOSAKOTE

O.S. No. 871/2024

BETWEEN: Sri. Ramesh K. and others ... PLAINTIFFS
AND: Sri. Narayanaswamy and others ... DEFENDANTS

SUMMONS TO THE DEFENDANT No.16

16. Smt. Gajalakshmi, D/o. Narayanappa, W/o. Krishnakumar, aged about 29 years, R/at Byrathi Village, Horamavu Post, K.R. Puram Hobli, Bengaluru East Taluk,

NOTICE UNDER ORDER V RULE 20 READ WITH SECTION 151 OF CODE OF CIVIL PROCEDURE, 1908

WHEREAS, the Plaintiffs have filed the above suit for the relief of partition and separate possession respect of

ITEM No.1: All that piece and parcel of the land bearing Sy. No. 42 measuring 1 acre 21.04 gunta situated at Goravigere Village, Bidarahalli Hobli, Bengaluru East Taluk, bounded on: East by: Land of Papanna and others, West by: Gramatana and Road, North by: Land of Basappa and Lakshmaiah, South by: Road.

ITEM No.2: All that piece and parcel of the land bearing Sy. No. 44/4 measuring 1 acre 17 gunta situated at Goravigere Village, Bidarahalli Bengaluru East Taluk, bounded on: East by: Land of Hendigal Munishami, West by: Land of Chikkamuniyappa, North by: Land of Dupanahalli Yajamana, South by: Land of Jayendra and MTB Nagaraj.

ITEM No.3: All that piece and parcel of the land bearing Sy. No.283 measuring 00-11 gunta situated at Amanidoddakere Village, Kasaba Hobli, Hosakote Taluk, Bengaluru Rural District : East by: Land of Appaiah, West by: Raja Kaluve, North by: Land of Narayanappa, South by : Land of Nanjundappa

ITEM No.4: All that piece and parcel of the land bearing Sy. No. 276/1 measuring 00-20 gunta, situated at Amanidoddakere Village, Kasaba Hobli, Hosakote Taluk, Bengaluru Rural District: East by: Land of Rajamma West by: land of H.N. Shivakumar, North by: Land of K.N. Kishore, South by: Land of Manjunath

ITEM No.5: All that piece and parcel of the land bearing Sy. No. 275/3 measuring 00-13 gunta, situated at Amanidoddakere Village, Kasaba Hobli, Hosakote Taluk, Bengaluru Rural District: East by : Karabi Nerival, West by: Land of Thoti Papanna, North by: Land of M. Ramachandra, South by: Land of Ramaswamy

ITEM No.6: All that piece and parcel of the ...

Given under my hand and seal of the court, on this 26/03/2026

By order of the Court, Sheristadar, Senior Civil Judge & J.M.F.C Court, Hosakote

PODDUR VIJAYRAJU, K. VARAPRASAD
K.T. KADOOR, Advocates
No. 210, "Shree Nilaya", Near Church, Prashanth Nagar, Budigere Road, Devanahalli - 562110.

IN THE COURT OF THE II ADDL SENIOR CIVIL JUDGE AND J.M.F.C AT CHICKBALLAPUR

...

You the Respondent No.1, 9 to 12 are hereby directed to appear in the above said court in person or through pleader duly instructed and able to answer all material questions relating in the Petition or to accompanied by some person able to answer all such questions on 23.04.2026 at 11.00 o clock in forenoon.

SCHEDULE

The property bearing Sy.No.32, measuring 3-19 acres/guntas situated at Nallenahalli Village, Kasaba Hobli Chickaballapur Taluk and District, bounded on:- East by: Land of Louis, West by: Land of Anthony, North by : Road, South by : Private Property.

Take notice that in default of your appearance on the date before mentioned in the notice, it will be heard and determine ex-parte.

Given under my hand and seal of the court on the day of 26.03.2026.

By Order of the Court, Chief Ministerial Officer, Senior Civil Judge & C.J.M Court, Chickaballapura.
Advocate for Service
Narasamma, Advocate, Devanahalli.

PUBLIC NOTICE

Resurgent Legal LLP, Sector-50, Gurugram
Rohan Saluja: +91-9810150986

On behalf of our Client, intending Purchaser of the property described hereunder, notice is given to all concerned.

PROPERTY: Plot Cedar Crest No. 029, Block J, Nirvana Country, South City-II, Gurugram — 306.60 Sq. Mtrs. — Tehsil Wazirabad, Gurugram — Prop. ID: 1C78B796. Bounded: N: CC-028 | S: CC-030 | E: Road | W: Other's Land.

TITLE: (i) Purchased by Late Sh. Yash Pall Vatsa & Late Smt. Sudershan Vatsa vide Vasika No. 8280 dt. 13.07.2007, SR Gurgaon. (ii) Smt. Sudershan Vatsa expired 18.05.2016; share devolved on legal heirs. (iii) Civil Suit CNR-HRGR02-003883-2016 decreed 22.11.2018 — Late Sh. Yash Pall Vatsa declared sole owner; decree registered as Reg. No. 11438 dt. 07.01.2019 & Reg. No. 14671 dt. 03.01.2019. (iv) Transferred to Sh. Sanjay Vatsa (OCI, U.S.A.) vide Transfer Deed Reg. No. 14657 dt. 28.03.2019, SR Wazirabad, Gurugram. (v) Sh. Sanjay Vatsa proposes to sell to our Client vide Sale Deed to be registered, SR Wazirabad, Gurugram.

ALL PERSONS having or claiming any right, title, interest, lien, charge, mortgage, encumbrance, prior agreement to sell, power of attorney, or any other claim of any nature whatsoever in respect of the above property are HEREBY CALLED UPON TO LODGE THEIR OBJECTION/CLAIM IN WRITING with the undersigned within 21 (TWENTY-ONE) DAYS from the date of publication of this Notice. Failure to respond within this period shall be construed as waiver of all claims and the transaction shall proceed without further notice to any person.

Claims to: Resurgent Legal LLP, Unit 904, 9th Fl, Tower-C, Unitech Business Zone, Sector-50, Gurugram-122018. Tel: +91-9810150986 | Email: rohan.saluja@resurgentlegal.com

Pub: 27.03.2026 Last date: 17.04.2026 For Resurgent Legal LLP, Gurugram

ನಗರಸಭಾ ಕಾರ್ಯಾಲಯ, ಹೂಟಗಳ್ಳಿ

ಹೂಟಗಳ್ಳಿ, ಮೈಸೂರು ಜಿಲ್ಲೆ -570018
ದೂರವಾಣಿ ಸಂಖ್ಯೆ: 0821-2001737
ka.hootagalli.cmc@gmail.com

ಟೆಂಡರ್ ಪ್ರಕಟಣೆ

ನಂ.DMA/2025-26/SE7579 ... ಟೆಂಡರ್ ಮೊತ್ತ ರೂ.7.00 ಲಕ್ಷ, ಇಎಂಡಿ ರೂ.17,500/-

ಸಹಿ/- ಪೌರಾಯುಕ್ತರು, ನಗರಸಭೆ, ಹೂಟಗಳ್ಳಿ

ಬೆಂಗಳೂರು ಉತ್ತರ ನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ವಿದ್ಯುತ್ ವಿಭಾಗ, ಬೆಂಗಳೂರು ಉತ್ತರ ನಗರ ನಿಗಮ,
ಬಳ್ಳಾರಿ ಮುಖ್ಯ ರಸ್ತೆ, ಬ್ಯಾಟರಾಯನಪುರ, ಬೆಂಗಳೂರು-560092.

ನಂ: BNCC/EE/ELE/TN/GN/05/2025-26 ದಿನಾಂಕ: 26.03.2026

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ

ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟೆಂಡರ್ ಪ್ರಕಟಣೆ

KARNATAKA RURAL INFRASTRUCTURE DEVELOPMENT LTD.

(Formerly Karnataka Land Army Corporation Limited)
No.1106, 10th Main Road, RPC Layout, Vijayanagar, Bengaluru - 560040

ಇ-ಟೆಂಡರ್ ಅಧಿಸೂಚನೆ

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ,

ಲೋಕೋಪಯೋಗಿ ಇಲಾಖೆ, ವಿದ್ಯುತ್ ವಿಭಾಗ, ಕೆ.ಆರ್. ವೃತ್ತ, ಬೆಂಗಳೂರು.
ದೂರವಾಣಿ ಸಂಖ್ಯೆ: 080-22112809
ನಂ: ಕಾ.ಇಂ(ವಿ)/ಲೋ.ಇ/ವಿದ್ಯುತ್/2025-26/3064 ದಿನಾಂಕ: 26.03.2026

ಟೆಂಡರ್ ಕೊಟೇಷನ್ ಪ್ರಕಟಣೆ

Original Equipment Manufacture (OEM) / Authorized Dealers

ಖಜಾನೆ ಇಲಾಖೆ

ಇ-ಟೆಂಡರ್ ಅಧಿಸೂಚನೆ

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ಇ-ಟೆಂಡರ್ ಅಧಿಸೂಚನೆ

DMA/2025-26/OW/WORK_INDENT56782
DMA/2025-26/OW/WORK_INDENT56784
DMA/2025-26/OW/WORK_INDENT56785

http://www.kppp.karnataka.gov.in

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಬೀದರ್ - 585401.

Email eokvafsu@gmail.com, ದೂರವಾಣಿ: 08482-245361

ಟೆಂಡರ್ ಪ್ರಕಟಣೆ

portal- www.eproc.karnataka.gov.in

ಶ್ರೀಮಂತ ಲೀಗ್ ಸಂಪೂರ್ಣ ವೇಳಾಪಟ್ಟಿ | 12 ಮೈದಾನದಲ್ಲಿ ಮಿಂಚಲು ಆಟಗಾರರು ಸಜ್ಜು

ಇನ್ಮುಂದೆ ಐಪಿಎಲ್ ಹವಾ

• ಮುಂಬೈ: ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿ ಶುರುವಿಗೆ ಕೇವಲ ಒಂದು ದಿನ ಮಾತ್ರ ಬಾಕಿ ಇರುವಾಗಲೇ ಎರಡನೇ ಹಂತದ ವೇಳಾಪಟ್ಟಿ ಗುರುವಾರದಂದು ಪ್ರಕಟಗೊಂಡಿದೆ.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಸನ್‌ರೈಸರ್ಸ್ ಹೈದರಾಬಾದ್ ನಡುವಿನ ಪಂದ್ಯದೊಂದಿಗೆ ಮಹಾಕೂಟ ಶುರುವಾಗಲಿದೆ. ಪಂಚರಾಜ್ಯ ಚುನಾವಣೆ ಬೆನ್ನಲ್ಲೇ ಈ ಹಿಂದೆ ಕೇವಲ 20 ಪಂದ್ಯಗಳ ವೇಳಾಪಟ್ಟಿಯನ್ನು ಪ್ರಕಟಿಸಲಾಗಿತ್ತು. ಬಂಗಾಳ ಸೇರಿದಂತೆ ವಿವಿಧ ರಾಜ್ಯಗಳ ಚುನಾವಣೆ ದಿನಾಂಕ ಘೋಷಿಸಲಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಪಂದ್ಯಾವಳಿಯ ಎರಡನೇ ಭಾಗದ ವೇಳಾಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ.

ಹಳೆಯ ವೇಳಾಪಟ್ಟಿಯಲ್ಲಿ 20 ಪಂದ್ಯಗಳಿದ್ದವು. ಈಗಿನ ವೇಳಾಪಟ್ಟಿಯಲ್ಲಿ 50 ಪಂದ್ಯಗಳಿವೆ. ಅಂದರೆ ಒಟ್ಟು ಕೂಟದ ಪಂದ್ಯಗಳು ಇದರಲ್ಲಿ ಸೇರಿಸಲಾಗಿದೆ. 4 ನಾಕೌಟ್ ಪಂದ್ಯಗಳ ವೇಳಾಪಟ್ಟಿ ಮುಂದಿನ ದಿನಗಳಲ್ಲಿ ಬಿಡಲಾಗುವುದು ಎಂದು ಬಿಸಿಸಿಐ ತಿಳಿಸಿದೆ.

74 ಪಂದ್ಯಗಳು: ಲೀಗ್ ಹಂತದಲ್ಲಿ ಎಲ್ಲಾ 10 ತಂಡಗಳು ತಲಾ 14 ಪಂದ್ಯಗಳನ್ನಾಡಲಿವೆ. 7 ತವರು, 7 ತವರಲ್ಲದ ಪಂದ್ಯಗಳನ್ನಾಡುತ್ತವೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ 5 ಪಂದ್ಯಗಳನ್ನು ಮಾತ್ರ ತವರಲ್ಲಿ ಆಡಲಿದೆ. ಮುಂದಿನ 2 ಪಂದ್ಯಗಳನ್ನು ರಾಯ್ಪುರದಲ್ಲಿ ಆಡುವುದಾಗಿ ಘೋಷಣೆ ಮಾಡಿದೆ. ಕಳೆದ ವರ್ಷ ಬಿಸಿಸಿಐ 19ನೇ ಆವೃತ್ತಿಯಲ್ಲಿ 84 ಪಂದ್ಯಗಳನ್ನು ಆಡಿಸಲಾಗುವುದು ಎಂದು ಹೇಳಲಾಗಿತ್ತು. ಆದರೆ ಈ ಬಾರಿ 70 ಲೀಗ್, 4 ನಾಕೌಟ್ ಪಂದ್ಯಗಳನ್ನು ಆಡಿಸುವುದಾಗಿ ತಿಳಿಸಲಾಗಿದೆ.

ಏಪ್ರಿಲ್ 13ಕ್ಕೆ ಶುರು: ಎರಡನೇ ಹಂತದ ವೇಳಾಪಟ್ಟಿ ಪ್ರಕಾರ ಪಂದ್ಯಗಳು ಏಪ್ರಿಲ್ 13ಕ್ಕೆ ಶುರುವಾಗಲಿವೆ. ಮೊದಲ ಹಂತದ ವೇಳಾಪಟ್ಟಿ ಪ್ರಕಾರ ಏಪ್ರಿಲ್ 12ಕ್ಕೆ ಕೊನೆಯ ಪಂದ್ಯ ನಡೆಯಬೇಕಿತ್ತು. ಎರಡನೇ ಹಂತದ ಪಂದ್ಯಗಳು ಏಪ್ರಿಲ್ 13ಕ್ಕೆ ಶುರುವಾಗಲಿವೆ. ಹೈದರಾಬಾದ್ ಹಾಗೂ ರಾಜಸ್ಥಾನ ತಂಡಗಳು 21ನೇ ಪಂದ್ಯದಲ್ಲಿ ಆಡಲಿವೆ. ಮೇ 24ರಂದು ಫೈನಲ್ ಪಂದ್ಯ ನಡೆಯಲಿದೆ.

12 ಕ್ರೀಡಾಂಗಣದಲ್ಲಿ ಪಂದ್ಯ: ಈ ಬಾರಿಯ ಐಪಿಎಲ್ ಪಂದ್ಯಗಳು 12 ಕ್ರೀಡಾಂಗಣಗಳಲ್ಲಿ ನಡೆಯಲಿವೆ. ರಾಯ್ಪುರ, ಧರ್ಮಶಾಲಾ, ಜೈಪುರದಲ್ಲೂ ಪಂದ್ಯಗಳು ನಡೆಯುತ್ತಿರುವುದು ವಿಶೇಷ.



» ಈ ಬಾರಿ ನಡೆಯಲ್ಲ ಐಪಿಎಲ್ ಉದ್ಘಾಟನಾ ಸಮಾರಂಭ
» ಕಾಲ್ತುಳಿತದಲ್ಲಿ ಮೃತಪಟ್ಟವರ ಸ್ಮರಣಾರ್ಥ ರದ್ದು

ಆರ್‌ಸಿಬಿ ಹೆಸರು ಬದಲಿಲ್ಲ



• ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಟೈಮ್ಸ್ ಆಫ್ ಇಂಡಿಯಾ ಅಂತಹ ಕಂಪೆನಿಗಳಿರುವ ಬಿರ್ಲಾ ಒಕ್ಕೂಟ ಖರೀದಿ ಮಾಡಿದೆ. 16,700 ಕೋಟಿ ರೂ.ಗೆ ತಂಡವನ್ನು ಖರೀದಿಸಿರುವ ಬಿರ್ಲಾ ಹೆಚ್ಚಿನ ಬದಲಾವಣೆಗಳನ್ನು ಮಾಡದೆ ಮುನ್ನಡೆಯುವ ತೀರ್ಮಾನಕ್ಕೆ ಬಂದಂತಿದೆ.

ಆರ್‌ಸಿಬಿ ತಂಡವನ್ನು ಮಾರಾಟಕ್ಕಿಟ್ಟ ನಂತರ ಹಳೆಯ ರಾಯಲ್ ಚಾಲೆಂಜರ್ಸ್ ಹೆಸರು ಬದಲಾಗುವ ಸಾಧ್ಯತೆ ಇದೆ ಎಂದು ಹೇಳಲಾಗಿತ್ತು. ಆದರೆ ಬಿರ್ಲಾ ಕಂಪೆನಿಯ ಮಾಲೀಕರಲ್ಲಿ ಒಬ್ಬರಾದ ಅನನ್ಯ ಬಿರ್ಲಾ ತಂಡದ ಹೆಸರಲ್ಲಿ ಯಾವುದೇ ಬದಲಾವಣೆ ಮಾಡಲಾಗಲ್ಲ ಎಂದು ಸುಳಿವು ನೀಡಿದ್ದಾರೆ. ತಂಡ ಖರೀದಿಸಿರುವ ಬಗ್ಗೆ ತಮಗೆ ಬಂದ ಅಭಿನಂದನೆಗಳಿಗೆ ಧನ್ಯವಾದ ತಿಳಿಸುತ್ತಾ ಅವರು, ಆರ್‌ಸಿಬಿ ಹೆಸರು ಬದಲಾಗಲ್ಲ ಎಂಬ ಪೋಸ್ಟ್ ಅನ್ನು ಸಾಮಾಜಿಕ ಜಾಲತಾಣದ ಸ್ಟೋರಿಯಲ್ಲಿ ಹಾಕಿಕೊಂಡಿದ್ದಾರೆ.

ಭದ್ರತೆಗಾಗಿ 2 ಸಾವಿರ ಪೊಲೀಸರ ನಿಯೋಜನೆ



• ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯಕ್ಕಾಗಿ 2 ಸಾವಿರ ಪೊಲೀಸರ ನಿಯೋಜನೆ ಮಾಡಲಾಗಿದೆ. ಶನಿವಾರದ ಪಂದ್ಯಕ್ಕೂ ಮುನ್ನ ಪೊಲೀಸ್ ಇಲಾಖೆ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದ್ದು ಸಿವಿಲ್ ಡಿಫೆನ್ಸ್, ಎಸ್‌ಡಿಆರ್‌ಎಫ್ ಮತ್ತು ಜಿಬಿಎ ಅಧಿಕಾರಿಗಳೊಂದಿಗೆ ಜಂಟಿಯಾಗಿ ಯಶಸ್ವಿ ಮಾಕ್ ಡ್ರಿಲ್ ನಡೆಸಲಾಗಿದೆ. ಈ ಹಿಂದೆ ಮಾ.23 ರಂದು ಕೂಡ ಒಮ್ಮೆ ತಾಲೀಮು ನಡೆಸಲಾಗಿತ್ತು.

ಮೈದಾನದ ಗೇಟ್ ಮತ್ತು ಪಾರ್ಕಿಂಗ್ ವ್ಯವಸ್ಥೆಯನ್ನು ಬದಲಾಯಿಸಲಾಗಿದೆ. ಭದ್ರತೆ ದೃಷ್ಟಿಯಿಂದ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ತಿಳಿಸಿದರು. ಕೈಗೊಂಡಿರುವ ಕ್ರಮಗಳ ಬಗ್ಗೆ ಮಾತನಾಡುತ್ತಾ ಅವರು, ಭದ್ರತೆಗಾಗಿ 6 ಮಂದಿ ಡಿಸಿಪಿಗಳು, 15 ಕ್ಕೂ ಹೆಚ್ಚು ಎಸಿಪಿಗಳು, ಪಿಐ, ಎಸ್‌ಐ, ಪಿಸಿ ಮತ್ತು ಹೋಮ್ ಗಾರ್ಡ್ ಸೇರಿದಂತೆ 2 ಸಾವಿರ ಜನ ಪೊಲೀಸರನ್ನು ನಿಯೋಜಿಸಲಾಗಿದೆ. ನಿಯಮ ಉಲ್ಲಂಘಿಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಐಪಿಎಲ್ ಪಂದ್ಯಕ್ಕೆ ಭದ್ರತೆ ನೀಡಲು ಪೊಲೀಸ್ ಪಡೆ ಸನ್ನದ್ಧ

ಟಿಕೆಟ್ ಇಲ್ಲದವರಿಗೆ ಪ್ರವೇಶ ನಿಷೇಧ: ಕ್ರೀಡಾಂಗಣದ ಸುತ್ತಮುತ್ತ ಜನದಟ್ಟಣೆ ನಿಯಂತ್ರಿಸಲು ಪೊಲೀಸ್ ಇಲಾಖೆ ಹಲವು ಕ್ರಮ ಕೈಗೊಂಡಿದೆ. ಟಿಕೆಟ್ ಇಲ್ಲದವರು ಕ್ರೀಡಾಂಗಣದ ಹತ್ತಿರ ಬರದಂತೆ ಮನವಿ ಮಾಡಲಾಗಿದ್ದು, ಅಂತಹವರನ್ನು ನಿಯಂತ್ರಿಸಲು 7 ವಿಶೇಷ ತಂಡಗಳನ್ನು ರಚಿಸಲಾಗಿದೆ. ಪ್ರತಿ ತಂಡದಲ್ಲಿ 20 ಸಿಬ್ಬಂದಿ ಇರಲಿದ್ದು, ಟಿಕೆಟ್ ಇಲ್ಲದೆ ಅನಗತ್ಯವಾಗಿ ಓಡಾಡುವವರನ್ನು ನಿರ್ಬಂಧಿಸಲಾಗುತ್ತದೆ. ಮುಖ್ಯವಾಗಿ ಕಬ್ಬನ್ ರೋಡ್, ಕ್ವೀನ್ಸ್ ರೋಡ್, ಲಿಂಕ್ ರೋಡ್ ಹಾಗೂ ಎಂ.ಜಿ. ರಸ್ತೆಗಳಲ್ಲಿ ಟಿಕೆಟ್ ಇದ್ದವರಿಗೆ ಮಾತ್ರ ಪ್ರವೇಶ ನೀಡಲಾಗುತ್ತದೆ. ಸಾರ್ವಜನಿಕರು ಸಂಚಾರ ದಟ್ಟಣೆ ತಪ್ಪಿಸಲು ಮೆಟ್ರೋ ಮತ್ತು ಬಿಎಂಟಿಸಿ ಬಸ್‌ಗಳನ್ನು ಬಳಸುವಂತೆ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡಲು ಸಹಕರಿಸುವಂತೆ ಆಯುಕ್ತರು ವಿನಂತಿಸಿದ್ದಾರೆ.

ಮೈದಾನದಲ್ಲೂ ಹಲವಾರು ಬದಲಾವಣೆ: ಕ್ರೀಡಾಂಗಣದಲ್ಲಿ ಹಲವಾರು ಬದಲಾವಣೆಗಳನ್ನು ತರಲಾಗಿದೆ. ಮೊದಲಿಗಿಂತಲೂ ವಿಭಿನ್ನವಾದ ಪ್ರವೇಶದ್ವಾರಗಳನ್ನು ಸ್ಥಾಪಿಸಲಾಗಿದೆ. ಪ್ರವೇಶದ ರೀತಿಗಳು ಬದಲಾಗಿವೆ. ಈ ಮೊದಲು ಅಭ್ಯಾಸ ನಡೆಸಲಾಗುತ್ತಿದ್ದ 13ನೇ ಗೇಟ್ ಹತ್ತಿರದ ಹೊರವಲಯವನ್ನು ಈಗ ಒಳಗೇಟ್ ಆಗಿ ಕಾರ್ಯ ನಿರ್ವಹಿಸಲಿದೆ. ಮೈದಾನದ ಹೊರಗೆಲ್ಲಾ ಕ್ರೀಡಾಂಗಣದ ಬ್ಲಾಕ್ ಪ್ರಿಂಟ್ ಬಗ್ಗೆ ಅಚ್ಚುಕಟ್ಟಾದ ಮಾಹಿತಿ ನೀಡಲಾಗಿದೆ.

ಬೆಂಗಳೂರಲ್ಲಿ 2 ಅಂತಾರಾಷ್ಟ್ರೀಯ ಪಂದ್ಯ

• ಮುಂಬೈ: ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿ ಮರಳಿದ ಖುಷಿಯಲ್ಲಿರುವ ಕರ್ನಾಟಕದ ಸಮಸ್ತ ಕ್ರಿಕೆಟ್ ಅಭಿಮಾನಿಗಳಿಗೆ ಖುಷಿ ಪಡುವುದಕ್ಕೆ ಮತ್ತೊಂದು ಕಾರಣ ಸಿಕ್ಕಿದೆ. ಸರ್ಕಾರದಿಂದ ನಿರ್ಬಂಧ ಎದುರಿಸಿದ್ದ ಚಿನ್ನಸ್ವಾಮಿ ಕ್ರೀಡಾಂಗಣ ಐಪಿಎಲ್ ಜೊತೆಗೆ ಅಂತಾರಾಷ್ಟ್ರೀಯ ಪಂದ್ಯಗಳನ್ನು ಆಯೋಜಿಸಲು ಅನುಮತಿ ಪಡೆದಿದ್ದು, 2026-27ರ ಭಾರತ ಸೀನಿಯರ್ ತಂಡದ ಕ್ಯಾಲೆಂಡರ್‌ನಲ್ಲಿ ಒಂದು ಏಕದಿನ ಮತ್ತು ಒಂದು ಟಿ20 ಪಂದ್ಯ ಆಯೋಜಿಸುವ ಅವಕಾಶ ಪಡೆದಿದೆ.

ಮುಂಬರಲಿರುವ ವರ್ಷದಲ್ಲಿ ಭಾರತ ಆಡಲಿರುವ ತವರು ದ್ವಿಪಕ್ಷೀಯ ಸರಣಿಯ ವೇಳಾಪಟ್ಟಿಯನ್ನು ಬಿಸಿಸಿಐ ಗುರುವಾರದಂದು ಪ್ರಕಟಿಸಿದೆ. ವಿಂಡೀಸ್ ಅಂತಹ ತಂಡಗಳು ಪಂದ್ಯಗಳನ್ನಾಡುವುದಕ್ಕೆ ಭಾರತಕ್ಕೆ ಪ್ರಯಾಣಿಸಲಿವೆ. ಟೆಸ್ಟ್, ಏಕದಿನ ಹಾಗೂ ಟಿ20 ಮಾದರಿಯಲ್ಲಿ ಒಟ್ಟು 22 ಪಂದ್ಯಗಳನ್ನು ಆಡಲಿದೆ. 17 ನಗರಗಳು ಅಂತಾರಾಷ್ಟ್ರೀಯ ಪಂದ್ಯಗಳಿಗೆ ಆತಿಥ್ಯ ನೀಡಲಿವೆ. 2 ವರ್ಷಕ್ಕೊಮ್ಮೆ ನಡೆಯುವ ಬಾರ್ಡರ್ ಗವಾಸ್ಕರ್ ಟ್ರೋಫಿ ಸರಣಿಗೆ ವೇಳಾಪಟ್ಟಿ ಬಿಡುಗಡೆಯಾಗಿದೆ.

4 ತಂಡಗಳ ಪ್ರವಾಸ: ಸೆಪ್ಟೆಂಬರ್‌ನಲ್ಲಿ ವಿಂಡೀಸ್ ಪ್ರವಾಸದೊಂದಿಗೆ ತವರು ಸರಣಿಗಳು ಶುರುವಾಗಲಿವೆ. ಏಕದಿನ ಹಾಗೂ ಟಿ20 ಮಾದರಿಯ ದೊಡ್ಡ ಸರಣಿ ಆಡುವುದಕ್ಕೆ ವೆಸ್ಟ್ ಇಂಡೀಸ್ ಬರಲಿದೆ. ಸರಣಿಯಲ್ಲಿ 3 ಏಕದಿನ ಪಂದ್ಯಗಳು ನಡೆಯಲಿವೆ. 5 ಟಿ20 ಪಂದ್ಯಗಳೂ ನಡೆಯಲಿವೆ. ಡಿಸೆಂಬರ್‌ನಲ್ಲಿ ಶ್ರೀಲಂಕಾದೊಂದಿಗೆ ಭಾರತ ತವರು ಸರಣಿ ಆಡಲಿದ್ದು, 3 ಏಕದಿನ ಹಾಗೂ 3 ಟಿ20 ಇರಲಿವೆ. ಜಿಂಬಾಬ್ವೆ ವಿರುದ್ಧ 3 ಪಂದ್ಯಗಳ ಏಕದಿನ ಸರಣಿ ನಡೆಯಲಿದೆ.

ಬೆಂಗಳೂರಲ್ಲಿ 2 ಪಂದ್ಯ: ಕಾಲ್ತುಳಿತ ನಂತರ ಸರ್ಕಾರದ ನಿರ್ಬಂಧನೆಯ ನಂತರ ಬೆಂಗಳೂರು ಮಹಿಳೆಯರ ಏಕದಿನ ವಿಶ್ವಕಪ್ ಸೇರಿದಂತೆ ಪ್ರಮುಖ ಪಂದ್ಯಗಳನ್ನು ಕಳೆದುಕೊಂಡಿತ್ತು. ಬದಲಿಯಾಗಿ ಭಾರತ ಈ ಬಾರಿ ಎರಡು ಪಂದ್ಯಗಳನ್ನು ಬೆಂಗಳೂರಿನಲ್ಲಿ ಆಡಲಿದೆ ಎಂದು ಬಿಸಿಸಿಐ ಘೋಷಿಸಿದೆ. ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ವಿಂಡೀಸ್ ವಿರುದ್ಧದ ಕೊನೆಯ ಟಿ20 ಪಂದ್ಯಕ್ಕೆ ಬೆಂಗಳೂರು ಆತಿಥ್ಯ ನೀಡಲಿದೆ. ಡಿಸೆಂಬರ್‌ನಲ್ಲಿ ಶ್ರೀಲಂಕಾ ಸರಣಿಯಲ್ಲಿ ಬೆಂಗಳೂರು ಏಕದಿನ ಪಂದ್ಯಕ್ಕೆ ಆತಿಥ್ಯ ನೀಡಲಿದೆ.

ವೇಳಾಪಟ್ಟಿ

ದಿನಾಂಕ	ಮಾದರಿ	ಸ್ಥಳ
ವೆಸ್ಟ್ ಇಂಡೀಸ್		
ಸೆ.27	ಏಕದಿನ	ತಿರುವನಂತಪುರಮ್
ಸೆ.30	ಏಕದಿನ	ಗುವಾಹಟಿ
ಅ.3	ಏಕದಿನ	ಚಂಡೀಗಢ
ಅ.6	ಟಿ20	ಲಖನೌ
ಅ.9	ಟಿ20	ರಾಂಚಿ
ಅ.11	ಟಿ20	ಇಂದೋರ್
ಅ.14	ಟಿ20	ಹೈದರಾಬಾದ್
ಅ.17	ಟಿ20	ಬೆಂಗಳೂರು
ಶ್ರೀಲಂಕಾ ಸರಣಿ		
ಡಿ.13	ಏಕದಿನ	ದಿಲ್ಲಿ
ಡಿ.16	ಏಕದಿನ	ಬೆಂಗಳೂರು
ಡಿ.19	ಏಕದಿನ	ಅಹಮದಾಬಾದ್
ಡಿ.22	ಟಿ20	ರಾಜ್‌ಕೋಟ್
ಡಿ.24	ಟಿ20	ಕಟಕ್
ಡಿ.27	ಟಿ20	ಪುಣೆ
ಜಿಂಬಾಬ್ವೆ (ಏಕದಿನ) (2027)		
ಜ.3	ಏಕದಿನ	ಕೋಲ್ಕತ್ತಾ
ಜ.6	ಏಕದಿನ	ಹೈದರಾಬಾದ್
ಜ.9	ಏಕದಿನ	ಮುಂಬೈ
ಬಾರ್ಡರ್ ಗವಾಸ್ಕರ್ ಟ್ರೋಫಿ		
ಮೊದಲ ಟೆಸ್ಟ್	ಜ.21	ನಾಗ್ಪುರ
ಎರಡನೇ ಟೆಸ್ಟ್	ಜ.29	ಚೆನ್ನೈ
ಮೂರನೇ ಟೆಸ್ಟ್	ಫೆ.11	ಗುವಾಹಟಿ
ನಾಲ್ಕನೇ ಟೆಸ್ಟ್	ಫೆ.23	ರಾಂಚಿ
ಐದನೇ ಟೆಸ್ಟ್	ಮಾ.3	ಅಹಮದಾಬಾದ್

ಭಾರತ ತಂಡಕ್ಕೆ ಗುಲ್ವೀರ್ ನಾಯಕ

• ಬೆಂಗಳೂರು: ಭಾರತದ 10,000 ಮೀ ಮತ್ತು 5,000 ಮೀ ರಾಷ್ಟ್ರೀಯ ದಾಖಲೆದಾರ ಗುಲ್ವೀರ್ ಸಿಂಗ್, ಏಪ್ರಿಲ್ 26ರಂದು ನಡೆಯಲಿರುವ ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರಿನ 18ನೇ ಆವೃತ್ತಿಯಲ್ಲಿ ಭಾರತೀಯ ಎಲೈಟ್ ತಂಡವನ್ನು ಮುನ್ನಡೆಸಲಿದ್ದಾರೆ. ವಿಶ್ವ ಅಥ್ಲೆಟಿಕ್ಸ್ ಗೋಲ್ಡ್ ಲೇಬಲ್ ಮಾನ್ಯತೆ ಪಡೆದ ಈ ರೇಸ್, ಪ್ರತಿ ವರ್ಷ ವಿಶ್ವದ ಶ್ರೇಷ್ಠ ದೂರ ಓಟಗಾರರನ್ನು ಆಕರ್ಷಿಸುವುದರ ಜೊತೆಗೆ, ಭಾರತೀಯ ಆಟಗಾರರಿಗೆ ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಧೆಯಲ್ಲಿ ತಮಗೆ ತಾವು ಸವಾಲು ಹಾಕಿಕೊಳ್ಳುವ ವೇದಿಕೆಯಾಗುತ್ತಿದೆ. ಗುಲ್ವೀರ್ ಸಿಂಗ್ ಉತ್ತಮ ಲಯದಲ್ಲಿದ್ದು, ಇತ್ತೀಚೆಗೆ ನಡೆದ ನ್ಯೂಯಾರ್ಕ್ ಸಿಟಿ ಹಾಫ್ ಮ್ಯಾರಥಾನ್‌ನಲ್ಲಿ 59:42 ಸಮಯದಲ್ಲಿ ಮೂರನೇ ಸ್ಥಾನ ಪಡೆದಿದ್ದರು. ಇದು ಭಾರತೀಯ ಓಟಗಾರನೊಬ್ಬ ದಾಖಲಿಸಿದ ಅತ್ಯುತ್ತಮ ಹಾಫ್ ಮ್ಯಾರಥಾನ್ ಸಮಯವಾಗಿದೆ.

ಗುಲ್ವೀರ್ ಪ್ರದರ್ಶನ: 10,000 ಮೀ (27:00.22) ಮತ್ತು 5,000 ಮೀ (12:59.77) ವಿಭಾಗಗಳಲ್ಲಿ ರಾಷ್ಟ್ರೀಯ ದಾಖಲೆ ಹೊಂದಿರುವ ಅವರು, 2025ರಲ್ಲಿ ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಎರಡು ಚಿನ್ನದ ಪದಕಗಳನ್ನು ಗೆದ್ದಿದ್ದರು. ಜೊತೆಗೆ ಟಾಟಾ ಸ್ಟೀಲ್ ವರ್ಲ್ಡ್ 25ಕೆ ಕೋಲ್ಕತಾ ಸ್ಪರ್ಧೆಯಲ್ಲಿ 1:12:06 ಸಮಯದೊಂದಿಗೆ ದಾಖಲೆ ನಿರ್ಮಿಸಿದ್ದರು.

ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರು


ಸ್ಪರ್ಧೆಗೆ ಉತ್ಸಾಹ: ಗುಲ್ವೀರ್: ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರು ದೇಶದ ಅತ್ಯಂತ ಸ್ಪರ್ಧಾತ್ಮಕ ರಸ್ತೆ ಓಟಗಳಲ್ಲಿ ಒಂದಾಗಿದೆ. ಇಲ್ಲಿ ಮತ್ತೆ ಸ್ಪರ್ಧಿಸಲು ಉತ್ಸಾಹವಾಗುತ್ತಿದೆ, ಎಂದು ಗುಲ್ವೀರ್ ಸಿಂಗ್ ತಿಳಿಸಿದ್ದಾರೆ. ಈ ವರ್ಷದ ಸ್ಪರ್ಧೆಯಲ್ಲಿ ಉಗಾಂಡಾದ ಜೋಶುವಾ ಚೆಪ್ಟೆಗಿ, ಕೀನ್ಯಾದ ವಿನ್ಸೆಂಟ್ ಲಂಗಾಟ್, ಇಥಿಯೋಪಿಯಾದ ಗೆಮೆಚು ಡಿದಾ ಮತ್ತು ಎರಿಟ್ರಿಯಾದ ಸ್ಯಾಮುಯೆಲ್ ಹಾಟ್ಟೆ ಸೇರಿದಂತೆ ಅಂತಾರಾಷ್ಟ್ರೀಯ ಆಟಗಾರರು ಭಾಗವಹಿಸಲಿದ್ದಾರೆ. ಇಂತಹ ಸ್ಪರ್ಧೆಗಳು ಭಾರತೀಯ ಆಟಗಾರರನ್ನು ಇನ್ನಷ್ಟು ಉತ್ತಮ ಪ್ರದರ್ಶನ ನೀಡಲು ಪ್ರೇರೇಪಿಸುತ್ತವೆ. ಯುವ ಪ್ರತಿಭೆಗಳಿಗೆ ಸ್ಫೂರ್ತಿಯಾಗುತ್ತವೆ, ಎಂದು ಅವರು ಹೇಳಿದ್ದಾರೆ.

ಐಪಿಎಲ್ ಸಂಪೂರ್ಣ ವೇಳಾಪಟ್ಟಿ

ದಿನಾಂಕ	ಪಂದ್ಯ	ಸ್ಥಳ	ಸಮಯ
ಮಾ.28	ಆರ್‌ಸಿಬಿ v/s ಹೈದರಾಬಾದ್	ಬೆಂಗಳೂರು	ಸಂಜೆ 7:30
ಮಾ. 29	ಮುಂಬೈ v/s ಕೋಲ್ಕತ್ತಾ	ಮುಂಬೈ	ಸಂಜೆ 7:30
ಮಾ. 30	ರಾಜಸ್ಥಾನ v/s ಚೆನ್ನೈ	ಗುವಾಹಟಿ	ಸಂಜೆ 7:30
ಮಾ. 31	ಪಂಜಾಬ್ v/s ಗುಜರಾತ್	ಚಂಡೀಗಢ	ಸಂಜೆ 7:30
ಏ. 1	ಲಖನೌ v/s ಡೆಲ್ಲಿ	ಲಖನೌ	ಸಂಜೆ 7:30
ಏ. 2	ಕೋಲ್ಕತ್ತಾ v/s ಹೈದರಾಬಾದ್	ಕೋಲ್ಕತ್ತಾ	ಸಂಜೆ 7:30
ಏ. 3	ಚೆನ್ನೈ v/s ಪಂಜಾಬ್	ಚೆನ್ನೈ	ಸಂಜೆ 7:30
ಏ. 4	ಡೆಲ್ಲಿ v/s ಮುಂಬೈ	ಡೆಲ್ಲಿ	ಮಧ್ಯಾಹ್ನ 3:30
ಏ. 4	ಗುಜರಾತ್ v/s ರಾಜಸ್ಥಾನ	ಅಹಮದಾಬಾದ್	ಸಂಜೆ 7:30
ಏ. 5	ಹೈದರಾಬಾದ್ v/s ಲಖನೌ	ಹೈದರಾಬಾದ್	ಮಧ್ಯಾಹ್ನ 3:30
ಏ. 5	ಆರ್‌ಸಿಬಿ v/s ಚೆನ್ನೈ	ಬೆಂಗಳೂರು	ಸಂಜೆ 7:30
ಏ. 6	ಕೋಲ್ಕತ್ತಾ v/s ಪಂಜಾಬ್	ಕೋಲ್ಕತ್ತಾ	ಸಂಜೆ 7:30
ಏ. 7	ರಾಜಸ್ಥಾನ v/s ಮುಂಬೈ	ಗುವಾಹಟಿ	ಸಂಜೆ 7:30
ಏ. 8	ಡೆಲ್ಲಿ v/s ಗುಜರಾತ್	ಡೆಲ್ಲಿ	ಸಂಜೆ 7:30
ಏ. 9	ಕೋಲ್ಕತ್ತಾ v/s ಲಖನೌ	ಕೋಲ್ಕತ್ತಾ	ಸಂಜೆ 7:30
ಏ. 10	ರಾಜಸ್ಥಾನ v/s ಆರ್‌ಸಿಬಿ	ಗುವಾಹಟಿ	ಸಂಜೆ 7:30
ಏ. 11	ಪಂಜಾಬ್ v/s ಹೈದರಾಬಾದ್	ಚಂಡೀಗಢ	ಮಧ್ಯಾಹ್ನ 3:30
ಏ. 11	ಚೆನ್ನೈ v/s ಡೆಲ್ಲಿ	ಚೆನ್ನೈ	ಸಂಜೆ 7:30
ಏ. 12	ಲಖನೌ v/s ಗುಜರಾತ್	ಲಖನೌ	ಮಧ್ಯಾಹ್ನ 3:30
ಏ. 12	ಮುಂಬೈ v/s ಆರ್‌ಸಿಬಿ	ಮುಂಬೈ	ಸಂಜೆ 7:30
ಏ. 13	ಹೈದರಾಬಾದ್ v/s ರಾಜಸ್ಥಾನ	ಹೈದರಾಬಾದ್	ಸಂಜೆ 7:30
ಏ. 14	ಚೆನ್ನೈ v/s ಕೋಲ್ಕತ್ತಾ	ಚೆನ್ನೈ	ಸಂಜೆ 7:30
ಏ. 15	ಆರ್‌ಸಿಬಿ v/s ಲಖನೌ	ಬೆಂಗಳೂರು	ಸಂಜೆ 7:30
ಏ. 16	ಮುಂಬೈ v/s ಪಂಜಾಬ್	ಮುಂಬೈ	ಸಂಜೆ 7:30
ಏ. 17	ಗುಜರಾತ್ v/s ಕೋಲ್ಕತ್ತಾ	ಅಹಮದಾಬಾದ್	ಸಂಜೆ 7:30
ಏ. 18	ಆರ್‌ಸಿಬಿ v/s ಡೆಲ್ಲಿ	ಬೆಂಗಳೂರು	ಮಧ್ಯಾಹ್ನ 3:30
ಏ. 18	ಹೈದರಾಬಾದ್ v/s ಚೆನ್ನೈ	ಹೈದರಾಬಾದ್	ಸಂಜೆ 7:30
ಏ. 19	ಕೋಲ್ಕತ್ತಾ v/s ರಾಜಸ್ಥಾನ	ಕೋಲ್ಕತ್ತಾ	ಮಧ್ಯಾಹ್ನ 3:30
ಏ. 19	ಪಂಜಾಬ್ v/s ಲಖನೌ	ನ್ಯೂ ಚಂಡೀಗಢ	ಸಂಜೆ 7:30
ಏ. 20	ಗುಜರಾತ್ v/s ಮುಂಬೈ	ಅಹಮದಾಬಾದ್	ಸಂಜೆ 7:30
ಏ. 21	ಹೈದರಾಬಾದ್ v/s ಡೆಲ್ಲಿ	ಹೈದರಾಬಾದ್	ಸಂಜೆ 7:30
ಏ. 22	ಲಖನೌ v/s ರಾಜಸ್ಥಾನ	ಲಖನೌ	ಸಂಜೆ 7:30
ಏ. 23	ಮುಂಬೈ v/s ಚೆನ್ನೈ	ಮುಂಬೈ	ಸಂಜೆ 7:300
ಏ. 24	ಆರ್‌ಸಿಬಿ v/s ಗುಜರಾತ್	ಬೆಂಗಳೂರು	ಸಂಜೆ 7:30
ಏ. 25	ಡೆಲ್ಲಿ v/s ಪಂಜಾಬ್	ಡೆಲ್ಲಿ	ಮಧ್ಯಾಹ್ನ 3:30
ಏ. 25	ರಾಜಸ್ಥಾನ v/s ಹೈದರಾಬಾದ್	ಜೈಪುರ	ಸಂಜೆ 7:30
ಏ. 26	ಗುಜರಾತ್ v/s ಚೆನ್ನೈ	ಅಹಮದಾಬಾದ್	ಮಧ್ಯಾಹ್ನ 3:30
ಏ. 26	ಲಖನೌ v/s ಕೋಲ್ಕತ್ತಾ	ಲಖನೌ ಸಂಜೆ	7:30
ಏ. 27	ಡೆಲ್ಲಿ v/s ಆರ್‌ಸಿಬಿ	ಡೆಲ್ಲಿ	ಸಂಜೆ 7:30
ಏ. 28	ಪಂಜಾಬ್ v/s ರಾಜಸ್ಥಾನ	ಚಂಡೀಗಢ	ಸಂಜೆ 7:30
ಏ. 29	ಮುಂಬೈ v/s ಹೈದರಾಬಾದ್	ಮುಂಬೈ	ಸಂಜೆ 7:30
ಏ. 30	ಗುಜರಾತ್ v/s ಆರ್‌ಸಿಬಿ	ಅಹಮದಾಬಾದ್	ಸಂಜೆ 7:30
ಮೇ 1	ರಾಜಸ್ಥಾನ v/s ಡೆಲ್ಲಿ	ಜೈಪುರ	ಸಂಜೆ 7:30
ಮೇ 2	ಚೆನ್ನೈ v/s ಮುಂಬೈ	ಚೆನ್ನೈ	ಸಂಜೆ 7:30
ಮೇ 3	ಹೈದರಾಬಾದ್ v/s ಕೋಲ್ಕತ್ತಾ	ಹೈದರಾಬಾದ್	ಮಧ್ಯಾಹ್ನ 3:30
ಮೇ 3	ಗುಜರಾತ್ v/s ಪಂಜಾಬ್	ಅಹಮದಾಬಾದ್	ಸಂಜೆ 7:30
ಮೇ 4	ಮುಂಬೈ v/s ಲಖನೌ	ಮುಂಬೈ	ಸಂಜೆ 7:30
ಮೇ 5	ಡೆಲ್ಲಿ v/s ಚೆನ್ನೈ	ಡೆಲ್ಲಿ	ಸಂಜೆ 7:30
ಮೇ 6	ಹೈದರಾಬಾದ್ v/s ಪಂಜಾಬ್	ಹೈದರಾಬಾದ್	ಸಂಜೆ 7:30
ಮೇ 7	ಲಖನೌ v/s ಆರ್‌ಸಿಬಿ	ಲಖನೌ	ಸಂಜೆ 7:30
ಮೇ 8	ಡೆಲ್ಲಿ v/s ಕೋಲ್ಕತ್ತಾ	ಡೆಲ್ಲಿ	ಸಂಜೆ 7:30
ಮೇ 9	ರಾಜಸ್ಥಾನ v/s ಗುಜರಾತ್	ಜೈಪುರ	ಸಂಜೆ 7:30
ಮೇ 10	ಚೆನ್ನೈ v/s ಲಖನೌ	ಚೆನ್ನೈ	ಮಧ್ಯಾಹ್ನ 3:30
ಮೇ 10	ಆರ್‌ಸಿಬಿ v/s ಮುಂಬೈ	ರಾಯ್ಪುರ	ಸಂಜೆ 7:30
ಮೇ 11	ಪಂಜಾಬ್ v/s ಡೆಲ್ಲಿ	ಧರ್ಮಶಾಲಾ	ಸಂಜೆ 7:30
ಮೇ 12	ಗುಜರಾತ್ v/s ಹೈದರಾಬಾದ್	ಅಹಮದಾಬಾದ್	ಸಂಜೆ 7:30
ಮೇ 13	ಆರ್‌ಸಿಬಿ v/s ಕೋಲ್ಕತ್ತಾ	ರಾಯ್ಪುರ	ಸಂಜೆ 7:30
ಮೇ 14	ಪಂಜಾಬ್ v/s ಮುಂಬೈ	ಧರ್ಮಶಾಲಾ	ಸಂಜೆ 7:30
ಮೇ 15	ಲಖನೌ v/s ಚೆನ್ನೈ	ಲಖನೌ	ಸಂಜೆ 7:30
ಮೇ 16	ಕೋಲ್ಕತ್ತಾ v/s ಗುಜರಾತ್	ಕೋಲ್ಕತ್ತಾ	ಸಂಜೆ 7:30
ಮೇ 17	ಪಂಜಾಬ್ v/s ಆರ್‌ಸಿಬಿ	ಧರ್ಮಶಾಲಾ	ಮಧ್ಯಾಹ್ನ 3:30
ಮೇ 17	ಡೆಲ್ಲಿ v/s ರಾಜಸ್ಥಾನ	ಡೆಲ್ಲಿ	ಸಂಜೆ 7:30
ಮೇ 18	ಚೆನ್ನೈ v/s ಹೈದರಾಬಾದ್	ಚೆನ್ನೈ	ಸಂಜೆ 7:30
ಮೇ 19	ರಾಜಸ್ಥಾನ v/s ಲಖನೌ	ಜೈಪುರ	ಸಂಜೆ 7:30
ಮೇ 20	ಕೋಲ್ಕತ್ತಾ v/s ಮುಂಬೈ	ಕೋಲ್ಕತ್ತಾ	ಸಂಜೆ 7:30
ಮೇ 21	ಚೆನ್ನೈ v/s ಗುಜರಾತ್	ಚೆನ್ನೈ	ಸಂಜೆ 7:30
ಮೇ 22	ಹೈದರಾಬಾದ್ v/s ಆರ್‌ಸಿಬಿ	ಹೈದರಾಬಾದ್	ಸಂಜೆ 7:30
ಮೇ 23	ಲಖನೌ v/s ಪಂಜಾಬ್	ಲಖನೌ	ಸಂಜೆ 7:30
ಮೇ 24	ಮುಂಬೈ v/s ರಾಜಸ್ಥಾನ	ಮುಂಬೈ	ಮಧ್ಯಾಹ್ನ 3:30
ಮೇ 24	ಕೋಲ್ಕತ್ತಾ v/s ಡೆಲ್ಲಿ	ಕೋಲ್ಕತ್ತಾ	ಸಂಜೆ 7:30

ಪದಬಂಧ

» ರಾಜಾ ಸಂಗಮೇಶ ಹಿರೇಮಠ



5935

ಎಡದಿಂದ ಬಲಕ್ಕೆ
3.ಒಳ್ಳೆಯ ನಡತೆ-ಸದಾಚಾರವಿದು (3)
4.ಹಿತದಿಂದ ದೊರಕಾದುದು (3)
5.ಉಪ್ಪುನೀರಿನ ವಿಶಾಲ ಜಲರಾಶಿ ತಿರುಗಿದೆ (3)
6.ಮಂದಹಾಸದ ಸಮಾನಪದ (4)
8.ಒಂದೇ ರೀತಿಯ-ತುಲನಾತ್ಮಕವಾದುದು (3)
10.ಎಲ್ಲ ಭಾಗಗಳನ್ನೂ ಒಳಗೊಂಡಿದ್ದು (3)
11.ನ್ಯಾಯಕ್ಕಾಗಿ ವಾದ ಮಾಡುವ ಉದ್ಯೋಗ (4)
14.ಸಭೆಯ ನಡಾವಳಿಪ್ಪು
ಹೇರು-ಕಾರ್ಯಸೂಚಿಯೂ ಹೇರು (3)
16.ಮಿಕ್ಕಿದ್ದು-ಹೆಚ್ಚು ಎಂಬರ್ಥದ ಶಬ್ದ (3)
17.ವಿಶ್ವಾಮಿತ್ರನ ಪೂರ್ವನಾಮ (3)

ಮೇಲಿನಿಂದ ಕೆಳಕ್ಕೆ
1.ಒಪ್ಪದೇ "ಇಲ್ಲ" ಎನ್ನುವುದು (3)
2.ಅವನತಿಯ ಹಾದಿಯಲ್ಲಿರುವುದು (3)
3.ಇದು ಒಳ್ಳೆಯ ಮಾತಲ್ಲ (3)
4.ಇದು ಹುಗ್ಗಿಯ ಮಿತ್ರ (4)
7.ಗುಣಿಸಲಾಗುವ ಸಂಖ್ಯೆಯಿದು (3)
9.ಕ ಪ್ಪನ ಒಂದು ಹೆಸರು (3)
10.ಸವೆದು ಹೋಗಿ ಚಲಾವಣೆಯಾಗದ್ದು (4)
12.ಕ್ರಿಯೆಯನ್ನು ಮಾಡುವ ಸಾಧನ (3)
13.ಯಜ್ಞದ ಸೌದೆ-ಕಡ್ಡಿಗಳು ತಲೆಕೆಳಗಾಗಿದೆ (3)
15.ಮಂತ್ರವನ್ನು ಉಚ್ಚರಿಸುತ್ತಿರು (3)

5934 ಉತ್ತರ

ಎಡದಿಂದ ಬಲಕ್ಕೆ:
2.ಯಜಮಾನಿಕೆ 4.ಬಾಕು
5.ಪಕೀಲ 6.ನವಪಕ್ವ
8.ಹಕ್ಕು 9.ಧಾಮ
14.ಸಮಾರೋಪ
16.ದೋಚಕ 17.ಅಂಗ
18.ನವಕೇಗಳು

ಮೇಲಿನಿಂದ ಕೆಳಕ್ಕೆ :
1.ನವವಕೆ 3.ಮಾಧವ
4.ಬಾಲಗ್ರಹ 6.ನಗು
7.ಅಕ್ಕಿ 10.ಮಲರೋಗ
11.ನಮೀಕರಣ 12.ಧ್ವಜ
13.ಪಾಪ 15.ಮಾನ್ಯತೆ

ಭಾರತಕ್ಕೆ ಮತ್ತೊಂದು ಪದಕ ಖಚಿತ

• ಹೊಸದಿಲ್ಲಿ: ಬ್ಯಾಂಕಾಕ್‌ನಲ್ಲಿ ನಡೆಯುತ್ತಿರುವ ಏಷ್ಯಾ ಕಪ್ ಸ್ಟೇಜ್-1 ಆರ್ಚರಿ ಟೂರ್ನಿಯಲ್ಲಿ ಭಾರತ ಮತ್ತೊಂದು ಪದಕ ಖಚಿತಪಡಿಸಿಕೊಂಡಿದೆ. ಚಿಕಿತಾ ತನಿಪಾರ್ತಿ ಮತ್ತು ರಾಹುಲ್ ಚೌಹಾಣ್ ಕಾಂಪೌಂಡ್ ಮಿಶ್ರ ತಂಡ ವಿಭಾಗದ ಫೈನಲ್‌ಗೆ ಪ್ರವೇಶಿಸಿದ್ದಾರೆ. ಅಗ್ರ ಶ್ರೇಯಾಂಕದ ಈ ಜೋಡಿ ಮೊದಲ ಸುತ್ತಿನಲ್ಲಿ ಬೈ ಪಡೆದು, ನಂತರ ಚೈನೀಸ್ ತೈಪೆ ವಿರುದ್ಧ 159-155 ಹಾಗೂ ಕಜಕಿಸ್ತಾನ್ ವಿರುದ್ಧ 157-153 ಅಂತರದಲ್ಲಿ ಗೆದ್ದು ಮಲೇಷ್ಯಾ ವಿರುದ್ಧ ಫೈನಲ್‌ಗೆ ತಲುಪಿದೆ. ಇದೇ ವೇಳೆ ರಿಕರ್ವ್ ಮಿಶ್ರ ತಂಡ ವಿಭಾಗದಲ್ಲಿ ರಿಧಿ ಫೋರ್ ಮತ್ತು ದೇವಾಂಗ್ ಗುಪ್ತಾ ಜೋಡಿ ಮೊದಲ ಸುತ್ತಿನಲ್ಲಿ ಬೈ ಪಡೆದರೂ, ವಿಯೆಟ್ನಾಂ ವಿರುದ್ಧ 06 ಅಂತರದಲ್ಲಿ ಸೋತು ಹೊರಬಿದ್ದಿದೆ.

ಸ್ಕೀಟ್ ಶೂಟರ್‌ಗಳಿಗೆ ಕಠಿಣ ಸವಾಲು

• ಹೊಸದಿಲ್ಲಿ: ಮೊರೊಕ್ಕೊದ ಟ್ಯಾಂಜಿಯರ್‌ನಲ್ಲಿ ಶುಕ್ರವಾರದಿಂದ ಆರಂಭವಾಗುತ್ತಿರುವ ಐಎಸ್‌ಎಸ್‌ಎಫ್ ಶಾಟ್‌ಗನ್ ವರ್ಲ್ಡ್ ಕಪ್‌ನಲ್ಲಿ ಭಾರತೀಯ ಸ್ಕೀಟ್ ಶೂಟರ್‌ಗಳಿಗೆ ಕಠಿಣ ಸ್ಪರ್ಧೆ ಎದುರಾಗಲಿದೆ. ಮೊದಲ ದಿನ ಪುರುಷರು ಮತ್ತು ಮಹಿಳೆಯರು ತಲಾ 75 ಗುರಿಗಳನ್ನು ಹೊಡೆಯಲಿದ್ದು, ನಂತರ 50 ಟಾರ್ಗೆಟ್ ಹಾಗೂ ಭಾನುವಾರ ಫೈನಲ್ ನಡೆಯಲಿದೆ. ಭಾರತ ಪುರುಷ, ಮಹಿಳಾ ವಿಭಾಗಗಳಲ್ಲಿ ಗರಿಷ್ಠ ಆರು ಆಟಗಾರರನ್ನು ಕಣಕ್ಕಿಳಿಸಿದೆ. ಜೊತೆಗೆ ರ್‍ಯಾಂಕಿಂಗ್ ಅಂಕಗಳಿಗಾಗಿ ಪ್ರತ್ಯೇಕವಾಗಿ ಇಬ್ಬರು ಆಟಗಾರರು ಭಾಗವಹಿಸಲಿದ್ದಾರೆ. ಮಹಿಳಾ ವಿಭಾಗದಲ್ಲಿ ಒಲಿಂಪಿಕ್ ಚಾಂಪಿಯನ್ ಚಿಲಿಯ ಫ್ರಾನ್ಸಿಸ್ಕಾ ಕ್ರೊವೆಟ್ಟೊ ಚಾಡಿದ್, ಅಮೆರಿಕದ ವಿಶ್ವ ಚಾಂಪಿಯನ್ ಸಮಾಂಥಾ ಸಿಮೊಂಟನ್, ಇಟಲಿಯ ಡಯಾನಾ ಬಕೋಸಿ ಸೇರಿದಂತೆ ಹಲವು ಶ್ರೇಷ್ಠ ಶೂಟರ್‌ಗಳು ಸ್ಪರ್ಧಿಸಲಿದ್ದಾರೆ.

ಫುಟ್‌ಬಾಲ್: ಪಾಕ್‌ಗೆ ಭಾರತ ಕಿಕ್

• ಮಾಲೆ(ಮಾಲ್ಡೀವ್ಸ್): ಜಗತ್ತಿನ ಎಲ್ಲಾ ಕ್ಷೇತ್ರದ ಎಲ್ಲಾ ವಿಭಾಗಗಳಲ್ಲೂ ಪಾಕಿಸ್ತಾನ ಭಾರತದ ಮುಂದೆ ಮಂಡಿಯೂರುತ್ತಿರುವ ಮಧ್ಯೆ, ಗುರುವಾರ ನಡೆದ ಸ್ಯಾಫ್ ಅಂಡರ್-20 ಫುಟ್‌ಬಾಲ್ ಪಂದ್ಯಾವಳಿಯ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಭಾರತ ಮತ್ತೊಮ್ಮೆ ಪ್ರಾಬಲ್ಯ ಸಾಧಿಸಿದೆ.

» ಸ್ಯಾಫ್ ಅಂಡರ್-20 ಪಂದ್ಯಾವಳಿ
» 3-0ರಿಂದ ಭಾರೀ ಗೆಲುವು
» ಸೆಮಿಫೈನಲ್‌ಗೆ ಬ್ಲ್ಯೂ ಬಾಯ್ಸ್

ಮಾಲ್ಡೀವ್ಸ್‌ನ ಮಾಲೆಯ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಫುಟ್‌ಬಾಲ್ ಪಂದ್ಯದಲ್ಲಿ ಭಾರತೀಯ ಹುಡುಗರು ಪಾಕಿಗಳ ಬೇಟೆಯಾಡಿದರು. ಯಾವುದೇ ಕ್ಷಣಕ್ಕೂ ಮುನ್ನಡೆ ಬಿಟ್ಟುಕೊಡದೆ, ಗೆಲುವಿನ ಮಾರ್ಗದಲ್ಲೇ ಇದ್ದು ಗೆದ್ದು ಬೀಗಿತು. ಇದರೊಂದಿಗೆ ಪಾಕ್ ತಂಡವನ್ನು 3-0ರಿಂದ ಸೋಲಿಸಿ ಪಂದ್ಯಾವಳಿಯಿಂದ ಓಡಿಸಿತು ಭಾರತ. ಪಂದ್ಯದಲ್ಲಿ ಮೊದಲಿನಿಂದಲೂ ಪಾಕ್ ಪಾಲಿಗೆ ಭಾರತೀಯರು ದುಃಸ್ವಪ್ನವಾಗಿ ಕಾಡಿದರು. ಮೂರನೇ ನಿಮಿಷದಲ್ಲಿ ಪಾಕ್ ಡಿಫೆನ್ಸ್ ಅನ್ನು ಛಿದ್ರಗೊಳಿಸಿದ ವಿಶಾಲ್ ಯಾದವ್ ಗೋಲು ಬಾರಿಸಿ ಮುನ್ನಡೆ ತಂದುಕೊಟ್ಟರು. ಮುಂದೆ ಪಾಕ್ ಮಾಡಿದ ಹಲವು ಪ್ರಯತ್ನಗಳನ್ನು ಸುಲಭವಾಗಿ ತಡೆಯೊಡ್ಡಿದ ಭಾರತ 64ನೇ ನಿಮಿಷದಲ್ಲಿ ಎರಡನೇ ಗೋಲು ಬಾರಿಸಿತು. 20 ನಿಮಿಷ ಬಿಂದೇ ಗೋಲಿಗೆ ಪರದಾಡಿದ ಪಾಕ್ ಕ್ವಾರ್ಟರ್ ಫೈನಲ್‌ನಲ್ಲಿ ಭಾರೀ ಹಿನ್ನಡೆ ಅನುಭವಿಸಿತು. 84ನೇ ನಿಮಿಷದಲ್ಲಿ ಮೂರನೇ ಗೋಲು ಬಾರಿಸಿದ ಭಾರತ ಗೆಲುವಿನ ನಗೆ ಬೀರಿತು. ಪಾಕಿಸ್ತಾನ ನೋಡುತ್ತಲೇ ನಿಂತಿತು. ಪ್ರಯತ್ನ ಪಟ್ಟು ಸೊರಗಿತು, ಸೋತು ಸುಣ್ಣವಾಯಿತು.

ವಿಚಾರ ಸಂಕಿರಣದಲ್ಲಿ ಶತಾವಧಾನಿ ಆರ್.ಗಣೇಶ್ ವಿಶ್ಲೇಷಣೆ

ಜಗತ್ತಿನ ಪರಂಪರೆಗೆ ದೇಶದ ಶ್ರೇಷ್ಠ ಕೊಡುಗೆ



• **ಮೈಸೂರು:** ಪುರುಷಾರ್ಥಗಳು ವೈಶ್ವಿಕವಾಗಿ ದ್ದರೂ ತಪ್ಪಾಗಿ ನಿರೂಪಿಸಲಾಗಿದೆ. ಸಂಯಮಿ ಪ್ರತಿನಿಧಿಸಲಾಗಿಲ್ಲ. ಖ್ಯಾತ ವಿದ್ವಾಂಸರಾದ ಹಿರಿಯಣ್ಣ ಅವರು ಎಲ್ಲಾ ಮೌಲ್ಯಗಳ ನಿಜವಾದ ಸಾರ ಪುರುಷಾರ್ಥಗಳು. ಭಾರತೀಯ ತತ್ವಶಾಸ್ತ್ರವೆನ್ನುವುದು ಮೌಲ್ಯಗಳ ಅಧ್ಯಯನ ಎಂದು ಹೇಳಿದ್ದಾರೆ. ಪುರುಷಾರ್ಥಗಳು ಜಗತ್ತಿನ ಪರಂಪರೆಗೆ ಭಾರತದ ಶ್ರೇಷ್ಠ ಕೊಡುಗೆ ಎಂದು ವಿದ್ವಾಂಸ ಶತಾವಧಾನಿ ಡಾ.ಆರ್.ಗಣೇಶ್ ಹೇಳಿದರು.

ಪ್ರಜ್ಞಾಪ್ರವಾಹ ಕರ್ನಾಟಕದ ವತಿಯಿಂದ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಆಯೋಜಿಸಲಾದ 'ಏಕಾತ್ಮ ಮಾನವ ದರ್ಶನ: ಭಾರತದ ವಿಶ್ವದೃಷ್ಟಿ' ವಿಷಯದ ಕುರಿತಾದ ವಿಚಾರ ಸಂಕಿರಣದ ಎರಡನೇ ದಿನದ ಮೊದಲನೇ ಅವಧಿಯಲ್ಲಿ ಅವರು ಮಾತನಾಡಿ, ಪುರುಷಾರ್ಥ ಎನ್ನುವುದು ಪ್ರತಿಯೊಬ್ಬರಲ್ಲೂ ಅಡಗಿರುವ ಚೈತನ್ಯ. ಪ್ರಷ್ಠೆ.ಪುರ ಎಂದರೆ ದೇಹ. ದೇಹದೊಳಗೆ ವಾಸಿಸುವುದು 'ಪುರುಷ'. ಹಾಗಾಗಿ ಲಿಂಗಬೇಧವಿಲ್ಲದೇ ಎಲ್ಲರೂ ಪುರುಷರೇ. ಜೀವವಿರುವ ಎಲ್ಲವೂ ಪುರುಷ. ಯಾವುದು ಈ ವಾತಾವರಣದಲ್ಲಿ ಕೆಲಸಮಾಡಲು ಪ್ರೇರಣೆಯನ್ನು ನೀಡುತ್ತದೆಯೋ ಅದುವೇ ಪ್ರಕೃತಿ ಎಂದರು.

ಸಮಾನತೆಯ ಕುರಿತು ಎಲ್ಲಾ ಕಡೆ ಚರ್ಚೆಯಾಗುತ್ತಿರುವಾಗ "ಪುರುಷಾರ್ಥ" ಎನ್ನುವುದು ಪುರುಷ ಪ್ರಧಾನ ವಿಷಯವಾಗುವುದಿಲ್ಲವೇ? ಎನ್ನುವ ಪ್ರಶ್ನೆಯನ್ನು ಅನೇಕರು ಎತ್ತುತ್ತಾರೆ. ಇದು ಭಾರತೀಯಪರಂಪರೆಯನ್ನು ಇತರರು ಮತ್ತು ನಮ್ಮವರೇ ಹೇಗೆ ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ ಎನ್ನುವುದನ್ನು ತಿಳಿಸುತ್ತದೆ. ಆದರೆ ಇಂತಹ ಪ್ರಶ್ನೆಗಳಿಗೆ ಸಮರ್ಥವಾದ ಉತ್ತರವನ್ನೂ ನೀಡಬೇಕಾದ ಜವಾಬ್ದಾರಿ ನಮ್ಮ ಮೇಲಿದೆ ಎಂದು ಅಭಿಪ್ರಾಯಪಟ್ಟರು.

ಪುರುಷಾರ್ಥಗಳು ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ನಾಲ್ಕು ತತ್ವಗಳನ್ನುಹೊಂದಿದೆ. ಸನಾತನ ಧರ್ಮದಲ್ಲಿ ಆಸೆ ಪಾಪವಲ್ಲ, ಅದು ಮೌಲ್ಯಯುತವಾಗಿರಬೇಕು. ಅರಿಷಡ್ ವರ್ಗದಲ್ಲೂ ಕಾಮದ ಉಲ್ಲೇಖವಾಗುತ್ತದೆ. ಧರ್ಮದ ಚೌಕಟ್ಟಿನಲ್ಲಿದ್ದರೆ ಅದು ಪುರುಷಾರ್ಥ. ಧರ್ಮದ ಚೌಕಟ್ಟಿಲ್ಲದೇ ಇದ್ದರೆ ಅದು ಅರಿಷಡ್ವರ್ಗದ ಮೊದಲ ವಿಷಯವಾಗುತ್ತದೆ. ಧರ್ಮವೆನ್ನುವುದು ವೈಶ್ವಿಕ ಕಲ್ಪನೆ, ಅದು ರಿಲಿಜನ್ ನೊಂದಿಗೆಯಾವ ಸಂಬಂಧವನ್ನೂ ಹೊಂದಿಲ್ಲ, ಧರ್ಮ ಎನ್ನುವುದನ್ನು ರಿಲಿಜನ್ ಎಂದು ಅನುವಾದಿಸಿರುವುದು ಸನಾತನ ಧರ್ಮಕ್ಕೆ ಮಾಡಿರುವ ಘೋರ ಅಪಚಾರ ಎಂದರು. ಧರ್ಮದ ವಿರುದ್ಧವಲ್ಲದ ಆಸೆಪಾಲಿಸಬಹುದಾದ ಮೌಲ್ಯವಾಗುತ್ತದೆ. ಧರ್ಮದ ವಿರುದ್ಧವಾದ ಆಸೆ ಕೋಟಿಕೋಟಿಯ ಶತ್ರುವಾಗುತ್ತದೆ. ಗೌರವದ ತೃಪ್ತಿಯ ವ್ಯವಸ್ಥೆಯನ್ನು ಅರ್ಥವೆನ್ನುತ್ತೇವೆ. ಅರ್ಥ ಮತ್ತು ಕಾಮದೆಲ್ಲಾ ಆಯಾಮವನ್ನು ಬೆಸೆಯುವ ಕೈದೀವಿಗೆಯಾಗಿ ಧರ್ಮ ಕಾರ್ಯನಿರ್ವಹಿಸುತ್ತದೆ. ಸಾಕ್ಷಾತ್ಕಾರದ ಸ್ಥಿತಿಯೇ ಮೋಕ್ಷ. ಪ್ರಜ್ಞಾಪ್ರವಾಹದ ಯುವ ಆಯಾಮದ ಕರ್ನಾಟಕ ಉತ್ತರ ಪ್ರಾಂತ ಸಂಯೋಜಕ ಪುನೀತ್ಬಿದಿರೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ವಿವಿಯಲ್ಲಿ ₹71.45 ಕೋಟಿ ಕೊರತೆ

• **ಮೈಸೂರು:** ಇಲ್ಲಿನ ಮೈಸೂರು ವಿಶ್ವವಿದ್ಯಾಲಯದ 2026-27ನೇ ಸಾಲಿನ ಅಂದಾಜು 71.45 ಕೋಟಿ ಕೊರತೆ ಬಜೆಟ್‌ನ್ನು ಗುರುವಾರ ಮಂಡಿಸಲಾಯಿತು.

ನಗರದಲ್ಲಿರುವ ವಿವಿಯ ಕ್ರಾಫರ್ಡ್ ಭವನದಲ್ಲಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಧ್ಯಕ್ಷತೆಯಲ್ಲಿ ನಡೆದ ಶಿಕ್ಷಣ ಮಂಡಳಿಯ ವಿಶೇಷ ಸಭೆಯಲ್ಲಿ ವಿವಿಯ ಪ್ರಭಾರ ಹಣಕಾಸು ಅಧಿಕಾರಿ ಪ್ರೊ.ಮಂಜುನಾಥ್ ಅವರು ಕೊರತೆ ಬಜೆಟ್‌ನ್ನು ಮಂಡಿಸಿದರು. 'ಪ್ರವೇಶ, ನೋಂದಣಿ, ಸಂಯೋಜನೆ, ಪರೀಕ್ಷಾ ಚಟುವಟಿಕೆಗಳು ಮೊದಲಾದ ಶುಲ್ಕದಿಂದ, ವಿಶ್ವವಿದ್ಯಾಲಯದ ವಿವಿಧ ಆಸ್ತಿಗಳಿಂದ ಹಾಗೂ ಇತರ ಮೂಲವಾದ ಒಟ್ಟು 108.75 ಕೋಟಿ ರೂ. ಆಂತರಿಕ ಆದಾಯ ನಿರೀಕ್ಷಿಸಲಾಗಿದೆ. ಇದರಿಂದ ವೇತನ ಭತ್ಯೆಗಳು, ಸಾಮಾನ್ಯ ಆಡಳಿತ ವೆಚ್ಚಗಳು ಹಾಗೂ ಇನ್ನುಳಿದ ನಿರೀಕ್ಷಿತ ಯೋಜನೇತರ ವೆಚ್ಚಗಳನ್ನು ಪರಿಗಣಿಸಿ ರೂ. 108.54 ಕೋಟಿಗೆ ಬಜೆಟ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ' ಎಂದು ತಿಳಿಸಿದರು.

ದತ್ತಿ ನಿಧಿ ಹೊರತುಪಡಿಸಿ ವಿವಿಧ ಮೂಲಗಳಿಂದ ಒಟ್ಟಾರೆ ಅಂದಾಜು 384.28 ಕೋಟಿ ರೂ. ಆದಾಯವನ್ನು ನಿರೀಕ್ಷಿಸಲಾಗಿದೆ. ಒಟ್ಟು 438 ಕೋಟಿ ರೂ. ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ. 2026-27ನೇ ಸಾಲಿನಲ್ಲಿ ವಿವಿಯಿಂದ ನಿವೃತ್ತರಾಗುವ ನೌಕರರ ಪಿಂಚಣಿಗಾಗಿ 171.45 ಕೋಟಿ ರೂ. ನೀಡುವಂತೆ ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿತ್ತು. ಸರ್ಕಾರವು 100 ಕೋಟಿ ರೂ. ಬಿಡುಗಡೆ ಮಾಡಿದೆ. ಇದರಿಂದಾಗಿ ಪಿಂಚಣಿ ಸೌಲಭ್ಯಗಳಿಗಾಗಿ 71.45 ಕೋಟಿ ರೂ. ಕೊರತೆ ಎದುರಿಸುವಂತಾಗಿದೆ' ಎಂದು ಹೇಳಿದರು.

ರಾಜ್ಯ ಸರ್ಕಾರದಿಂದ ಕಾಯಂ ಸಿಬ್ಬಂದಿ ವೇತನ ಹಾಗೂ ಪಿಂಚಣಿಗೆ 222.48 ಕೋಟಿ ರೂ. ಮಂಜೂರಾಗಿದೆ. ಅಭಿವೃದ್ಧಿ ಅನುದಾನ 10 ಕೋಟಿ, ಪರಿಶಿಷ್ಟ ಜಾತಿ ಹಾಗೂ ವರ್ಗದ ವಿದ್ಯಾರ್ಥಿಗಳಿಗೆ 6 ಕೋಟಿ ಅನುದಾನ ಮಂಜೂರಾತಿಯನ್ನು ರಾಜ್ಯ ಸರ್ಕಾರದಿಂದ ನಿರೀಕ್ಷಿಸಿ, ಒಟ್ಟು 238.57 ಕೋಟಿ ರೂ. ಆದಾಯವಾಗಿ ಪರಿಗಣಿಸಲಾಗಿದೆ' ಎಂದು ಮಾಹಿತಿನೀಡಿದರು. 111ನೇವರ್ಷಕ್ಕೆಕಾಲಿಡುತ್ತಿರುವ ವಿ.ವಿಯಲ್ಲಿ, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಕಾಯಂ ಉದ್ಯೋಗಿಗಳ (ಬೋಧಕ-200 ಹಾಗೂ ಬೋಧಕೇತರ 400) ವೇತನಕ್ಕಾಗಿ 122.48 ಕೋಟಿ ರೂ. ನಿಗದಿಪಡಿಸಲಾಗಿದೆ. ಇದನ್ನು ಎಚ್‌ಆರ್‌ಎಂಎಸ್ ಪೋರ್ಟಲ್ ಮೂಲಕ ನೌಕರರಿಗೆ ನೇರವಾಗಿ 'ಕೆ-2' ಖಾತೆಯಿಂದ ಜಮಾ ಮಾಡಲಾಗುತ್ತಿದೆ. ಪ್ರಸ್ತುತ 1,864 ಪಿಂಚಣಿ,ಕುಟುಂಬ ಪಿಂಚಣಿದಾರರು ಮಾಸಿಕ ಪಿಂಚಣಿ ಪಡೆಯುತ್ತಿದ್ದಾರೆ. 2026-27ನೇ ಸಾಲಿಗೆ ಪಿಂಚಣಿದಾರರ ಸಂಖ್ಯೆ 1,906 ಆಗಲಿದೆ. ಪ್ರಸ್ತುತ ಸಾಲಿನಲ್ಲಿ 42 ಉದ್ಯೋಗಿಗಳು (18 ಬೋಧಕರು, 24 ಬೋಧಕೇತರರು) ನಿವೃತ್ತರಾಗುತ್ತಿದ್ದಾರೆ. ಹೀಗಾಗಿ, ಪಿಂಚಣಿಗಾಗಿ 171.45 ಕೋಟಿ ರೂ. ನಿಗದಿಪಡಿಸಲಾಗಿದೆ. ಸರ್ಕಾರದಿಂದ 100 ಕೋಟಿ ರೂ. ಬರುವುದರಿಂದಾಗಿ 6 71.45 ಕೋಟಿ ರೂ. ಕೊರತೆ ಎದುರಿಸುವಂತಾಗಿದೆ' ಎಂದು ಸರ್ಕಾರದಿಂದ 100 ಕೋಟಿರೂ. ಬರುವುದರಿಂದಾಗಿ 71.45 ಕೋಟಿ ರೂ. ಕೊರತೆ ಎದುರಿಸುವಂತಾಗಿದೆ' ಎಂದು ವಿವರಿಸಿದರು.

ಸಿನಿ ದಿಗಂತ

ಇಂದಿನಿಂದ ಆಕ್ಷನ್-ಥ್ರಿಲ್ಲರ್ ಆಯುಧ

ಡೇಂಜರ್ ಝೋನ್ ಖ್ಯಾತಿಯ ನಟ, ನಿರ್ದೇಶಕ ದೇವರಾಜ್ ಕುಮಾರ್ ಅವರ ನಿರ್ಮಾಣ, ನಿರ್ದೇಶನ ಹಾಗೂ ನಟನೆಯ ಆಯುಧ ಚಿತ್ರ ತನ್ನ ಟ್ರೇಲರ್ ಮೂಲಕವೇ ಚಿತ್ರರಂಗದಲ್ಲಿ ದೊಡ್ಡ ಮಟ್ಟದ ಕುತೂಹಲ ಹುಟ್ಟುಹಾಕಿದೆ.

ಈಗಾಗಲೇ ತನ್ನ ಟೀಸರ್ ಹಾಗೂ ಹಾಡುಗಳ ಮೂಲಕ ಜನಪ್ರಿಯವಾಗಿರುವ ಈ ಚಿತ್ರ ಮಾರ್ಚ್ 27ರ ಇಂದಿನಿಂದ ರಾಜ್ಯಾದ್ಯಂತ ಬಿಡುಗಡೆಯಾಗಿದೆ.

ಕಳೆದ ಎರಡು ದಶಕಗಳಿಂದ ಮೇಕಪ್ ಕಲಾವಿದನಾಗಿ ಕನ್ನಡ ಚಿತ್ರರಂಗದೊಂದಿಗೆ ನಂಟು ಹೊಂದಿರುವ ದೇವರಾಜ್‌ಕುಮಾರ್ ಡೇಂಜರ್ ಝೋನ್ ಚಿತ್ರದ ಮೂಲಕ ನಿರ್ದೇಶಕನಾಗಿ ಡೆಬ್ಯೂ ಚಿತ್ರ ಮಾಡಿದ್ದರು, ಮೂರು ವರ್ಷಗಳ ಹಿಂದೆ ತಾಜ್ ಮಹಲ್ 2 ಎಂಬ ಚಿತ್ರದಲ್ಲಿ ನಾಯಕನಾಗಿ ನಟಿಸಿ ಹೀರೋ ಕೂಡ ಆದರು. ಆ ಚಿತ್ರ ನಿರೀಕ್ಷಿಸಿದಷ್ಟು ಯಶಸ್ಸು ತಂದುಕೊಡದೆ ನಷ್ಟವಾಯಿತು. ಇನ್ನು ಮುಂದೆ ಸಿನಿಮಾ ಮಾಡುವುದೇ ಬೇಡ ಅಂದುಕೊಂಡರೂ, ಆ ನಿರ್ಧಾರ ತುಂಬಾ ದಿನ ಉಳಿಯಲಿಲ್ಲ, ಎರಡು ವರ್ಷಗಳ ಹಿಂದೆ ಆಯುಧ ಎಂಬ ಚಿತ್ರವನ್ನು ಪ್ರಾರಂಭಿಸಿದ್ದರು. ಚಿತ್ರರಂಗದಲ್ಲಿ ಮೇಕಪ್ ಮಾಡಿ ದುಡಿದ ಹಣದಿಂದ ಈಗ ಆಯುಧ ಚಿತ್ರವನ್ನು ನಿರ್ಮಾಣ ಮಾಡಿ ತೆರೆಗೆ ತರುತ್ತಿದ್ದಾರೆ, ಈ ಚಿತ್ರದಲ್ಲಿ ದೇವರಾಜ್ ಕುಮಾರ್ ಅವರೇ ನಿರ್ದೇಶನ ಮಾಡುವುದರ ಜೊತೆಗೆ ನಾಯಕನಾಗಿಯೂ ಅಭಿನಯಿಸಿದ್ದಾರೆ.

ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ಮಸ್ಕಿರ್ ನವಲಗುಂದ ಅವರು ಹಾಡುಗಳನ್ನು ಬರೆದಿದ್ದಾರೆ. ಸ್ಟೀವನ್ ಸತೀಶ್, ಮನದೀಪ್ ಹಾಗೂ ಮಂಜು ಸೇರಿ ಮೂವರು ಸಂಗೀತ ನಿರ್ದೇಶಕರು ಹಾಡುಗಳನ್ನು ಕಂಪೋಜ್ ಮಾಡಿದ್ದಾರೆ. ವಿಕಾಸ್ ಮೂರ್ತಿ ಈ ಚಿತ್ರದ ಛಾಯಾಗ್ರಾಹಕರು. ಅಮೃತ ಹಾಗೂ ಸಂಚಿತ ವಿಶ್ವ ಚಿತ್ರದ ನಾಯಕಿಯರಾಗಿ ಕಾಣಿಸಿಕೊಂಡಿದ್ದಾರೆ. ಈ ಚಿತ್ರದ ಹಾಡುಗಳು, ಟೀಸರ್ ಹಾಗೂ ಟ್ರೇಲರ್ ಸಿರಿ ಮ್ಯೂಸಿಕ್‌ನಲ್ಲಿ ನೋಡಲು ಲಭ್ಯವಿದೆ. ಇಂದಿನಿಂದ ಈ ಚಿತ್ರ ಲಿಖಿತ್ ಫಿಲಂಸ್ ಮೂಲಕ ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ಇನ್ನು ಈ ಚಿತ್ರದಲ್ಲಿ ಖಳನಾಯಕನಾಗಿ ಸೂರ್ಯಪ್ರವೀಣ್, ರಘುರಾಜ್ ಮಲ್ನಾಡ್, ಸುನೀಲ್ ಬೀರೂರು, ನಾರಾಯಣ್, ಸುರೇಂದ್ರ ಕುಮಾರ್ ಸೇರಿದಂತೆ ಮುಂತಾದ ಕಲಾವಿದರು ನಟಿಸಿದ್ದಾರೆ, ಚಿತ್ರವನ್ನು ಲಿಖಿತ್ ಫಿಲಂಸ್ ಮೂಲಕ ವಿತರಕ ರಮೇಶ್ ಬಾಬು ಅವರು ರಿಲೀಸ್ ಮಾಡುತ್ತಿದ್ದಾರೆ.





ಮಾಫಿಯಾ ಏ.4ಕ್ಕೆ ರಿಲೀಸ್ ಡೇಟ್

ಬೆಂಗಳೂರು ಕುಮಾರ್ ಫಿಲಂಸ್ ಮೂಲಕ ಕುಮಾರ್ ಬಿ. ಅವರ ನಿರ್ಮಾಣದ ಬಹುನಿರೀಕ್ಷಿತ ಚಿತ್ರ ಮಾಫಿಯಾ ಬಿಡುಗಡೆಗೆ ಸದ್ಯದಲ್ಲೇ ದಿನಾಂಕ ನಿಗದಿಯಾಗಲಿದೆ, ಡೇರು ಡೈನಾಮಿಕ್ ಪ್ರಿನ್ಸ್ ಪ್ರಜ್ವಲ್ ದೇವರಾಜ್ ಅಭಿಮಾನಿಗಳು ಬಹು ದಿನಗಳಿಂದ ಕಾಯುತ್ತಿದ್ದ ಚಿತ್ರದ ಬಿಡುಗಡೆಗೆ ಸದ್ಯದಲ್ಲೇ ಹೊಸ ಮುಹೂರ್ತ ನಿಗದಿಯಾಗಲಿದೆ, ಏಪ್ರಿಲ್ 4ರಂದು 11.11ಕ್ಕೆ ಮಾಫಿಯಾ ಚಿತ್ರದ ರಿಲೀಸ್ ಡೇಟ್ ಅನೌನ್ಸ್ ಆಗಲಿದೆ, ಪ್ರಜ್ವಲ್ ದೇವರಾಜ್, ಅದಿತಿ ಪ್ರಭುದೇವ ನಾಯಕ, ನಾಯಕಿಯಾಗಿ ನಟಿಸಿರುವ ಮಾಸ್ ಎಂಟರ್‌ಟೈನರ್ ಚಿತ್ರವು ಸದ್ಯದಲ್ಲೇ ಬಿಡುಗಡೆಯಾಗಲಿದೆ, ಮಮ್ಮಿ ಖ್ಯಾತಿಯ ಲೋಹಿತ್ ಹೆಚ್. ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಈ ಚಿತ್ರಕ್ಕೆ ಪ್ರಾದೇಶಿಕ ಸೆನ್ಸಾರ್ ಮಂಡಳಿ ಯಾವುದೇ ಕಟ್, ಮ್ಯೂಟ್ ಹೇಳದೆ ಯು/ಎ ಪ್ರಮಾಣ ಪತ್ರ ನೀಡಿದೆ.

ಜನ ಸಾಮಾನ್ಯರನ್ನು ವಂಚಿಸುತ್ತಿರುವ ಮೆಡಿಕಲ್ ಮಾಫಿಯಾ ಸುತ್ತ ನಡೆಯುವ ವಿಭಿನ್ನ ಕಥಾಹಂದರ ಇರುವ, ಆಕ್ಷನ್, ಥ್ರಿಲ್ಲರ್ ಜಾನರ್ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ಬೆಂಗಳೂರು, ಮೈಸೂರು ಹಾಗೂ ಹೈದರಾಬಾದ್‌ನ ರಾಮೋಜಿ ಫಿಲಂ ಸಿಟಿಯಲ್ಲಿ ಚಿತ್ರೀಕರಣ ನಡೆಸಲಾಗಿದೆ.

ಮಾಫಿಯಾ ಚಿತ್ರವು ಆಕ್ಷನ್ ಪ್ರಿಯರಿಗೆ ಭರ್ಜರಿ ರಸದೌತಣ ನೀಡಲಿದೆ. ಆರಂಭದಿಂದಲೂ ಸಾಕಷ್ಟು ಕುತೂಹಲ ಹುಟ್ಟಿಸಿರುವ ಈ ಚಿತ್ರದ ಬಿಡುಗಡೆಗೆ ಪ್ರಜ್ವಲ್ ದೇವರಾಜ್ ಅಭಿಮಾನಿಗಳು ಕೂಡ ಕಾತುರದಿಂದ ಕಾಯುತ್ತಿದ್ದಾರೆ. ಈಗಾಗಲೇ ರಿಲೀಸಾಗಿರುವ ತುಂಬಾನೇ ಕೇಳಲಾರೆ ಹಿಂದೆ ಬಿದ್ದು ಎದ್ದುವ ಮೆಲೋಡಿ ಸಾಂಗ್ ಸಂಗೀತ ಪ್ರಿಯರ ಮನಗೆದ್ದಿದ್ದು, ಅತಿ ಹೆಚ್ಚಿನ ಸಂಖ್ಯೆಯಲ್ಲಿ ವೀಕ್ಷಣೆಯಾಗುವ ಮೂಲಕ ದೊಡ್ಡ ಮಟ್ಟದಲ್ಲಿ ವೈರಲ್ ಆಗಿದೆ. ಪ್ರಮೋದ್ ಮರವಂತೆ ಅವರ ಸಾಹಿತ್ಯ ಹಾಗೂ ಅನೂಪ್ ಸೀಳಿನ್ ಅವರ ಸಂಗೀತ ಸಂಯೋಜನೆ ಈ ಹಾಡಿಗಿದೆ,

ಅಪಾರ ವೆಚ್ಚದಲ್ಲಿ ಅದ್ದೂರಿಯಾಗಿ ನಿರ್ಮಾಣವಾಗಿರುವ ಈ ಚಿತ್ರದಲ್ಲಿ ಮೈನವಿರೇಳಿಸುವ ಐದು ಸಾಹಸ ಸನ್ನಿವೇಶಗಳಿವೆ. ಈ ಚಿತ್ರಕ್ಕಾಗಿಯೇ ನಾಯಕ ನಟ ಪ್ರಜ್ವಲ್ ದೇವರಾಜ್ ಅವರು ಸಾಕಷ್ಟು ಶ್ರಮವಹಿಸಿದ್ದಾರೆ. ನಾಲ್ಕು ಹಾಡುಗಳಿರುವ ಈ ಚಿತ್ರಕ್ಕೆ ಅನೂಪ್ ಸೀಳಿನ್ ಹಾಗೂ ಗಗನ್ ಭಡೇರಿಯಾ ಅವರ ಸಂಗೀತ ನಿರ್ದೇಶನವಿದೆ. ಎಸ್. ಪಾಂಡಿಕುಮಾರ್ ಅವರ ಛಾಯಾಗ್ರಹಣವಿರುವ ಈ ಚಿತ್ರದ ತಾರಾಬಳಗದಲ್ಲಿ ಪ್ರಜ್ವಲ್ ದೇವರಾಜ್, ಅದಿತಿ ಪ್ರಭುದೇವ, ದೇವರಾಜ್, ಸಾಧು ಕೋಕಿಲ, ಶೈನ್ ಶೆಟ್ಟಿ, ವಿಜಯ್ ಚೆಂಡೂರ್, ವಾಸುಕಿ ವೈಭವ್ ಮುಂತಾದವರಿದ್ದಾರೆ.

ವೈದ್ಯಕೀಯ ಕ್ಷೇತ್ರದಲ್ಲಿ ಅತ್ಯಂತ ವ್ಯವಸ್ಥಿತವಾಗಿ ನಡೆಯುತ್ತಿರುವ ಆರ್ಗನ್ ಮಾಫಿಯಾವನ್ನು ಚಿತ್ರದ ನಾಯಕ ಹೇಗೆ ಬೇಧಿಸುತ್ತಾನೆ ಎಂಬ ಕಥೆ ಈ ಚಿತ್ರದಲ್ಲಿದೆ. ಆಕ್ಷನ್ ಜಾನರ್ ಕಥಾಹಂದ ಹೊಂದಿರುವ ಈ ಚಿತ್ರಕ್ಕೆ ಬೆಂಗಳೂರು, ಮೈಸೂರು ಹಾಗೂ ಹೈದರಾಬಾದ್‌ನಲ್ಲಿ ನೂರಕ್ಕೂ ಹೆಚ್ಚು ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ. ಚಿತ್ರದ ಪಾತ್ರಕ್ಕಾಗಿ ನಾಯಕ ಪ್ರಜ್ವಲ್ ದೇವರಾಜ್ ಅವರಂತೂ ಸಾಕಷ್ಟು ಪರಿಶ್ರಮವಹಿಸಿದ್ದಾರೆ. ಕ್ಲೈಮ್ಯಾಕ್ಸ್ ಭಾಗದಲ್ಲಿ ಒಂದು ಹೈವೋಲ್ಟೇಜ್ ಆಕ್ಷನ್ ಸೀಕ್ವೆನ್ಸ್ ಇದ್ದು, ಜೊತೆಗೆ ಮಾಸ್ತಿ ಅವರ ಅದ್ಭುತ ಸಂಭಾಷಣೆಗಳು ಈ ಚಿತ್ರದ ಮತ್ತೊಂದು ಹೈಲೈಟಾಗಿದೆ.

ಸದ್ಯದಲ್ಲೇ ಟ್ರೈಲರ್ ಬಿಡುಗಡೆ



ಕೆಡಿ ಚಿತ್ರದಲ್ಲಿ ಕಾಲಭೈರವನಾಗಿ ಕಿಚ್ಚ ಸುದೀಪ್



ಜೋಗಿ ಪ್ರೇಮ್ ನಿರ್ದೇಶನದ ಕೆಡಿ ಸಿನಿಮಾದ ಸರ್ಲೇ ನಿನ್ನ ಸೆರಗ ವಿವಾದಾತ್ಮಕ ಹಾಡಿನ ಬಗ್ಗೆ ಲೋಕಸಭೆಯಲ್ಲಿ ಸಹ ಚರ್ಚೆ ನಡೆದು ಆ ಚಿತ್ರ ರಾಷ್ಟ್ರ ಮಟ್ಟದಲ್ಲಿ ಸುದ್ದಿಯಾಯಿತು. ನಿರ್ದೇಶಕ ಜೋಗಿ ಪ್ರೇಮ್ ಬೇಷರತ್ ಕ್ಷಮೆ ಕೇಳಿ, ಆ ಹಾಡಿಗೆ ಬೇರೆ ಸಾಹಿತ್ಯ ರಚಿಸಿ ಬಿಡುಗಡೆ ಮಾಡುವುದಾಗಿಯೂ ಹೇಳಿದರು, ನಂತರ ಸರ್ಕಾರ ಆ ಹಾಡನ್ನು ಬ್ಯಾನ್ ಮಾಡಿಯೂ ಆಯಿತು. ಈ ಹಾಡಲ್ಲಿ ಅಭಿನಯಿಸಿದ್ದ ಬಾಲಿವುಡ್ ನಟಿ ನೋರಾ ಫತೇಹಿ, ಹಾಡಿಗೆ ದನಿಯಾಗಿದ್ದ ಗಾಯಕಿ ಮಂಗ್ಲಿ ಕೂಡ ನಿರ್ದೇಶಕ ಪ್ರೇಮ್ ವಿರುದ್ಧವೇ ಹೇಳಿಕೆ ಕೊಟ್ಟಿದ್ದರು, ಇದನ್ನೆಲ್ಲ ಮರೆಸಲು ನಿರ್ದೇಶಕ ಪ್ರೇಮ್ ಈಗ ಕೆಡಿ ಚಿತ್ರದ ಹೊಸ ಅಪ್‌ಡೇಟ್‌ವೊಂದನ್ನು ನೀಡಿದ್ದಾರೆ, ಈವರೆಗೆ ಕೆಡಿ ಚಿತ್ರದಲ್ಲಿ ಹ್ಯಾಟ್ರಿಕ್ ಹೀರೋ ಶಿವರಾಜ ಕುಮಾರ್ ಅವರೂ ನಟಿಸಿದ್ದಾರೆ ಎನ್ನಲಾಗಿತ್ತು, ಆದರೆ ಈಗ ಕಿಚ್ಚ ಸುದೀಪ್ ಪ್ರಮುಖ ಪಾತ್ರದಲ್ಲಿ ನಟಿಸಿರುವ ಬಗ್ಗೆ ಮಾಹಿತಿ ಹೊರಬಿದ್ದಿದೆ, ಕಿಚ್ಚ ಸುದೀಪ್ ಅವರ ಕ್ಯಾರೆಕ್ಟರ್ ನೂತನ ಪೋಸ್ಟರ್ ಕೂಡ ರಿಲೀಸಾಗಿದೆ.

ಕಿಚ್ಚ ಸುದೀಪ್ ಅವರು ಕೆಡಿ ಚಿತ್ರದಲ್ಲಿ ವಿಶೇಷ ಪಾತ್ರವನ್ನು ನಿರ್ವಹಿಸಿದ್ದಾರೆ. ಅವರ ಪಾತ್ರದ ಹೆಸರು ಕಾಲಭೈರವ. ಈ ಕಾಲ ಭೈರವನ ಪೋಸ್ಟರನ್ನು ಚಿತ್ರತಂಡವೀಗ ಬಿಡುಗಡೆ ಮಾಡಿದೆ. ವಾರಣಾಸಿಯ ಹಿನ್ನೆಲೆಯಲ್ಲಿ ಕಿಚ್ಚ ಸುದೀಪ್ ಅವರು ರುದ್ರಾಕ್ಷಿ ಮಾಲೆಯನ್ನು ಹಿಡಿದು ನಿಂತಿರುವ ಹೊಸ ಪೋಸ್ಟರನ್ನು ಕೆವಿಎನ್ ಪ್ರೊಡಕ್ಷನ್ಸ್ ಸಂಸ್ಥೆ ಹಂಚಿಕೊಂಡಿದೆ. ಕಾಲಭೈರವ ಈ ಹೆಸರೇ ಭಯ ಹುಟ್ಟಿಸುತ್ತದೆ ಎಂಬ ಟ್ಯಾಗ್ ಲೈನ್ ಇದಕ್ಕಿದೆ.

ಜೋಗಿ ಪ್ರೇಮ್ ಅವರ ದಿ ವಿಲನ್ ಚಿತ್ರದಲ್ಲಿ ಶಿವಣ್ಣ, ಸುದೀಪ್ ಒಟ್ಟಿಗೇ ನಟಿಸಿದ್ದರು. ಇದೀಗ ಕೆಡಿ ಚಿತ್ರದಲ್ಲಿ ಅವರು ಅತಿಥಿ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಧ್ರುವ ಸರ್ಜಾ ಅವರ ಜತೆ ಮೊದಲಬಾರಿಗೆ ಕಿಚ್ಚ ಸುದೀಪ್ ಅವರು ಕಾಣಿಸಿಕೊಳ್ಳುತ್ತಿದ್ದಾರೆ.

ಕಿಚ್ಚ ಸುದೀಪ್ ಹಲವು ಸಿನಿಮಾಗಳಲ್ಲಿ ಅತಿಥಿ ಪಾತ್ರಗಳನ್ನು ಮಾಡುತ್ತಲೇ ಬಂದಿದ್ದಾರೆ. ಈ ಹಿಂದೆ ಆರ್.ಚಂದ್ರು ನಿರ್ದೇಶನದ ಕಬ್ಜ ಚಿತ್ರದಲ್ಲೂ ಸಹ ಸುದೀಪ್ ನಟಿಸಿದ್ದರು. ಅದು ಚಿತ್ರಕಥೆಯಲ್ಲಿ ಬಹುಮುಖ್ಯ ಪಾತ್ರವಾಗಿತ್ತು. ಈಗ ಕೆಡಿ ಚಿತ್ರದಲ್ಲೂ ಸಹ ಸುದೀಪ್ ಅವರು ಕಾಣಿಸಿಕೊಂಡಿದ್ದಾರೆ. ಜೋಗಿ ಪ್ರೇಮ್ ನಿರ್ದೇಶನದ ಚಿತ್ರಗಳಲ್ಲಿ ಹಾಡುಗಳೇ ಹೈಲೈಟ್ ಆಗಿರುತ್ತವೆ, ಅದೇರೀತಿ ಕೆಡಿ ಚಿತ್ರದಲ್ಲೂ ಸಹ ಸಂಗೀತಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದ್ದು, ಅರ್ಜುನ್ ಜನ್ಯ ಇಡೀ ಚಿತ್ರದ ಮ್ಯೂಸಿಕ್‌ನಲ್ಲಿ ಮ್ಯಾಜಿಕ್ಕನ್ನೇ ಮಾಡಿದ್ದಾರೆ, ಶಿವ ಶಿವ ಹಾಡಲ್ಲಿ ಶಿವನ ವೈಭವೀಕರಣವನ್ನು ಗ್ರಾಫಿಕ್ ಮೂಲಕ ಅದ್ಭುತವಾಗಿ ಕಟ್ಟಿಕೊಡಲಾಗಿದೆ. ಭಜರಂಗಿ ಮೋಹನ್ ಈ ಹಾಡಿಗೆ ಕೊರಿಯೋಗ್ರಫಿ ಮಾಡಿದ್ದಾರೆ. ಇನ್ನು ಆಕಾಶ ಭೂಮಿ ಹಾಡಲ್ಲಿ ಸಹೋದರ ಬಾಂಧವ್ಯದ ಕುರಿತಂತೆ ಹೇಳುತ್ತ ಅಣ್ತಮ್ಮ ಜೋಡೆತ್ತು ಕಣೋ ಎಂಬ ಪದ ಬಳಸಲಾಗಿದೆ. ಈಗಾಗಲೇ ಈ ಹಾಡು ರಿಲೀಸಾದ ಕೆಲವೇ ಘಂಟೆಗಳಲ್ಲಿ 2 ಲಕ್ಷಕ್ಕೂ ಹೆಚ್ಚು ವೀಕ್ಷಣೆಯಾಗುವ ಮೂಲಕ ವೈರಲ್ ಆಗಿದೆ, ಇನ್ನು ಈ ಚಿತ್ರದಲ್ಲಿ ಧ್ರುವ ಸರ್ಜಾ ಅವರ ಜತೆ ನಾಯಕಿಯಾಗಿ ನಟಿ ರೀಷ್ಮಾ ನಾಣಯ್ಯ ನಟಿಸಿದ್ದಾರೆ.





ಅಂದಹಾಗೆ, 1970-75ರ ಸಮಯದಲ್ಲಿ ನಡೆದ ನೈಜಘಟನೆ ಆಧಾರಿತ ಗ್ಯಾಂಗ್ ಸ್ಟರ್ ಕಥೆ ಈ ಚಿತ್ರದಲ್ಲಿದೆ. ಚಿತ್ರೀಕರಣಕ್ಕಾಗಿಯೇ 20 ಎಕರೆಯಷ್ಟು ವಿಶಾಲವಾದ ಜಾಗದಲ್ಲಿ ಬಹು ಕೋಟಿ ವೆಚ್ಚದಲ್ಲಿ ಅದ್ದೂರಿ ಸೆಟ್ ಹಾಕಿ ಚಿತ್ರೀಕರಿಸಲಾಗಿದೆ. ಚಿತ್ರದ ಆರು ಕಲರ್‌ಫುಲ್ ಹಾಡುಗಳಿಗೆ ಆರು ಜನ ಕೊರಿಯಾಗ್ರಾಫರ್‌ಗಳು ಕೆಲಸ ಮಾಡಿದ್ದಾರೆ. ಇನ್ನು ಕೆಡಿ ಚಿತ್ರಕ್ಕೆ ವಿಕ್ರಾಂತ್ ರೋಣ ಖ್ಯಾತಿಯ ವಿಲಿಯಂ ಡೇವಿಡ್ ಅವರ ಕ್ಯಾಮೆರಾ ವರ್ಕ್ ಇದೆ. ಬಾಲಿವುಡ್‌ನ ಸಂಜಯ್ ದತ್, ಶಿಲ್ಪಾಶೆಟ್ಟಿ, ನೋರಾ ಫತೇಹಿ, ಸೇರಿದಂತೆ ಬಾಲಿವುಡ್‌ನ ಅನೇಕ ಕಲಾವಿದರು ಈ ಚಿತ್ರದಲ್ಲಿ ನಟಿಸಿದ್ದಾರೆ. ಜೊತೆಗೆ ಕ್ರೇಜಿಸ್ಟಾರ್ ರವಿಚಂದ್ರನ್, ನಟ ರಮೇಶ್ ಅರವಿಂದ್, ಅಭಿಜಿತ್ ಹೀಗೆ ಹೆಸರಾಂತ ಕಲಾವಿದರ ದಂಡೇ ಈ ಚಿತ್ರದಲ್ಲಿದೆ. ಧ್ರುವ ಸರ್ಜಾ, ರೀಷ್ಮಾ ನಾಣಯ್ಯ ನಾಯಕ, ನಾಯಕಿಯಾಗಿ ನಟಿಸಿರುವ ಕೆಡಿ ಚಿತ್ರ, ಏಪ್ರಿಲ್ 30ರಂದು ದೇಶಾದ್ಯಂತ ಅದ್ದೂರಿಯಾಗಿ ಬಿಡುಗಡೆಯಾಗಲಿದೆ.





Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26